CC-O. In Public Domain. Digitized by eGangotri

ನಮ್ಮ ವರ್ಷ ಭವಿಷ್ಯ 1992

ಹನ್ನೆರಡು ರಾಶಿಯವರ ವರ್ಷ ಪೂರ್ತಿ ಫಲಾಫಲಗಳು!

ಲೇಖಕರು: ಎಂ. ರತ್ನರಾಜ ಜೈನ್, ತಲ್ಲೂರು, ದ.ಕ.



Sri Vidyabharathi Book Centre, Sringeri

CC-O. In Public Domain. Digitized by eGangotri

ತಾ. ೧೭-೫-೧೯೯೦

ಷಷ್ಟ್ಯಬ್ದಿಪೂರ್ತಿ ಸಮಾರಂಭವನ್ನು

ಆಚರಿಸುತ್ತಿರುವ

ಶ್ರೀ ಮಾನ್ಯ ವೆಂಕಟರಾವ್ ಅವರಿಗೆ

ಮಂಗಲಾಶಂಸನ

ಮಾನ್ಯದಲಿ ಮನ್ನಣೆಯ ಪಡೆದ ವಂಶದಿ ಜನಿಸಿ
ಮಾನ್ಯಶಾಲೆಯಲೋದಿ ಕಲಿತು ವೃತ್ತಿಯಲಿ
ಪುಸ್ತಕ ವ್ಯಾಪಾರಿಯಾದ ವೆಂಕಟರಾವ್
ಧನ್ಯರೆನಿಸಿದರು ಸಂಸಂಸ್ಕೃತ ಸಮಾಜದಲಿ!

ಮಂಗಳೂರನು ಸೇರಿ ಎತ್ತರೆತ್ತರಕೇರಿ
ಪುಸ್ತಕಪ್ರಕಾಶನಕೆ ತೊಡಗಿ ಜನಮಾನ್ಯ–
ತುಳು ಕನ್ನಡದ ಹೊತ್ತಗೆಗಳನಚ್ಚಿಸುತ ಸರ್ವ
ಮಾನ್ಯರಾಗಿಪ ವೆಂಕಟರಾವ್ ಅವರಂ ಬಹುಮಾನ್ಯ!

ವಿವಿಧ ಭಾಷೆಯ ವೃತ್ತಪತ್ರಿಕೆ ಪುಸ್ತಕಗಳ ವಿತರಕರಾಗಿ
ನಗರ ಬಸ್‌ನಿಲ್ದಾಣದಲಿ ಜನತೆಗಾಗಿ
ಟೀಕಾದುದನು ಮಾಡಿಕೊಡುವೋರ್ವ ಮಹನೀಯ
ಮಿತ್ರ ವೆಂಕಟರಾವ್ ನಿಜಕು ಕರ್ಮಯೋಗಿ!

ಸೋದರರ ತೆರದಿರುವ ಶ್ರೀ ಪ್ರಭಾಕರ ಶೆಟ್ಟಿ
ಚಂದ್ರಶೇಖರ ಶೆಟ್ಟಿ ಅವರ ಸಹಕಾರ
ಆರುವತ್ತನೆಯ ಪರೆಯದೀಸಂಧಿಕಾಲದಲಿ
ಷಷ್ಟ್ಯಬ್ದಿಯುತ್ಸವಕೆ ಬಲವದಾಧಾರ!

ಸಾಧ್ವಿಯಹ ಸತಿಸಹಿತ, ಪದವಿಪಡೆದಿರ್ಪ ಸುತ
ಪುತ್ರಿಯರನಳಿಯಂದಿರಂ ಕೂಡಿ ಮುಂದದಿ
ಮೊಮ್ಮಕ್ಕಳನೇಕ ಬಂಧುಮಿತ್ರರ ಸಹಿತ
ಬಾಳ್ಗೆವೆಂಕಟರಾವ್ ಚಿರಂಕಾಲ ಸುಖದಿ!

ಮಾನ್ಯ ನಿತ್ಯಾನಂದ ನಿಲಯದಲಿ ನಡೆಯುತಿಹ
ಮಾನ್ಯ ವೆಂಕಟರಾವ್ ಅವರ ಷಷ್ಟ್ಯಬ್ದಿಪೂರ್ತಿ
ಸಂಸ್ಕಾರವಿಧಿ ಮಾನ್ಯ ದಂಪತಿಗಳಿಗೆ ಕೊಡಲಿ
ದೀರ್ಘಾಯುರಾರೋಗ್ಯ ಮಂಗಳ ಧವಳಕೀರ್ತಿ!

ವಿದ್ವಾನ್ ಸೊಡಂಕೂರು ತಿರುಮಲೇಶ್ವರ ಭಟ್ಟ

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಮ್ಮ ವರ್ಷ ಭವಿಷ್ಯ

1992

(ದ್ವಾದಶ ರಾಶಿಯವರ ಪ್ರತ್ಯೇಕ ಪ್ರತೀ ತಿಂಗಳ ಫಲಾಫಲಗಳು)

ಇಪ್ಪತ್ತೆರಡನೆಯ (22) ವರ್ಷದ ಪ್ರಕಟಣೆ

ಲೇಖಕರು:

ಎ. ರತ್ನ ರಾಜ ಜೈನ್, ತಲ್ಲೂರು (ದ.ಕ.)

ಪ್ರಕಾಶಕರು:



ದೂರವಾಣಿ: 27775

ಬೆಲೆ: ರೂ. 6/-

Sri Vidya Bharathi Book Centre, Sringeri

Sri Vidya Bharathi Book Centre, Bharathi Street, SRINGERI - 577 139.

CC-O. In Public Domain. Digitized by eGangotri

ಪ್ರಯಾಣಕ್ಕೆ ಮಾತ್ರ ಉಪಯುಕ್ತವಾದ ಆನಂದಾದಿ ಯೋಗಗಳು

ರವಿ	ಚಂದ್ರ	ಕುಜ	ಬುಧ	ಗುರು	ಶುಕ್ರ	ಶನಿ	ಯೋಗ	ಫಲ
ಅ	ಮೃ	ಆ	ಹ	ಪು	ಪು	ಶ್ರ	ಆನಂದ	ಕಾರ್ಯಸಿದ್ಧಿ
ಭ	ಆರ್	ಮ	ಚೆ	ಜ್ಯೆ	ಅಭಿ	ಪೂ	ಕಾಲದಂಡ	ಮೃತ್ಯು
ಕೃ	ಪುನ	ಪೂ	ಸ್ವಾ	ಮೂ	ಶ್ರ	ಧ	ಧೂಮ್ರ	ಅಸುಖ
ರೂ	ಪುಷ್ಯ	ಆ	ವಿ	ಪೂ	ಧ	ರೇ	ಪ್ರಜಾಪತಿ	ಸೌಖ್ಯ
ಮೃ	ಆ	ಹ	ಪು	ಪು	ಶ್ರ	ಪು	ಸೌಮ್ಯ	ಸೌಖ್ಯ
ಆರ್	ಮ	ಚೆ	ಜ್ಯೆ	ಅಭಿ	ಪುನ	ಭ	ಧ್ವಾಂಕ್ಷ	ಧನವ್ಯಯ
ಪುನ	ಪೂ	ಸ್ವಾ	ಮೂ	ಶ್ರ	ಧ	ಕೃ	ಧ್ವಜ	ಶುಭ
ಪುಷ್ಯ	ಆ	ವಿ	ಪೂ	ಧ	ರೇ	ರೂ	ಶ್ರೀವತ್ಸ	ಸಂಪತ್ತು
ಆ	ಹ	ಪು	ಪು	ಶ್ರ	ಪು	ಮೃ	ವಜ್ರ	ಕ್ಷಯ
ಮ	ಚೆ	ಜ್ಯೆ	ಅಭಿ	ಪುನ	ಭ	ಆರ್	ಮುದ್ಗರ	ಧನಹಾನಿ
ಪೂ	ಸ್ವಾ	ಮೂ	ಶ್ರ	ಧ	ಕೃ	ಪುನ	ಛತ್ರ	ರಾಜಸನ್ಮಾನ
ಆ	ವಿ	ಪೂ	ಧ	ರೇ	ರೂ	ಪುಷ್ಯ	ಮಿತ್ರ	ದೇಹಪುಷ್ಟಿ
ಹ	ಪು	ಪು	ಶ್ರ	ಪು	ಮೃ	ಆ	ಮಾನಸ	ಸಂತುಷ್ಟಿ
ಚೆ	ಜ್ಯೆ	ಅಭಿ	ಪುನ	ಭ	ಆರ್	ಮ	ಪದ್ಮ	ಧನಪ್ರಾಪ್ತಿ
ಸ್ವಾ	ಮೂ	ಶ್ರ	ಧ	ಕೃ	ಪುನ	ಪೂ	ಲಂಬಕ	ಕಾರ್ಯಹಾನಿ
ವಿ	ಪೂ	ಧ	ರೇ	ರೂ	ಪುಷ್ಯ	ಆ	ಉತ್ಪಾತ	ದ್ರವ್ಯನಾಶ
ಪು	ಪು	ಶ್ರ	ಪು	ಮೃ	ಆ	ಹ	ಮೃತ್ಯು	ಮರಣ
ಜ್ಯೆ	ಅಭಿ	ಪುನ	ಭ	ಆರ್	ಮ	ಚೆ	ಕಾಣ	ಕಾರ್ಯನಾಶ
ಮೂ	ಶ್ರ	ಧ	ಕೃ	ಪುನ	ಪೂ	ಸ್ವಾ	ಸಿದ್ಧಿ	ಕಾರ್ಯಸಿದ್ಧಿ
ಪೂ	ಧ	ರೇ	ರೂ	ಪುಷ್ಯ	ಆ	ವಿ	ಶುಭ	ಕಲ್ಯಾಣ
ಪು	ಶ್ರ	ಪು	ಮೃ	ಆ	ಹ	ಪು	ಅಮೃತ	ಲಾಭ
ಅಭಿ	ಪುನ	ಭ	ಆರ್	ಮ	ಚೆ	ಜ್ಯೆ	ಮುಸಲ	ಆಸುಖ
ಶ್ರ	ಧ	ಕೃ	ಪುನ	ಪೂ	ಸ್ವಾ	ಮೂ	ಗದಾ	ದುಃಖ
ಧ	ರೇ	ರೂ	ಪುಷ್ಯ	ಆ	ವಿ	ಪೂ	ಮಾತಂಗ	ಕುಲವೃದ್ಧಿ
ಶ್ರ	ಪು	ಮೃ	ಆ	ಹ	ಪು	ಪು	ರಾಕ್ಷಸ	ಮಹಾಕಷ್ಟ
ಪುನ	ಭ	ಆರ್	ಮ	ಚೆ	ಜ್ಯೆ	ಅಭಿ	ಚರ	ಕಾರ್ಯನಾಶ
ಪು	ಕೃ	ಪುನ	ಪೂ	ಸ್ವಾ	ಮೂ	ಶ್ರ	ಸ್ಥಿರ	ಕಾರ್ಯಲಾಭ
ರ	ರೂ	ಪುಷ್ಯ	ಆ	ವಿ	ಪೂ	ಧ	ವರ್ಧಮಾನ	ಮಮೃದ್ಧಿ
ಹ	ಶ್ರ	ಪೂ	ಪು	ಪು	ಜ್ಯೆ	ಮೂ	ಅಮೃತ	ಸಿದ್ಧಿಯೋಗ

Sri Vidyabharathi Book Centre, Sringeri

CC-O. In Public Domain. Digitized by eGangotri

ಗೌಳೀಪತನ ಫಲ (ಹಲ್ಲಿ ಬಿದ್ದ ಫಲ)

ಸ್ಥಾನ	ಪುರುಷರಿಗೆ	ಸ್ತ್ರೀಯರಿಗೆ
ಹಡೆಗೆ ಬಿದ್ದರೆ	ಧನಪ್ರಾಪ್ತಿ	ಧನನಾಶ
ನಡುತಲೆಗೆ	ಮರಣ	ಮೃತ್ಯು
ಮಸ್ತಕ ಜುಟ್ಟು	ಸುಖಪ್ರಾಪ್ತಿ	ಲಕ್ಷ್ಮಿಪ್ರಾಪ್ತಿ
ಕೂದಲುಗಂಟು	ರೋಗ	ರೋಗ
ಹುಬ್ಬುಗಳಲ್ಲಿ	ದ್ರವ್ಯನಾಶ	ಧನನಾಶ
ಹುಬ್ಬಿನಮಧ್ಯೆ	ದ್ರವ್ಯಲಾಭ	ಧನನಾಶ
ಬಲಕಣ್ಣಿನಲ್ಲಿ	ಶುಭ	ದುಃಖ
ಎಡಕಣ್ಣಿನಲ್ಲಿ	ಬಂಧನ	ಪತಿದರ್ಶನ
ಮುಖದಲ್ಲಿ	ಮೃಷ್ಟಾನ್ನ	ಮೃಷ್ಟಾನ್ನ
ಮೂಗಿನಮೇಲೆ	ಸೌಭಾಗ್ಯ	ಸೌಭಾಗ್ಯ
ಬಲಕಿವಿಯಲ್ಲಿ	ಲಾಭ	ಆಯುಕ್ಷಯ
ಎಡಕಿವಿಯಲ್ಲಿ	ದುಃಖ	ಸ್ವರ್ಣಲಾಭ
ಬಲಕೆನ್ನೆಯಲ್ಲಿ	ದುಃಖ	ಸ್ವರ್ಣಲಾಭ
ಬಲಕೆನ್ನೆಯಲ್ಲಿ	ಇಷ್ಟಲಾಭ	ಗಂಡನಿಗೆಕಷ್ಟ
ಎಡಕೆನ್ನೆಯಲ್ಲಿ	ಪ್ರಿಯದರ್ಶನ	ಮಿತ್ರದರ್ಶನ
ಕೆಳತುಟಿಯಲ್ಲಿ	ಸಂಪತ್ತು	ಸಂಪತ್ತು
ಮೇಲ್ತುಟಿಯಲ್ಲಿ	ಕಲಹ	ಕಲಹ
ತುಟಿಯ ಕೆಳಗೆ	ರಾಜದ್ವೇಷ	ಕಲಹ
ಕೊರಳಿನಲ್ಲಿ	ಮಿತ್ರಾಗಮನ	ಭೂಲಾಭ
ಕೊರಳಿನ ಹಿಂದೆ	ಶತ್ರುಭಯ	ನಿತ್ಯಕಲಹ

ಸ್ಥಾನ	ಪುರುಷರಿಗೆ	ಸ್ತ್ರೀಯರಿಗೆ
ಬಲ ಭುಜಕ್ಕೆ	ಜಯ	ಸುಖ
ಎಡ ಭುಜಕ್ಕೆ	ಪರಾಜಯ	ಸುಖ
ಬಲಗೈಯಲ್ಲಿ	ಧನಹಾನಿ	ಧನಹಾನಿ
ಎಡಗೈಯಲ್ಲಿ	ಕಲಹ	ಲಾಭ
ಬಲಗೈಕೀಲಿಗೆ	ಅಲಂಕಾರ	ಧನಕ್ಷಯ
ಎಡಕೈಕೀಲಿಗೆ	ದ್ರವ್ಯನಾಶ	ಭೂಷಣ
ಬಲಮುಂಗೈಗೆ	ದ್ರವ್ಯಹಾನಿ	ಭೂಷಣ
ಎಡಮುಂಗೈಗೆ	ಭೂಲಾಭ	ಭೂಲಾಭ
ಬೆರಳುಗಳಿಗೆ	ಇಷ್ಟಾರ್ಥಸಿದ್ಧಿ	ಅಲಂಕಾರ
ಉಗುರುಗಳಿಗೆ	ನಾಶ	ಹಾನಿ
ಅಂಗೈಗೆ	ಧನಲಾಭ	ಬಹುಸುಖ
ಬೆನ್ನಿಗೆ	ಮಿತ್ರಲಾಭ	ಬಂಧುನಾಶ
ಪಾರ್ಶ್ವಗಳಿಗೆ	ಬಂಧುದರ್ಶನ	ಬಂಧುದರ್ಶನ
ಹೊಟ್ಟೆಯಲ್ಲಿ	ದ್ರವ್ಯನಾಶ	ಶುಭ
ಸೊಂಟ,ಹೊಕ್ಕಳು	ಕೀರ್ತಿಲಾಭ	ವಸ್ತ್ರಲಾಭ
ತೊಡೆಯಲ್ಲಿ	ವಸ್ತ್ರನಾಶ	ಸುತಪ್ರಾಪ್ತಿ
ಮೊಣಕಾಲಿಗೆ	ಪ್ರವಾಸ	ಬಂಧನ
ಕಾಲುಗಳಲ್ಲಿ	ಬಂಧನ	ಪ್ರಯಾಣ
ಕಾಲಿನ ಮೇಲೆ	ಸುಖ	ಪ್ರಯಾಣ
ಕಾಲ ಬೆರಳಿಗೆ	ಪುತ್ರನಾಶ	ಧನಲಾಭ

CC-O. In Public Domain4Digitized by eGangotri

ಸ್ವಪ್ನದ ಶುಭಾಶುಭ ಫಲಗಳು

ದುಃಸ್ವಪ್ನ ಫಲ: ಸ್ವಪ್ನದಲ್ಲಿ ರೋಗವಿಲ್ಲದವನು ಪ್ರೇತವನ್ನು ಕಂಡರೆ ಮರಣ ದೋಣಿಯಿಂದ ನದಿ ದಾಟಿದರೆ ಮತ್ತು ಮಳೆ ಸುರಿಯುವುದು ಕಂಡರೆ ಪ್ರಯಾಣ. ತೈಲಾಭಂಗ ಮಾಡಿದ್ದು, ಸತ್ತವರು ಬದುಕಿದ್ದು ಕಂಡರೆ ಹಾಗೂ ಎಮ್ಮೆ ಕೋಣಗಳನ್ನೇರಿದರೆ ಮರಣ. ಆಟವಾಡಿದರೆ, ಕೆಂಪು ವಸ್ತ್ರ ಧರಿಸಿದರೆ ಮತ್ತು ನೀರಿಗೆ ಅಡ್ಡ ಕಟ್ಟಿದರೆ ನಾಶ. ಮಡದಿಯು ಬೇರೆಯವರಿಂದ ಒಯಲ್ಪಟ್ಟರೆ ಕಾರಾಗೃಹ ವಾಸ. ತನ್ನ ಕೈ ಕಾಲುಗಳು ಕತ್ತರಿಸಲ್ಪಟ್ಟರೆ ತಂದೆ ತಾಯಿಗಳಿಗೆ ಅರಿಷ್ಟ. ಇತರರ ಕೈ ಕಾಲು ಕತ್ತರಿಸಿದ್ದು ಕಂಡರೆ ಮಕ್ಕಳಿಗೆ ಅರಿಷ್ಟ. ನಡೆಯುವಾಗ ದಾರಿ ಕಾಣದೆ ಹೋದರೆ ಮೃತ್ಯು ಭಯ. ಊಟ ಮಾಡಿದರೆ ರೋಗ. ಬಂಗಾರ ನೋಡಿದರೆ ದಾರಿದ್ರ್ಯ. ಅಂತರಿಕ್ಷದಲ್ಲಿ ತಿರುಗಾಡಿದರೆ ಸ್ಥಾನಚಲನೆ, ಜಗಳವಾಡಿದರೆ ಕಾರ್ಯ ಹಾನಿ. ನೀರಲ್ಲಿ ಮುಳುಗಿದರೆ ಹೀಡೆ. ವಿಗ್ರಹ ಮುರಿದದ್ದು ಕಂಡರೆ ಮತ್ತು ತಾನು ಅನ್ಯರಿಂದ ಹಾಸ್ಯ ಮಾಡಲ್ಪಟ್ಟರೆ ಕಲಹ. ಬಾವಿಯಲ್ಲಿ ಬೀಳುವುದು ಕಂಡರೆ ವಿಪತ್ತು. ಕಟ್ಟಡಗಳು ಚಿದ್ರಂತೆ ಕಂಡರೆ ಸ್ತ್ರೀಯರಿಗೆ ಅರಿಷ್ಟ. ಬಿಸಿನೀರು, ಔಷಧ, ಗೋಮಯ ಇವುಗಳನ್ನು ತಿಂದರೆ ರೋಗ, ಹುಂದಿ, ನರಿ, ನಾಯಿ, ಕಾಗೆ ಮುಂತಾದ ಕ್ಷುದ್ರ ಜಂತುಗಳನ್ನೂ, ಭಿಕ್ಷುಕ, ಸನ್ಯಾಸಿ, ವಿಧವೆ, ಚಂಡಾಲ, ಅಂಗಹೀನ, ಭೂತ, ಪ್ರೇತ ಇತ್ಯಾದಿಗಳನ್ನು ಕಂಡರೆ ಶೋಕ.

ಸುಸ್ವಪ್ನ ಫಲ: ಹುಲಿಯನ್ನು ಕಂಡರೆ ಸ್ವಧರ್ಮವೃದ್ಧಿ. ಹೆಣ ಕಂಡರೆ ಮೃತ್ಯು ಪರಿಹಾರ, ಫಲವಸ್ತುಗಳನ್ನು ಕಂಡರೆ ಸ್ಥಿತಾನ ಪ್ರಾಪ್ತಿ. ಸ್ತ್ರೀಸಂಗ ಮಾಡಿದರೆ ಮೃಷ್ಟಾನ್ನ ಲಾಭ. ಪೂಜೆ ಮಾಡುವುದು ಕಂಡರೆ ಸಾಲ ನಿವೃತ್ತಿ. ತುಪ್ಪ ಭಕ್ಷಿಸಿದರೆ ಆರೋಗ್ಯ, ಮೊಸರು ಭಕ್ಷಿಸಿದರೂ ಹಾಲು ಕರೆಯುವುದು ಕಂಡರೂ ಸುಖ. ಮಣ್ಣಿನ ಪಾತ್ರೆಗಳು ಸಿಕ್ಕಿದರೆ ಪಶು ಸಮೃದ್ಧಿ. ಆನೆ, ರಥ, ಕುದುರೆ ಮುಂತಾದ ವಾಹನಗಳನ್ನೇರಿ ಪ್ರಯಾಣ ಮಾಡಿದರೆ ದ್ರವ್ಯ ಲಾಭ, ತಾನು ಬಂಧಿಸಲ್ಪಟ್ಟರೆ ಧನಲಾಭ. ನೀರಿನಲ್ಲಿ ಮುಳುಗಿ ಬದುಕಿದಂತೆ ಕಂಡರೆ ಹೀಡಾ ಪರಿಹಾರ. ತಾನು ಸುಡಲ್ಪಟ್ಟರೆ ದೀರ್ಘಾಯುಷ್ಯ. ಹಾಲು, ಪರಮಾನ್ನ, ಮೃಷ್ಟಾನ್ನಗಳನ್ನುಂಡರೆ ಮತ್ತು ಗೋಧಿ, ಭತ್ತ, ಅಮೇಧ್ಯ, ಕೋಳಿ, ಉರಿಯುವ ಬೆಂಕಿ, ಆನೆ, ನದಿ, ಸಮುದ್ರ, ದೇವತೆಗಳು. ಬ್ರಾಹ್ಮಣರು ಸಾಧುಗಳು ಇವರನ್ನು ಕಂಡರೆ ಶುಭ, ನದಿ ಸಮುದ್ರ ಮುಂತಾದ್ದನ್ನು ಸ್ವತಃ ಈಜಾಡಿ ದಾಟಿದರೆ, ಆಕಾಶದ ಮೇಲೆ ಹಾರಿದರೆ ಮತ್ತು ಗೃಹ ನಕ್ಷತ್ರಾದಿಗಳನ್ನು ಕಂಡರೆ ಸರ್ವಸಿದ್ಧಿ.

CC-O. In Public Domain. Digitized by eGangotri

"ಅಮೃತಾದಿ ಯೋಗ"

ನಕ್ಷತ್ರಗಳು	ಆದಿತ್ಯ	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
ಅಶ್ವನಿ	ಅ	ಸಿ	ಅಸಿ	ಮೃ	ಅ	ಅಸಿ	ಅ
ಭರಣಿ	ಪ್ರ	ಸಿ	ಅಸಿ	ಮೃ	ಅ	ಸಿ	ಸಿ
ಕೃತಿಕೆ	ಸಿ	ಮೃ	ಸಿ	ಅಸಿ	ಮೃ	ಸಿ	ಅ
ರೋಹಿಣಿ	ಅ	ಅಸಿ	ಅ	ಸಿ	ಉ	ಮೃ	ಅಸಿ
ಮೃಗಶಿರ	ಅ	ಅಸಿ	ಸಿ	ಅ	ಮೃ	ಅ	ಸಿ
ಆರ್ದ್ರ	ಸಿ	ಸಿ	ಮೃ	ಸಿ	ಮೃ	ಅ	ಸಿ
ಪುನರ್ವಸು	ಅ	ಅಸಿ	ಅ	ಸಿ	ಅ	ಸಿ	ಅ
ಪುಷ್ಯ	ಅಸಿ	ಅ	ಅ	ಮ	ಅಸಿ	ಉ	ಸಿ
ಆಶ್ಲೇಷ	ಸಿ	ಅ	ಅ	ಸಿ	ಸಿ	ಮೃ	ಮೃ
ಮಖೆ	ಮೃ	ಮೃ	ಸಿ	ಸಿ	ಅ	ಮೃ	ಅ
ಹುಬ್ಬ	ಅ	ಅ	ಸಿ	ಅಸಿ	ಸಿ	ಸಿ	ಸಿ
ಉತ್ತರೆ	ಅಸಿ	ಸಿ	ಅ	ಅ	ಮೃ	ಅ	ಉ
ಹಸ್ತ	ಅಸಿ	ಮೃ	ಅ	ಅ	ಮ	ಅ	ಮೃ
ಚಿತ್ರ	ಅ	ಪ್ರ	ಸಿ	ಸಿ	ಸಿ	ಅ	ಮ
ಸ್ವಾತಿ	ಸಿ	ಅ	ಅ	ಸಿ	ಅ	ಅಸಿ	ಅಸಿ
ವಿಶಾಖ	ಉ	ಮೃ	ಮೃ	ಅಸಿ	ಅ	ಸಿ	ಅ
ಅನುರಾಧ	ಮೃ	ಮೃ	ಸಿ	ಅಸಿ	ಅ	ಸಿ	ಅ
ಜ್ಯೇಷ್ಠ	ಮೃ	ಸಿ	ಉ	ಸಿ	ಪ್ರ	ಮ	ಸಿ
ಮೂಲ	ಅಸಿ	ಸಿ	ಅ	ಮೃ	ಸಿ	ಅ	ಸಿ
ಪೂ.ಆಷಾಢ	ಅ	ಉ	ಸಿ	ಅ	ಅ	ಪ್ರ	ಸಿ
ಉ.ಆಷಾಢ	ಅ	ಮೃ	ಪ್ರ	ಅ	ಸಿ	ಅಸಿ	ಸಿ
ಶ್ರವಣ	ಅಸಿ	ಅಸಿ	ಸಿ	ಅ	ಅ	ಮೃ	ಸಿ
ಧನಿಷ್ಠ	ಮ	ಮ	ಸಿ	ಪ್ರ	ಸಿ	ಅಸಿ	ಸಿ
ಶತಬಿಷ	ಸಿ	ಸಿ	ಮೃ	ಅಸಿ	ಮೃ	ಅ	ಅ
ಪೂ.ಭಾದ್ರ	ಸಿ	ಸಿ	ಮೃ	ಅ	ಅಸಿ	ಅ	ಮೃ
ಉ.ಭಾದ್ರ	ಅ	ಸಿ	ಅಸಿ	ಸಿ	ಸಿ	ಅ	ಅ
ರೇವತಿ	ಅ	ಸಿ	ಸಿ	ಸಿ	ಸಿ	ಅಸಿ	ಪ್ರ

ಅ = ಅಮೃತಯೋಗ, ಸಿ = ಸಿದ್ಧಿಯೋಗ, ಅಸಿ = ಅಮೃತಸಿದ್ಧಿಯೋಗ ಇವುಗಳು ಶುಭಫಲಗಳನ್ನು ನೀಡುವುವು.

ಉ = ಉತ್ಪಾತ, ಮೃ = ಮೃತ್ಯು, ಪ್ರ = ಪ್ರಬಲಾರಿಷ್ಠ, ಮ = ಮರಣ ಇವುಗಳು ಕೆಟ್ಟಫಲಗಳನ್ನು ನೀಡುವುವು.

CC-O. In Public Domain. Digitized by eGangotri

ಉದಾ:– ಆದಿತ್ಯವಾರ ಪುಷ್ಯ ನಕ್ಷತ್ರ ಅಮೃತಸಿದ್ಧಿ ಯೋಗ ವಿವಾಹಾದಿ ಧಾರ್ಮಿಕ ಕಾರ್ಯಗಳಿಗೆ ಶುಭ ದಿನವು.

ಉತ್ತರ ಆಷಾಢ ಮಂಗಳವಾರ ಪ್ರಬಲಾರಿಷ್ಯ. ಎಲ್ಲಾ ಕಾರ್ಯಗಳಿಗೆ ಕೆಟ್ಟ ದಿನವು.

"ಪ್ರಯಾಣ ಕಾಲಕ್ಕೆ ಅನುಕೂಲವಾದ ಶುಭಹೋರೆಗಳು"

	ಕ್ರ.ಸ.	ಹೋರೆ ಕಾಲ	ಭಾನು	ಸೋಮ	ಕುಜ	ಬುಧ	ಗುರು	ಶುಕ್ರ	ಶನಿ
ಹಗಲು ಹೋರೆಗಳು	1	6–7	ರವಿ	ಚಂದ್ರ	ಕುಜ	ಬುಧ	ಗುರು	ಶುಕ್ರ	ಶನಿ
	2	7–8	ಶುಕ್ರ	ಶನಿ	ರವಿ	ಚಂದ್ರ	ಕುಜ	ಬುಧ	ಗುರು
	3	8–9	ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ	ಕುಜ
	4	9–10	ಚಂದ್ರ	ಕುಜ	ಬುಧ	ಗುರು	ಶುಕ್ರ	ಶನಿ	ರವಿ
	5	10–11	ಶನಿ	ರವಿ	ಚಂದ್ರ	ಕುಜ	ಬುಧ	ಗುರು	ಶುಕ್ರ
	6	11–12	ಗುರು	ಶುಕ್ರ	ಶನಿ	ರವಿ	ಚಂದ್ರ	ಕುಜ	ಬುಧ
	7	12–1	ಕುಜ	ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ
	8	1–2	ರವಿ	ಚಂದ್ರ	ಕುಜ	ಬುಧ	ಗುರು	ಶುಕ್ರ	ಶನಿ
	9	2–3	ಶುಕ್ರ	ಶನಿ	ರವಿ	ಚಂದ್ರ	ಕುಜ	ಬುಧ	ಗುರು
	10	3–4	ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ	ಕುಜ
	11	4–5	ಚಂದ್ರ	ಕುಜ	ಬುಧ	ಗುರು	ಶುಕ್ರ	ಶನಿ	ರವಿ
	12	5–6	ಶನಿ	ರವಿ	ಚಂದ್ರ	ಕುಜ	ಬುಧ	ಗುರು	ಶುಕ್ರ
ರಾತ್ರಿ ಹೋರೆಗಳು	1	6–7	ಗುರು	ಶುಕ್ರ	ಶನಿ	ರವಿ	ಚಂದ್ರ	ಕುಜ	ಬುಧ
	2	7–8	ಕುಜ	ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ
	3	8–9	ರವಿ	ಚಂದ್ರ	ಕುಜ	ಬುಧ	ಗುರು	ಶುಕ್ರ	ಶನಿ
	4	9–10	ಶುಕ್ರ	ಶನಿ	ರವಿ	ಚಂದ್ರ	ಕುಜ	ಬುಧ	ಗುರು
	5	10–11	ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ	ಕುಜ
	6	11–12	ಚಂದ್ರ	ಕುಜ	ಬುಧ	ಗುರು	ಶುಕ್ರ	ಶನಿ	ರವಿ
	7	12–1	ಶನಿ	ರವಿ	ಚಂದ್ರ	ಕುಜ	ಬುಧ	ಗುರು	ಶುಕ್ರ
	8	1–2	ಗುರು	ಶುಕ್ರ	ಶನಿ	ರವಿ	ಚಂದ್ರ	ಕುಜ	ಬುಧ
	9	2–3	ಕುಜ	ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ
	10	3–4	ರವಿ	ಚಂದ್ರ	ಕುಜ	ಬುಧ	ಗುರು	ಶುಕ್ರ	ಶನಿ
	11	4–5	ಶುಕ್ರ	ಶನಿ	ರವಿ	ಚಂದ್ರ	ಕುಜ	ಬುಧ	ಗುರು
	12	5–6	ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ	ಕುಜ

ಆರ್ಕ/ಶುಕ್ರೋ/ಬುಧ/ಚಂದ್ರ/ಶನಿ/ರವಿ/ಕುಜ/ಗುರು ಸೂತ್ರದ ಪ್ರಕಾರ ಹೋರೆಗಳನ್ನು

CC-O. In Public Domain. Digitized by eGangotri

CC-O. In Public Domain. Digitized by eGangotri

ನಿರ್ಧರಿಸಬೇಕು. ಯಾವಾಗಲೂ ಪ್ರಯಾಣಕ್ಕೆ ಗುರು, ಬುಧ, ಶುಕ್ರ ಮತ್ತು ಹುಣ್ಣಿಮೆಕಾಲದ ಚಂದ್ರ ಹೋರೆಗಳು ಪ್ರಯಾಣಕ್ಕೆ ಶುಭವು. ಅಮವಾಸ್ಯೆಯ ಚಂದ್ರ ಪಾಪಿ ಆಗುವನು. ಸುರ್ಯೋದಯ ಮತ್ತು ಅಸ್ತ ಬೆಳಿಗ್ಗೆ ಮತ್ತು ಸಾಯಂಕಾಲ 6 ಗಂಟೆಗಳಾದಾಗ ಮೇಲಿನ ಕೋಷ್ಠಕ ಅನ್ವಯಿಸುವುದು. ಸೂರ್ಯಾಸ್ತಗಳು ವ್ಯತ್ಯಾಸ ಆದಾಗ ಮೇಲಿನ ಸಮಯವು ಬದಲಾವಣೆ ಆಗುವುದು.

ಉದಾ:– ರವಿವಾರ ಬೆಳಿಗ್ಗೆ 7 ರಿಂದ 8 ಶುಕ್ರಹೋರೆ ಶುಭವು. ಮಂಗಳವಾರ ಮಧ್ಯಾಹ್ನ 1 ರಿಂದ 2 ಕುಜಹೋರೆ ಅಶುಭವು.

ವಾರ	ರಾಹು ಕಾಲ	ಗುಳಿಕ ಕಾಲ	
		ಹಗಲು	ರಾತ್ರಿ
ಆದಿತ್ಯ	4–30 ರಿಂದ 6	3 ರಿಂದ 4–30	9 ರಿಂದ 10–30
ಸೋಮ	7–30 ರಿಂದ 9–00	1–30 ರಿಂದ 3–00	7–30 ರಿಂದ 9–00
ಮಂಗಳ	3–00 ರಿಂದ 4–30	12–00 ರಿಂದ 1–00	6–00 ರಿಂದ 7–30
ಬುಧ	12–00 ರಿಂದ 1–30	10–30 ರಿಂದ 12–00	3–00 ರಿಂದ 4–30
ಗುರು	1–30– ರಿಂದ 3–00	9–00 ರಿಂದ 10–30	1–30 ರಿಂದ 3–00
ಶುಕ್ರ	10–30 ರಿಂದ 12–00	7–30– ರಿಂದ 9–00	12–00 ರಿಂದ 1–30
ಶನಿ	9 ರಿಂದ 10–30	6–00 ರಿಂದ 7–30	10–30 ರಿಂದ 12–00

ಸೂರ್ಯೋದಯ ಮತ್ತು ಸೂರ್ಯಾಸ್ತ ಬೆಳಿಗ್ಗೆ 6 ಗಂಟೆ ಮತ್ತು ಸಾಯಂಕಾಲ 6 ಗಂಟೆಗಳಾದಾಗ ಮೇಲಿನ ಕೋಷ್ಠಕ ಅನ್ವಯಿಸುವುದು. ಸೂರ್ಯೋದಯ ಸೂರ್ಯಾಸ್ತಗಳು ವ್ಯತ್ಯಾಸವಾದಂತೆ ಮೇಲಿನ ಕೋಷ್ಠಕದ ಸಮಯಗಳು ವ್ಯತ್ಯಾಸವಾಗುತ್ತವೆ.

ಪ್ರಯಾಣಕಾಲಕ್ಕೆ ಮತ್ತು ಶುಭ ಕಾರ್ಯಗಳಿಗೆ ರಾಹುಕಾಲ ಅಶುಭವು. ಬುಧವಾರದ

Sri Vidyabharathi Book Centre, Sringeri

CC-O. In Public Domain. Digitized by eGangotri

ದಿನ ಮಧ್ಯಾಹ್ನ 10–30 ರಿಂದ 12 ಗುಳಿಕ ಕಾಲ ಮತ್ತು 12 ರಿಂದ 1–30 ರವರೆಗೆ ರಾಹುಕಾಲವು. ಇದರಿಂದಾಗಿ ಈ ದಿನ ಶುಭಕಾರ್ಯಗಳಿಗೆ ಮಧ್ಯಾಹ್ನ ಅಭಿಜಿತ್ ಮುಹೂರ್ತ ನಿಷಿದ್ಧವು.

ಗೌರಿ ಪಂಚಾಂಗ ರೀತ್ಯ

ಶುಭ – ಅಶುಭ ಫಲಗಳು

ಹಗಲು ಗೌರಿ ಪಂಚಾಂಗ

ಸಮಯ	ರವಿ	ಸೋಮ	ಕುಜ	ಬುಧ	ಗುರು	ಶುಕ್ರ	ಶನಿ
6.00–7.30	ಉದ್ಯೋ	ಅಮೃತ	ರೋಗ	ವಿಷಂ	ಉದ್ಯೋ	ರೋಗ	ವಿಷಂ
7.30–9.00	ಲಾಭ	ವಿಷಂ	ಉದ್ಯೋ	ಅಮೃತ	ವಿಷಂ	ಜ್ವರಂ	ಅಮೃತ
9.00–10.30	ವಿಷಂ	ಉದ್ಯೋ	ಜ್ವರಂ	ಶುಭಂ	ಜ್ವರಂ	ಅಮೃತ	ಜ್ವರಂ
10.30–12.00	ಅಮೃತ	ಜ್ವರಂ	ಲಾಭ	ಉದ್ಯೋ	ಲಾಭ	ಕಲಹ	ಉದ್ಯೋ
12.00–1.30	ಶುಭಂ	ಲಾಭ	ಅಮೃತ	ರೋಗ	ಅಮೃತ	ಲಾಭ	ಶುಭಂ
1.30–3.00	ಧನಂ	ಅಮೃತ	ಉದ್ಯೋ	ಶುಭಂ	ವಿಷಂ	ಶುಭಂ	ಲಾಭ
3.00–4.30	ಅಮೃತ	ಲಾಭ	ವಿಷಂ	ಧನಂ	ಕಲಹ	ಧನಂ	ಧನಂ
4.30–6.00	ವಿಷಂ	ಧನಂ	ಲಾಭ	ಅಮೃತ	ಜ್ವರಂ	ಲಾಭ	ಲಾಭ

ರಾತ್ರಿ ಗೌರಿ ಪಂಚಾಂಗ

ಸಮಯ	ರವಿ	ಸೋಮ	ಕುಜ	ಬುಧ	ಗುರು	ಶುಕ್ರ	ಶನಿ
6.00–7.30	ಶುಭಂ	ರೋಗ	ಜ್ವರ	ಲಾಭ	ಮಖ	ಅಮೃತ	ವಿಷಂ
7.30–9.00	ಅಮೃತ	ಲಾಭ	ಉದ್ಯೋ	ರೋಗ	ರೋಗ	ಜ್ವರಂ	ಉದ್ಯೋ
9.00–10.30	ಜ್ವರಂ	ಉದ್ಯೋ	ಕಲಹ	ವಿಷಂ	ಕಲಹ	ಕಲಹ	ಶುಭಂ
10.30–12.00	ರೋಗ	ಧನಂ	ಲಾಭ	ಉದ್ಯೋ	ಲಾಭ	ಲಾಭ	ಅಮೃತ
12.00–1.30	ಕಲಹ	ರೋಗ	ರೋಗ	ಶುಭಂ	ಉದ್ಯೋ	ಶುಭಂ	ಕಲಹ
1.30–3.00	ಲಾಭ	ಅಮೃತ	ಲಾಭ	ಲಾಭ	ಜ್ವರ	ಧನಂ	ರೋಗ
3.00–4.30	ಉದ್ಯೋ	ವಿಷಂ	ಉದ್ಯೋ	ಧನಂ	ಲಾಭ	ಅಮೃತ	ಅಮೃತ
4.30–6.00	ರೋಗ	ಜ್ವರಂ	ಧನಂ	ಲಾಭ	ಉದ್ಯೋ	ವಿಷ	ಲಾಭ

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಮೇಲಿನ ಸಮಯ ಸೂರ್ಯಾಸ್ತಗಳು ಬೆಳಿಗ್ಗೆ ಮತ್ತು ಸಾಯಂಕಾಲ 6 ಗಂಟೆ ಆದಾಗ ಕೊಡಲಾಗಿದೆ. ಸೂರ್ಯಾಸ್ತಗಳು ವ್ಯತ್ಯಾಸ ಆದಾಗ ಸಮಯಗಳು ವ್ಯತ್ಯಾಸ ಆಗುವುವು. ಅಮೃತಯೋಗ, ಶುಭಯೋಗ, ಧನಯೋಗ – ಈ ಯೋಗಗಳು ಶುಭವು. ಉದ್ಯೋಗ ಯೋಗ, ಲಾಭಯೋಗ – ಈ ಯೋಗಗಳು ಮಧ್ಯಮವು. ಉಳಿದ ಎಲ್ಲಾ ಯೋಗಗಳು ತ್ಯಾಜ್ಯವು.

ಉದಾ:–ರವಿವಾರ ಹಗಲು 10.30 ರಿಂದ 12.00 ಅಮೃತ ಶುಭವು.

ಶನಿವಾರ ಸಾಯಂಕಾಲ 4.30 ರಿಂದ 6.00 ವಿಷಂ ಅಶುಭವು

"ಜನ್ಮ ರಾಶಿ ಗೊತ್ತಿಲ್ಲದವರು ತನ್ನ ನಾಮಕ್ಷರಗಳ ಆಧಾರದಲ್ಲಿ ರಾಶಿ ತಿಳಿದುಕೊಳ್ಳಬಹುದು"

ತಮ್ಮ ಜನ್ಮರಾಶಿ ಗೊತ್ತಿಲ್ಲದವರು ತಮ್ಮ ಹೆಸರಿನ ಮೊದಲಿನ ಅಕ್ಷರದ ಆಧಾರದಲ್ಲಿ ತಿಳಿದುಕೊಳ್ಳಬಹುದು. ಉದಾ:– ಒಬ್ಬನ ಹೆಸರು ಗಿರಿಜಶಂಕರ ಎಂದು ತಿಳಿದುಕೊಳ್ಳೋಣ. ಇಲ್ಲಿ ಹೆಸರಿನ ಮೊದಲ ಅಕ್ಷರ "ಗಿ" ಎಂಬುದು ಧನಿಷ್ಠ ನಕ್ಷತ್ರದ ೨ನೇ ಪಾದ ಮಕರ ರಾಶಿ ಎಂದು ತಿಳಿಯುತ್ತದೆ. ಇದೇ ರೀತಿ ರಾಶಿಗಳ ಆಧಾರದಲ್ಲಿ ನಾಮಾಂಕಿತ ಮೊದಲ ಅಕ್ಷರಗಳನ್ನು ಕೆಳಗೆ ಕೊಡಲಾಗಿದೆ.

ಮೇಷರಾಶಿ:–	ಚು	ಚೆ	ಚೊ	ಲ	ಲಿ	ಲು	ಲೆ	ಲೊ	ಅ
ವೃಷಭರಾಶಿ:–	ಇ	ಉ	ಎ	ಒ	ವ	ವಿ	ವು	ವೆ	ವೊ
ಮಿಥುನ ರಾಶಿ:–	ಕ	ಕಿ	ಕು	ಘ	ಙ	ಛ	ಕೆ	ಕೊ	ಹ
ಕರ್ಕಾಟಕ ರಾಶಿ:–	ಹಿ	ಹು	ಹೆ	ಹೊ	ಡ	ಡಿ	ಡು	ಡೆ	ಡೊ
ಸಿಂಹ ರಾಶಿ:–	ಮ	ಮಿ	ಮು	ಮೆ	ಮೊ	ಟ	ಟಿ	ಟು	ಟೆ
ಕನ್ಯಾ ರಾಶಿ:–	ಟೊ	ಪ	ಪಿ	ಪು	ಷ	ಣ	ಠ	ಪೆ	ಪೊ
ತುಲಾ ರಾಶಿ:–	ರ	ರಿ	ರು	ರೆ	ರೊ	ತ	ತಿ	ತು	ತೆ
ವೃಶ್ಚಿಕ ರಾಶಿ:–	ತೊ	ನ	ನಿ	ನು	ನೆ	ನೊ	ಯ	ಯಿ	ಯು
ಧನು ರಾಶಿ:–	ಯೆ	ಯೇ	ಬ	ಬಿ	ಬು	ಧ	ಭ	ಡ	ಬೆ
ಮಕರ ರಾಶಿ:–	ಬೊ	ಜ	ಜಿ	ಶಿ	ಶು	ಶೆ	ಶೊ	ಗ	ಗಿ
ಕುಂಭ ರಾಶಿ:–	ಗು	ಗೆ	ಗೊ	ಸ	ಸಿ	ಸು	ಸೆ	ಸೊ	ದ
ಮೀನ ರಾಶಿ:–	ದಿ	ದು	ಜ	ಞ	ಥ	ದೆ	ದೇ	ಚ	ಚೆ

ಈ ರೀತಿ ಹೆಸರುಗಳ ಆಧಾರದಲ್ಲಿ ತಮ್ಮ ಭವಿಷ್ಯವನ್ನು ತಿಳಿದುಕೊಳ್ಳಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಮ್ಮ ವರ್ಷ ಭವಿಷ್ಯ 1992

"ವಿಶ್ವದ ಮೇಲೆ ಪರಿಣಾಮ" – 1992

ಈ ಸಾರಿ 1–1–1992 ನೇ ದಿನ ಬುಧವಾರ ಬರುತಿದ್ದು ಆವತ್ತು ಅನುರಾಧ ನಕ್ಷತ್ರವಾಗಿ ಅಮೃತ ಸಿದ್ಧಿಯೋಗದ ಫಲವು. ಇದರಿಂದ ಹಲವಾರು ಯುರೋಪ್ ಖಂಡದ ಕಮ್ಯುನಿಸ್ಟ್ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ರಾಷ್ಟ್ರ ಆಗಿ ಪರಿವರ್ತನೆ ಆಗಬಹುದು. ಹಲವಾರು ಮಾರಕ ಶಸ್ತ್ರಾಸ್ತ್ರಗಳು ನಿಶ್ಯಸ್ತ್ರೀಕರಣಗೊಳ್ಳಬಹುದು.

ಆದರೆ ಅದೇ ದಿನ ಅಂಗಾರಕನು ಮೂಲ ನಕ್ಷತ್ರವನ್ನು ಪ್ರವೇಶಿಸಿ ಧನುರಾಶಿಯಲ್ಲಿರುವನು. ಇದರಿಂದ ಪ್ರಪಂಚದ ನಾನಾಕಡೆಗಳಲ್ಲಿ ಅಪಘಾತಗಳು ಹೆಚ್ಚಾಗುವುವು. ಕೆಲವು ಕಡೆಗಳಲ್ಲಿ ವಿಷಾನಿಲ ಸ್ಫೋಟನೆ ಮತ್ತು ಅಣುಶಕ್ತಿಗಳು ಒಡೆಯುವ ಸಾಧ್ಯತೆಯು. ಪ್ರಪಂಚದ ನಾನಾಕಡೆಗಳಲ್ಲಿ ಕರುಳಿಗೆ ಸಂಬಂಧಪಟ್ಟ ಗುಪ್ತರೋಗ ಉಂಟಾಗುವ ಸಾಧ್ಯತೆಯಿದೆ. ಯುರೋಪ್ ಮತ್ತು ಅಮೇರಿಕ ಖಂಡದ ದೇಶಗಳಿಗೆ ಅರಿಷ್ಟವು.

ವರ್ಷದ ಪ್ರಾರಂಭದಲ್ಲಿಯೇ ಎಂದರೆ 4–1–1992 ರಂದು ಧನುರಾಶಿಯಲ್ಲಿ ಪೂರ್ವಆಷಾಢ ನಕ್ಷತ್ರದಲ್ಲಿ ರಾಹುಗ್ರಸ್ತ ಸೂರ್ಯಗ್ರಹಣ ಆಗಲಿದೆ. ಈ ಗ್ರಹಣವು ಭಾರತದಲ್ಲಿ ಕಾಣಿಸಿಗುವುದಿಲ್ಲ. ಈ ಗ್ರಹಣದ ಫಲದಿಂದ ಯವನರ (ಮುಸ್ಲಿಮ್) ರಾಷ್ಟ್ರಗಳಿಗೆ ಬಹಳಷ್ಟು ಅರಿಷ್ಟವು. ವಿಶ್ವದ ಪ್ರಮುಖ ನೇತಾರರಿಗೆ ಕಂಟಕ ಭಯವು. ಯುರೋಪ್ ಖಂಡದ ಕೆಲವು ರಾಷ್ಟ್ರಗಳಲ್ಲಿ ಗಲಭೆಗಳು ಉಂಟಾಗಬಹುದು. ಕೆಲವು ವಿಶ್ವದ ಪ್ರತಿಷ್ಠಿತ ರಾಜಕೀಯ ವ್ಯಕ್ತಿಗಳು ಸ್ತ್ರೀಯರ ಮೋಹ ಜಾಲಕ್ಕೆ ಬಿದ್ದು, ಗುಪ್ತ ವಿಷಯಗಳು ಬಯಲಾಗುವ ಪರಿಸ್ಥಿತಿ ಉಂಟಾಗಬಹುದು. ಕೆಲವು ರಾಷ್ಟ್ರಗಳಲ್ಲಿ ಅದರಲ್ಲೂ ಮುಖ್ಯವಾಗಿ ಮುಸ್ಲೀಮ್ ಮತ್ತು ಯುರೋಪ್ ಖಂಡದ ದೇಶಗಳಲ್ಲಿ ವಿಮಾನ ಅಪಘಾತಗಳು ಉಂಟಾಗಬಹುದು. ವಿಶ್ವದ ಧಾರ್ಮಿಕ ಮುಖಂಡರಿಗೆ ಅರಿಷ್ಟವು.

ಶ್ರೀಲಂಕಾದಲ್ಲಿ ಉಗ್ರಗಾಮಿಗಳ ಚಟುವಟಿಕೆಗಳು ಹೆಚ್ಚಾಗುವುವು. ಇದರಿಂದ ಶ್ರೀಲಂಕದ ವರಿಷ್ಠ ರಾಜಕೀಯ ಧುರೀಣರಿಗೆ ಕಂಟಕ ಭಯವು. ಪಾಕಿಸ್ತಾನದಲ್ಲಿ ಅಂತಃಕಲಹ ಉಂಟಾಗುವ ಸ್ಥಿತಿ ಬರಬಹುದು. ಬಂಗ್ಲಾದೇಶದಲ್ಲಿ ಹಿಂದಿನ ರಾಜಕೀಯ ಧುರೀಣರಿಗೆ ಕಂಟಕ ಭಯವು. ರಶ್ಯದ ಕೆಲವು ಭಾಗಗಳಲ್ಲಿ ರಾಜಕೀಯ ಗಲಭೆಗಳು ಉಂಟಾಗಬಹುದು. ಹಣದುಬ್ಬರ ಹೆಚ್ಚಾಗಬಹುದು. ಕೆಲವು ಕಡೆ ಭೂಕಂಪನಗಳು ಉಂಟಾಗಬಹುದು. ಇರಾಕ್‌ನ ಅಧ್ಯಕ್ಷ ಸದ್ದಾಂ ಹುಸೈನರು ಪ್ರಪಂಚವನ್ನೇ ನಾಶಗೊಳಿಸಬಲ್ಲ ಅಣುಬಾಂಬ್ ತಯಾರಿಗೆ ಸಿದ್ಧತೆ ಮಾಡಿಕೊಳ್ಳುವ ಸಾಧ್ಯತೆಯಿದೆ. ಇಸ್ರೇಲ್ ಸಮಸ್ಯೆಯನ್ನು

Sri Vidyabharati Book Centre, Sirsi

CC-O. In Public Domain. Digitized by eGangotri

ಬಗೆಹರಿಸಲು ವಿಶ್ವದ ಪ್ರಮುಖರಾಷ್ಟ್ರಗಳು ಪ್ರಯತ್ನಿಸುವ ಸಾಧ್ಯತೆಯಿದೆ. ಆಫ್ರಿಕಾ ಖಂಡದ ಕೆಲವು ರಾಷ್ಟ್ರಗಳಲ್ಲಿ ಆನಾವ್ಯಷ್ಟಿ ಉಂಟಾಗಬಹುದು.

ಅಶ್ವಿನಿ ನಕ್ಷತ್ರ ಮೇಷ ರಾಶಿಯ ಜಾರ್ಜ್ ಬುಷ್‌ರವರಿಗೆ ಗುರುವು ಪಂಚಮದಲ್ಲಿರುವನು. ಇದರಿಂದ ಇವರ ಪ್ರತಿಷ್ಠೆಯು ಹೆಚ್ಚುವುದು. ವಿಶ್ವದ ಶಾಂತಿಗಾಗಿ ಇವರು ಮತ್ತು ರಶ್ಯದ ಮಿಕಾಯಿಲ್ ಗೊರ್ಬಚೇವ್ ಪ್ರಧಾನಪಾತ್ರಗಳನ್ನು ವಹಿಸಿರುವುದರಿಂದಲೂ, ಕುವೈಟಿಗೆ ಮರಳಿ ಸ್ಥಾಪನೆಗೊಳ್ಳಲು ಕಾರಣ ಪುರುಷರಾದ ಜಾರ್ಜ್‌ಬುಷ್‌ರವರ ಹೆಸರನ್ನು ನಾಬೆಲ್ ಪಾರಿತೋಷಕ ಪ್ರಶಸ್ತಿಗೆ ಸೂಚಿಸುವ ಸಾಧ್ಯತೆಯಿದೆ. 1992-ರಲ್ಲಿ ಅಮೇರಿಕದಲ್ಲಿ ನಡೆಯುವ ಮಹಾ ಚುನಾವಣೆಯಲ್ಲಿ ಇವರು ದ್ವಿತೀಯ ಅವಧಿಗೆ ಆರಿಸಿ ಬರುವ ಸಾಧ್ಯತೆಯಿದೆ. ಪಾಕಿಸ್ತಾನದ ಕೆಲವು ಧೋರಣೆಗಳಿಗೆ ಅಮೇರಿಕ ಹಸ್ತಕ್ಷೇಪ ಮಾಡುವ ಸಾಧ್ಯತೆಯಿದೆ. ಭಾರತದ ಗಡಿ ಪ್ರದೇಶಗಳಲ್ಲಿ ಪಾಕಿಸ್ತಾನವು ತೀವ್ರ ಚಟುವಟಿಕೆಗಳನ್ನು ಮುಂದುವರಿಸುವ ಸಾಧ್ಯತೆಯಿದೆ.

ವಿಶ್ವದ ಪ್ರತಿಷ್ಠಿತ ಒಲಂಪಿಕ್ ಕೂಟವು ಈ ವರ್ಷ ಸ್ಪೆಯಿನಿನ ಬಾರ್ಸಿಲೋನದಲ್ಲಿ ನಡೆಯುವುದು. ವರ್ಷದ ಪ್ರಾರಂಭದ ದಿನ ಅಮೃತ ಸಿದ್ಧಿಯೋಗವಾದ ಕಾರಣ ವಿಶ್ವದ ಹೆಚ್ಚಿನ ರಾಷ್ಟ್ರಗಳು ಭಾಗವಹಿಸುವುವು. ಹೊಸದಾಗಿ ನಾಮಕರಣಗೊಂಡ ಆಫ್ರಿಕಾ ದೇಶವು ಸೇರಲಿದೆ. ಇದರಿಂದ ಈ ರಾಷ್ಟ್ರದ ಪ್ರತಿಷ್ಠೆಯು ಹೆಚ್ಚಲಿದೆ. ಈ ಸಾರಿ ಪೂರ್ವ ಜರ್ಮನಿ ಮತ್ತು ಪಶ್ಚಿಮ ಜರ್ಮನಿ ರಾಷ್ಟ್ರಗಳು ಒಟ್ಟಿಗೆ ಜರ್ಮನಿ ಒಕ್ಕೂಟ ಆಗಿದೆ. ಇದರಿಂದ ಈ ರಾಷ್ಟ್ರದ ಪದಕಗಳ ಸಂಖ್ಯೆ ವೃದ್ಧಿ ಆಗಲಿದ್ದು ವಿಶ್ವದ 3ನೇ ಅಥವಾ 4ನೇ ಸ್ಥಾನ ಪಡೆಯಲು ಅರ್ಹವಾಗುವುದು. ಭಾರತದ ಕೆಲವು ಕಿರಿಯ ಪ್ರಾಯದ ಕ್ರೀಡಾರ್ಥಿಗಳು ಒಲಂಪಿಕ್‌ನಲ್ಲಿ ಸುದ್ದಿ ಮಾಡುವರು.

ಜಪಾನ್, ಯುಗೋಸ್ಲೋವಿಯ ಮತ್ತು ಫಿಲಿಪೈನ್ಸ್ ದೇಶಗಳ ರಾಜಕೀಯ ವ್ಯಕ್ತಿಗಳ ಭ್ರಷ್ಟಾಚಾರಗಳು ಬಯಲಾಗುವ ನಿರೀಕ್ಷೆಯಿದೆ. ಮಡಗಾಸ್ಕರ್‌ನಲ್ಲಿ ಕ್ಷಿಪ್ರಕ್ರಾಂತಿ ಉಂಟಾಗಬಹುದು. ಹೊಸದಾಗಿ ಗ್ರಹಗಳ ಸಂಶೋಧನೆ ಆಗಬಹುದು. ಮಾರಕ ರೋಗಗಳಿಗೆ ಹೊಸ ಔಷಧಿಗಳನ್ನು ವಿಜ್ಞಾನಿಗಳು ಕಂಡು ಹಿಡಿಯುವರು. ದಕ್ಷಿಣ ಕನ್ನಡದ ಒಬ್ಬ ಅಜ್ಞಾತ ವ್ಯಕ್ತಿ ಪ್ರಪಂಚದಲ್ಲಿಯೇ ಹೆಸರು ಗಳಿಸುವರು.

CC-O. In Public Domain. Digitized by eGangotri

ನಿಮ್ಮ ವರ್ಷ ಭವಿಷ್ಯ 1992
"ಭಾರತದ ಭವಿಷ್ಯ"

4–1–1992 ರಲ್ಲಿ ಪೂರ್ವ ಆಷಾಢನಕ್ಷತ್ರದಲ್ಲಿ ಧನುರಾಶಿಯಲ್ಲಿ ನಡೆಯುವ ಸೂರ್ಯಗ್ರಹಣವು ಭಾರತದ ರಾಜಕೀಯದಲ್ಲಿ ಗೊಂದಲಮಯ ಉಂಟುಮಾಡುವ ಸಾಧ್ಯತೆಯಿದೆ. ಆಳುವ ಕಾಂಗ್ರೆಸ್ ಐ ಪಕ್ಷದಲ್ಲಿ ಭಿನ್ನ ಮತೀಯರ ಬಲ ವೃದ್ಧಿಗೊಳ್ಳಬಹುದು. ಇದರಿಂದ ಕೇಂದ್ರ ಸರಕಾರದ ಮಂತ್ರಿಮಂಡಲದಲ್ಲಿ ಕೆಲವು ಮಂತ್ರಿಗಳು ರಾಜಿನಾಮೆ ಕೊಡುವ ಸಂದರ್ಭ ಒದಗಬಹುದು. ರಾಮಜನ್ಮಭೂಮಿ, ಬಾಬರಿ ಮಸೀದಿ, ಮಂಡಲ ಆಯೋಗ ಮತ್ತು ಜಲ ಸಂಬಂಧ ವಿಷಯಗಳು ಕೇಂದ್ರ ಮಂತ್ರಿಮಂಡಲದಲ್ಲಿ ತಲೆ ಕೆಡಿಸಿಕೊಳ್ಳುವ ಸಾಧ್ಯತೆಯಿದೆ. ಇದರಿಂದ ಭಾರತದಲ್ಲಿ ಆಂತರಿಕ ಗಲಭೆಗಳು ಹೆಚ್ಚಾಗುವುವು. ಬೆಲೆ ಏರಿಕೆಯನ್ನು ಕಡಿಮೆ ಮಾಡಲು ಭಾರತ ಅಸಮರ್ಥವಾಗುವುದು. ಕೆಲವು ವಿರೋಧ ಪಕ್ಷದ ನಾಯಕರಿಂದ ಹೊಸದಾಗಿ ಚುನಾವಣೆಯ ಕೂಗು ಏಳಲಿದೆ. ಹಲವಾರು ಆಳುವ ಪಕ್ಷದ ರಾಜಕಾರಣಿಗಳ ಗುಪ್ತ ವಿಷಯಗಳನ್ನು ವಿರೋಧ ಪಕ್ಷಗಳು ಬಯಲು ಮಾಡುವುವು. ಇದರಿಂದ ಲೋಕಸಭೆಯ ಪ್ರಮುಖ ವಿರೋಧ ಪಕ್ಷ ಭಾರತೀಯ ಜನತಾ ಪಕ್ಷದ ವರ್ಚಸ್ಸು ಹೆಚ್ಚಲಿದೆ. ಇದರ ವರ್ಚಸ್ಸನ್ನು ನೋಡಿ ಆಳುವ ಪಕ್ಷ ಮಾತ್ರವಲ್ಲದೆ ಇತರ ಪಕ್ಷಗಳು ದಿಗ್ಭ್ರಮೆಗೊಳ್ಳುವುವು. ಭಾರತದ ಪ್ರಮುಖ ರಾಜಕೀಯ ನೇತಾರರಿಗೆ ಕಂಟಕ ಭಯವು. ಪ್ರಮುಖ ಧಾರ್ಮಿಕ, ಸಾಮಾಜಿಕ, ಸಾಹಿತ್ಯ ಮತ್ತು ಚಲನಚಿತ್ರರಂಗದ ವ್ಯಕ್ತಿಗಳಿಗೂ ಅರಿಷ್ಟವಿದೆ.

ಉತ್ತರ ಭಾರತದ 2 ರಾಜ್ಯಗಳು ಮತ್ತು ದಕ್ಷಿಣ ಭಾರತದ 2 ರಾಜ್ಯಗಳಲ್ಲಿ ರಾಜಕೀಯ ಬದಲಾವಣೆಗಳು ಆಗುವ ಸಾಧ್ಯತೆಯಿದೆ. ಕೆಲವು ಹಿರಿಯ ದಕ್ಷಿಣ ಭಾರತದ ರಾಜಕೀಯ ವ್ಯಕ್ತಿಗಳಿಗೆ ಕಂಟಕ ಭಯವು. ಕೆಲವು ಕಡೆ ಕೋಮು ಗಲಭೆಗಳು ಉಂಟಾಗಬಹುದು. ಆಂಧ್ರ ಪ್ರದೇಶದಲ್ಲಿ ನಡೆಯುವ ಹಿಂಸಾಕಾಂಡಗಳು ದೊಡ್ಡ ಸುದ್ದಿ ಆಗಲಿದೆ. ತಮಿಳುನಾಡಿನ ಮುಖ್ಯಮಂತ್ರಿಗಳಿಗೆ ಅರಿಷ್ಟವು.

15.8.1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದಾಗ ಮೃಷಭಲಗ್ನ, ಪುಷ್ಯ ನಕ್ಷತ್ರ ಆಗಿದ್ದು ಕರ್ಕಾಟಕ ರಾಶಿ ಆಗಿರುತ್ತದೆ. ರಾಶಿಯಿಂದ ಭಾಗ್ಯಾಧಿಪತಿ ಗುರುವು ರಾಶಿಯಿಂದ ದ್ವಿತೀಯ ಸ್ಥಾನದಲ್ಲಿ ಸಂಚರಿಸುವುದರಿಂದ ಶುಭವು. ಇದರಿಂದ ಆರ್ಥಿಕ ಸುಧಾರಣೆಗೆ ಭಾರತ ಸರಕಾರವು ಅನೇಕ ಕ್ರಮಗಳನ್ನು ತೆಗೆದುಕೊಳ್ಳುವ ಸಾಧ್ಯತೆಯಿದೆ. ಆನೇಕ ಸರಕಾರಿ ಸಾಮ್ಯದಲ್ಲಿರುವ ಕೈಗಾರಿಕೆಗಳನ್ನು ಖಾಸಗೀಕರಣಗೊಳಿಸಬಹುದು. ಬಂಗಾರದ ಮೇಲೆ ನಿಯಂತ್ರಣವನ್ನು ತರಬಹುದು. ಸಾರ್ವಜನಿಕ ಕ್ಷೇತ್ರದ ಕೈಗಾರೀಕೋದ್ಯಮಗಳಲ್ಲಿ ಉತ್ಪತ್ತಿ ಹೆಚ್ಚಾಗಬಹುದು. ಕಪ್ಪು ಹಣ ತಡೆಗೆ ಕೆಲವು ಕಾನೂನುಗಳನ್ನು ತರಬಹುದು. ವರಮಾನ ತೆರಿ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಧಾನದಲ್ಲಿ ಸರಳೀಕರಣಗೊಳಿಸಬಹುದು. ಆಡಂಬರ ಖರ್ಚುಗಳು ಮತ್ತು ದೊಡ್ಡ ಮೊತ್ತದ ದಾನಗಳ ಮೇಲೆ ತೆರಿಗೆಯನ್ನು ವಿಧಿಸಬಹುದು. ಸರಕಾರಿ ಇಲಾಖೆಗಳಲ್ಲಿ ಆಗುವ ಖರ್ಚುಗಳನ್ನು ಕಡಿತಗೊಳಿಸಬಹುದು. ಅನಾವಶ್ಯಕವಾಗಿ ಸರಕಾರಿ ನೌಕರರ ವರ್ಗಾವಣೆಯನ್ನು ಮಾಡದಿರಬಹುದು. ಸರಕಾರಿ ನೌಕರರ ಸೇವಾ ಸುಧಾರಣೆಗಳಿಗೆ ಹೊಸದಾಗಿ ಆಯೋಗವನ್ನು ರಚಿಸಬಹುದು. ಕಾರ್ಮಿಕರಿಗೆ ಸಿಗುವ ಬೋನಸ್ ಕಾಯಿದೆಯಲ್ಲಿ ತಿದ್ದುಪಡಿ ಮಾಡಬಹುದು.

ಆದರೆ ಗುರು ಶನಿಗಳು ಪರಸ್ಪರ ಷಷ್ಠಾಷ್ಟಮದಲ್ಲಿರುವುದರಿಂದ ಸರಕಾರಿ ಇಲಾಖೆ ಮತ್ತು ಕೈಗಾರಿಕೋದ್ಯಮಗಳಲ್ಲಿ ಆಗಾಗ್ಗೆ ಮುಷ್ಕರದ ವಾತಾವರಣ ಉಂಟಾಗಬಹುದು. ಹಲವಾರು ಕೇಂದ್ರದ ಮಂತ್ರಿಗಳ ಭ್ರಷ್ಟಾಚಾರಗಳು ಬಯಲಿಗೆ ಬರುವುವು. 11–9–1992 ರ ನಂತರ ವಿರೋಧ ಪಕ್ಷಗಳ ಪ್ರಾಬಲ್ಯ ಅಧಿಕಗೊಂಡು ಸರಕಾರದ ರಾಜೀನಾಮೆಗೆ ಆಗ್ರಹಿಸಬಹುದು. ದೇಶದ ಎಲ್ಲೆಡೆ ಹಿಂಸೆ ಗಲಭೆಗಳು ಹೆಚ್ಚಾಗುವುವು. ದೇಶದ ಪ್ರತಿಷ್ಠಿತ ರಾಜಕಾರಣಿಗಳ ಹತ್ಯೆಗೆ ವಿದೇಶಿ ರಾಷ್ಟ್ರಗಳ ಕೈವಾಡ ಬಯಲಾಗಬಹುದು. ಜುಲ್ಯಾ ನಂತರ ನಡೆಯುವ ಭಾರತದ ರಾಷ್ಟ್ರಾಧ್ಯಕ್ಷರ ಚುನಾವಣೆಯಲ್ಲಿ ಬದಲಾವಣೆ ಆಗುವ ಸಂಭವವು. ಒಮ್ಮತದ ಅಭ್ಯರ್ಥಿ ಆರಿಸಿ ಬರುವ ನಿರೀಕ್ಷೆಯಿದೆ. ಶ್ರೀ ಶಂಕರ್ ದಯಾಳ್ ಶರ್ಮ, ಶ್ರೀ ರಾಮಕೃಷ್ಣ ಹೆಗ್ಡೆ ಮತ್ತು ಸುಪ್ರೀಮ್ ಕೋರ್ಟ್‌ನ ನಿವೃತನ್ಯಾಯಾಧೀಶರ ಹೆಸರುಗಳನ್ನು ಸೂಚಿಸುವ ಸಾಧ್ಯತೆಯಿದೆ.

CC-O. In Public Domain. Digitized by eGangotri

ನಿಮ್ಮ ವರ್ಷ ಭವಿಷ್ಯ 1992
"ಕರ್ನಾಟಕ ರಾಜ್ಯದ ಭವಿಷ್ಯ"

"ತ್ರಿಷ್ಣು ದುರ್ಯೋಧನ ಹತಃ" ಎಂಬಂತೆ ಮಿಥುನ ರಾಶಿಯ ಕರ್ನಾಟಕಕ್ಕೆ 14–8–1992 ರ ನಂತರ ಅರಿಷ್ಟವು. ಆಡಳಿತ ಪಕ್ಷವು ಯಾವುದೇ ಸಮಯದಲ್ಲಿ ಅಲುಗಾಡಬಹುದು. ಆಳುವ ಪಕ್ಷದಲ್ಲಿ ಭಿನ್ನಮತೀಯರ ಪ್ರಾಬಲ್ಯ ಹೆಚ್ಚುವುದು. ಇದರಿಂದ ಆಳುವ ಪಕ್ಷವು 2 ಯಾ 3 ಹೋಳುಗಳಾಗಬಹುದು. ಇದರಿಂದ ವರ್ಷದ ಮಧ್ಯದಲ್ಲಿ ಯಾವ ಪಕ್ಷವು ಆಡಳಿತ ನಡೆಸಲು ಪ್ರಯೋಜನವಾಗಲಾರದು. ಇದರಿಂದ ಭಿನ್ನಮತೀಯ ಮತ್ತು ವಿರೋಧ ಪಕ್ಷಗಳು ಹೊಸದಾಗಿ ಚುನಾವಣೆ ನಡೆಸಲು ಆಗ್ರಹಿಸಬಹುದು. ಕರ್ನಾಟಕದ ಹಿರಿಯ ರಾಜಕಾರಣಿಗಳಿಗೆ ಕಂಟಕ ಭಯವು. ಗುರುಶನಿಗಳ ಪರಸ್ಪರ ಷಷ್ಠಾಮ ಸ್ಥಿತಿಯಿಂದ ಹಿಂಸೆ ಕೋಮು ಗಲಭೆಗಳು ಅಧಿಕಗೊಳ್ಳುವುವು. ಹರಿಜನರ ಮೇಲಿನ ದೌರ್ಜನ್ಯದ ಬಗ್ಗೆ ದೊಡ್ಡ ಸುದ್ದಿ ಆಗಲಿದೆ. ಆಳುವ ಪಕ್ಷದ ಕೆಲವು ಮಂತ್ರಿಗಳು ರಾಜಿನಾಮೆ ಕೊಡುವ ಸ್ಥಿತಿ ಬರಬಹುದು. ಕಾವೇರಿ ಜಲದ ಬಗ್ಗೆ ಗಲಭೆಗಳು ಅಧಿಕವಾಗುವುವು. ಹೊಸ ತೀರ್ಪಿನಿಂದಲೂ ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗುವುದು.

ಹೊಸದಾಗಿ ಲೋಕಸಭೆಯಲ್ಲಿ ಸಂಸತ್ ಸದಸ್ಯರನ್ನು ಪಡೆದ ಭಾರತೀಯ ಜನತಾಪಕ್ಷ ಕರ್ನಾಟಕದಲ್ಲಿ ಪ್ರಬಲಗೊಳ್ಳಲಿದೆ. ಕರ್ನಾಟಕದ ಮೂಲೆ ಮೂಲೆಯಲ್ಲೂ ಇದರ ಪ್ರಚಾರ ಕಾರ್ಯ ಮುಂದುವರಿಯುವುದು. ರೈತ ಸಂಘದ ಬೆಂಬಲ ಬಾಜಪದ ಕಡೆಗೆ ಇರುವ ಸಾಧ್ಯತೆಯಿದೆ. ಹೊಸದಾಗಿ ಚುನಾವಣೆ ನಡೆದರೆ ಬಾಜಪವು ಹೆಚ್ಚಿನ MLA ಸ್ಥಾನಗಳನ್ನು ಪಡೆಯಲು ಪ್ರಯತ್ನಿಸುವುದು. ಇಲ್ಲಿಯ ಆರ್ಥಿಕ ಸ್ಥಿತಿ ಕುಸಿದು ಬೀಳುವುದು. ಭ್ರಷ್ಟಾಚಾರವು ಅಧಿಕಗೊಳ್ಳುವುದು. ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ವ್ಯಕ್ತಿ ಕರ್ನಾಟಕ ರಾಜ್ಯದಲ್ಲಿ ದೊಡ್ಡ ಸುದ್ದಿ ಆಗಲಿರುವರು.

Sri Vidyabharathi Book Centre, Sringeri

CC-O. In Public Domain. Digitized by eGangotri

॥ ಶ್ರೀ ರಸ್ತು ಃ ॥

"ನಿಮ್ಮ ವರ್ಷ ಭವಿಷ್ಯ – 1992"

ಮೇಷ ರಾಶಿ

ನಿಮಗೆ ಈ ವರ್ಷ ಭಾಗ್ಯಾಧಿಪತಿ ಗುರುವು 10–9–1992ರ ವರೆಗೆ ಪಂಚಮದಲ್ಲಿ ಸಂಚರಿಸುತ್ತಿದ್ದು, ಉತ್ತಮ ಫಲವು. ಆದರ ನಂತರ ಗುರುವು ಷಷ್ಠದಲ್ಲಿ ವರ್ಷದ ಕೊನೆಯ ವರೆಗೆ ಇದ್ದು ಕೆಟ್ಟ ಫಲವು. ಶನಿಯು ವರ್ಷ ಪೂರ್ತಿ ದಶಮದಲ್ಲಿದ್ದು ಶಕಯೋಗವೆಂಬ ರಾಜಯೋಗವು. ಇದರಿಂದ ಕಾರ್ಮಿಕರಿಗೆ, ಕೈಗಾರಿಕೋದ್ಯಮಿಗಳಿಗೆ ಮತ್ತು ವಾಹನ ಮಾಲಿಕರಿಗೆ ಉತ್ತಮಫಲವು. ಕೆಲವರು ಸಾರ್ವಜನಿಕ ಕ್ಷೇತ್ರದಲ್ಲಿ ಪ್ರತಿಷ್ಠಿತರಾಗುವರು. ರಾಹುಕೇತುಗಳು ಅನುಕ್ರಮವಾಗಿ ಧನು ಮತ್ತು ಮಿಥುನದಲ್ಲಿ ಎಂದರೆ ನವಮ ಮತ್ತು ಚತುರ್ಥ ರಾಶಿಗಳಲ್ಲಿರುವರು. ಅದೃಷ್ಟ ಅಂಕ : 3 ಮತ್ತು 8.

ಜನವರಿ : ಈ ತಿಂಗಳು ಮಿಶ್ರಫಲಗಳನ್ನು ಕೊಡುವುವು. ಪ್ರಾರಂಭದ 14ರ ವರೆಗೆ ರವಿ, ಕುಜ ಮತ್ತು ರಾಹುಗಳು ಭಾಗ್ಯದಲ್ಲಿದ್ದು ತಂದೆಯವರಿಗೆ ಅರಿಷ್ಟವು. ಶ್ರೀ ಸುಬ್ರಹ್ಮಣ್ಯದೇವರ ಸೇವೆಯಿಂದ ಪರಿಹಾರವು. ಮಧ್ಯಮ ಪ್ರಾಯಸ್ತರಿಗೆ ಎದೆನೋವು ಉಂಟಾಗಬಹುದು. ಗುರುವಿನ ಫಲದಿಂದ ಕೆಲವರಿಗೆ ಧನಲಾಭವು. ತಾರೀಕು 15ರ ನಂತರ ರವಿಯು ದಶಮ ಸ್ಥಾನಕ್ಕೆ ಪ್ರವೇಶಿಸುವನು. ಉದ್ಯೋಗಿಗಳಿಗೆ ಧನ ಲಾಭವು. ಕೆಲವು ಸರಕಾರಿ ನೌಕರರಿಗೆ ಭಡ್ತಿ ಸಂಭವವು. ಸ್ತ್ರೀ ಉದ್ಯೋಗಿಗಳಿಗೆ ಮೇಲಿನ ಅಧಿಕಾರಿಗಳಿಂದ ಕಿರುಕುಳವು. ತಂದೆ ಮಕ್ಕಳಲ್ಲಿ ಘರ್ಷಣೆ ಉಂಟಾಗಬಹುದು.

ಫೆಬ್ರವರಿ ತಿಂಗಳು: ರವಿಯು ಫೆಬ್ರವರಿ 13ರ ವರೆಗೆ ದಶಮದಲ್ಲಿದ್ದು 14ರ ನಂತರ ತಿಂಗಳ ಕೊನೆಯವರೆಗೆ ಲಾಭದಲ್ಲಿ ಸಂಚರಿಸುವನು. ತಿಂಗಳ ಪ್ರಾರಂಭದಲ್ಲಿ ಕೆಲವರಿಗೆ ಆರ್ಥಿಕ ಲಾಭವು. ಸಣ್ಣ ಮಕ್ಕಳಿಗೆ ಬಾಲಾರಿಷ್ಟ ದೋಷವು. 14ರ ನಂತರ ಲಾಭದಲ್ಲಿ ರವಿಯು ಸಂಚರಿಸುವುದರಿಂದ ನಾನಾ ಮೂಲಗಳಿಂದ ಧನಲಾಭವು. ಈ ರಾಶಿಯು ನ್ಯಾಯಾವಾದಿಗಳಿಗೆ ಅದೃಷ್ಟವು. ವಿದ್ಯಾರ್ಥಿಗಳು ಹೆಚ್ಚಿನ ಅಂಕಗಳನ್ನು ಗಳಿಸಿ ತೇರ್ಗಡೆ ಹೊಂದುವರು. ಕೆಲವು ಸ್ತ್ರೀಯರಿಗೆ ಪುತ್ರ ಸಂತಾನದ ಭಾಗ್ಯ ಫಲವು. ಅವಿವಾಹಿತ ಸ್ತ್ರೀ ಪುರುಷರಿಗೆ ಕಂಕಣಬಲ ಕೂಡಿ ಬರಲಿದೆ. ಸರಕಾರಿ ಅಧಿಕಾರಿಗಳಿಗೆ ಜವಾಬ್ದಾರಿ ಹೆಚ್ಚಲಿವೆ.

ಮಾರ್ಚ್ ತಿಂಗಳು : ತಿಂಗಳ ಪ್ರಾರಂಭದಲ್ಲಿ ರವಿಯು ಲಾಭದಲ್ಲಿರುವುದರಿಂದ ತಂದೆಗೆ ಪ್ರತಿಷ್ಠೆಯು. ರಾಜಕೀಯ ವ್ಯಕ್ತಿಗಳಿಗೆ ಉತ್ತಮ ಫಲವು. ಕೆಲವು ಸರಕಾರಿ ಅಧಿಕಾರಿಗಳಿಗೆ ವರ್ಗಾವಣೆ ಸಂಭವವು. ಮಾರ್ಚ್ 14ರ ನಂತರ ರವಿಯು ದ್ವಾದಶ ರಾಶಿಗೆ ಸಂಚರಿಸುವನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಇದರಿಂದ ಕೆಲವರಿಗೆ ನೇತ್ರ ಪೀಡೆ ದೋಷವು. ಕ್ರಿಮಿನಲ್ ವಿಷಯಗಳಲ್ಲಿ ಜಾಗ್ರತೆಯು. ಖರ್ಚುಗಳ ಪ್ರಸಂಗ ಹೆಚ್ಚುವುವು. ಸಾಲಗಾರರಿಗೆ ಬ್ಯಾಂಕ್ ಮತ್ತು ಸಹಕಾರಿ ಸಂಘಗಳಿಂದ ಒತ್ತಡ ಬರಬಹುದು. ಕೆಲವರಿಗೆ ಭೂಸಂಪತ್ತನ್ನು ಪಡೆಯುವ ಯೋಗವು.

ಎಪ್ರಿಲ್ ತಿಂಗಳು : ತಿಂಗಳ ಪ್ರಾರಂಭದಲ್ಲಿ ತಂದೆಗೆ ಆನಾರೋಗ್ಯವು. ಖರ್ಚುಗಳ ಪ್ರಸಂಗ ಅಧಿಕವಾಗುವುವು. ದೂರದ ಸಂಬಾಧಿಯವರಿಂದ ದುಃಖದ ವಿಷಯ ತಿಳಿದು ಬರುವುದು. ಕೆಲವರು ಕ್ರಿಮಿನಲ್ ಮೊಕದ್ದಮೆಗಳನ್ನು ಎದುರಿಸುವ ಸಾಧ್ಯತೆಯಿದೆ. 14ರ ನಂತರ ದೇಹಕ್ಕೆ ಆಲಸ್ಯವು. ಸರಕಾರಿ ಅಧಿಕಾರಿಗಳಿಗೆ ಸ್ಥಳ ಬದಲಾವಣೆಯು. ಕೆಲವು ನಿರುದ್ಯೋಗಿ ಪದವೀಧರರು IAS, IPS ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಸರಕಾರಿ ಅಧಿಕಾರಿಗಳಾಗುವರು. ಹಿರಿಯ ಮಗನಿಗೆ ಉದ್ಯೋಗ ಸಿಗುವ ಯೋಗದ ಫಲವು. ಈ ರಾಶಿಯ ತಂದೆ ತಾಯಂದಿರಿಗೆ ಹೆಣ್ಣು ಮಕ್ಕಳ ಕನ್ಯಾದಾನ ಮಾಡುವ ಯೋಗದ ಫಲವು.

ಮೇ ತಿಂಗಳು : ತಿಂಗಳ ಪ್ರಾರಂಭದಲ್ಲಿ ಉಷ್ಣ ಸಂಬಂಧ ಆನಾರೋಗ್ಯ ಸಂಭವವು. ವಾಹನಗಳ ಪ್ರಯಾಣದಿಂದ ತೊಂದರೆಯು. ಕೆಲವರಿಗೆ ಅನಿರೀಕ್ಷಿತ ಧನಲಾಭವು. ದೂರದ ಸ್ಥಳಗಳಲ್ಲಿ ಹೊಟೇಲ್ ಉದ್ಯಮದಿಂದ ಧನಲಾಭವು. ತಿಂಗಳ ಮಧ್ಯದ ನಂತರ ಸ್ತ್ರೀ ಉದ್ಯೋಗಿ. ಅಧಿಕಾರಿಗಳಿಗೆ ಪ್ರತಿಷ್ಠೆಯು. ಕೆಲವು ಆಡಂಬರದ ವಸ್ತುಗಳ ಖರೀದಿಯೋಗವು. ಪ್ರಾಯಸ್ತರಿಗೆ ಹೃದಯಬೇನೆ ಉಂಟಾಗಬಹುದು. ಕುಟುಂಬದ ಹಿರಿಯಸ್ತರಿಗೆ ಆನಾರೋಗ್ಯ ಬಾಧೆಯು. ವಿದೇಶಗಳಲ್ಲಿ ವಾಸಿಸತಕ್ಕ ಬಂಧುಗಳು ಸ್ವದೇಶಕ್ಕೆ ಮರಳಬಹುದು. ಅವಿವಾಹಿತ ಸ್ತ್ರೀ ಪುರುಷರಿಗೆ ಕಂಕಣಬಲಕೂಡಿ ಬರುವುದು.

ಜೂನ್ ತಿಂಗಳು : ತಿಂಗಳ ಪ್ರಾರಂಭದಲ್ಲಿ ಕೆಲವರಿಗೆ ಉದರಬೇನೆ ಸಂಭವವು. ಕೆಲವರಿಗೆ ಶೀತ ಕಫಾದಿ ದೋಷವು. ಪ್ರಯಾಣದಿಂದ ಅರಿಷ್ಟವು. ರಾಹು ಬೃಹಸ್ಪತಿ ಸಂಧಿ ದೋಷವಿದ್ದವರು ನವಗ್ರಹಶಾಂತಿ ಮಾಡುವುದು ಉತ್ತಮವು. ತಿಂಗಳ ಮಧ್ಯದ ನಂತರ ಸಾಂಪತ್ತಿಕ ಸ್ಥಿತಿ ಉತ್ತಮ. ಸಾಹಿತ್ಯಕ್ಷೇತ್ರಗಳಲ್ಲಿರುವವರಿಗೆ ಪ್ರತಿಷ್ಠೆಯು. ಪ್ರವಾಸೋದ್ಯಮದ ನೌಕರರಿಗೆ ಧನಲಾಭವು. ಬಹಳ ಸಮಯದಿಂದ ವಿವಾಹ ಆಗದ ಸ್ತ್ರೀ ಪುರುಷರಿಗೆ ವಿವಾಹ ಆಗುವ ಯೋಗದ ಫಲವು. ತಾಂತ್ರಿಕ ಉದ್ಯೋಗಿಗಳಿಗೆ ಭಡ್ತಿ ಸಂಭವವು. ಈ ರಾಶಿಯ ಹಲವಾರು ವಿದ್ಯಾರ್ಥಿಗಳು ಮೊದಲನೇ ವರ್ಗದಲ್ಲಿ ತೇರ್ಗಡೆ ಹೊಂದುವರು.

ಜುಲ್ಯಾ ತಿಂಗಳು : ತಿಂಗಳ ಪ್ರಾರಂಭದಲ್ಲಿ ಎಲ್ಲಾ ರೀತಿಯಿಂದಲೂ ಶುಭವು. ಆದರೆ ಆಸ್ತಮ ರೋಗಿಗಳು ಜಾಗ್ರತೆಯಿರುವುದು ಉತ್ತಮವು. ಕೆಲವರಿಗೆ ದ್ವಿಚಕ್ರ ವಾಹನದಿಂದ ದೋಷವು. ತಿಂಗಳ ಮಧ್ಯದ ನಂತರ ರವಿಯು ಚತುರ್ಥ ರಾಶಿಗೆ ಪ್ರವೇಶಿಸುವನು. ಇದರಿಂದ ಮಧ್ಯಮ ಪ್ರಾಯದವರಿಗೆ ಹೃದಯ ಬೇನೆ ಸಂಭವವು. ಮನೆಯ ಕೆಲಸ ಅಪೂರ್ಣವಾಗುವುದು. ಗುಪ್ತ ಶತ್ರುಗಳಿಂದ ಪೀಡೆಯು. ಪಿತೃ ಸಂಬಂಧ ಹಿರಿಯಸ್ತರಿಗೆ ಆನಾರೋಗ್ಯ ಬಾಧೆಯು. ಕೆಲವರಿಗೆ ಜಲಭಯವು. ಅವಿವಾಹಿತ ಸ್ತ್ರೀ ಪುರುಷರಿಗೆ ವಿವಾಹ ಯೋಗವು. ಕೆಲವರಿಂದ ಮಕ್ಕಳಲ್ಲಿ ಮನಸ್ತಾಪ

Sri Vidyabharathi Book Trust, Mysore

CC-O. In Public Domain. Digitized by eGangotri

ಉಂಟಾಗಬಹುದು. ಸ್ತ್ರೀ ಉದ್ಯೋಗಿಗಳಿಗೆ ಮೇಲಿನ ಅಧಿಕಾರಿಗಳಿಂದ ಹೀಡೆ ಸಂಭವವು.

ಅಗೋಸ್ತು ತಿಂಗಳು : ತಿಂಗಳ ಪ್ರಾರಂಭ 15 ದಿನಗಳವರೆಗೆ ಅರಿಷ್ಟವು. ದ್ವಿಚಕ್ರ ವಾಹನ ಪ್ರಯಾಣ ನಿಷೇಧವು. ಹಿತೂರಿ ಮಾತುಗಳಿಗೆ ಬೆಲೆ ಕೊಡಬೇಡಿ. ಇದರಿಂದ ಸಂಸಾರವು ಒಡೆದು ಹೋಗುವುದು. ತಿಂಗಳ ಮಧ್ಯಾಂತರ ನಂತರ ಸಾಂಪತ್ತಿಕ ಉತ್ತಮವು, ಹೊಸದಾಗಿ ವ್ಯಾಪಾರ ಪ್ರಾರಂಭಿಸಲು ಶುಭವು. ನಾನಾ ಮೂಲಗಳಿಂದ ಧನಲಾಭವು. ಕೆಲವು ವಿದ್ಯಾರ್ಥಿಗಳಿಗೆ ವೈದ್ಯಕೀಯ ಸ್ಥಾನ ಲಭ್ಯವು. ಕ್ರೀಡಾರ್ಥಿಗಳಿಗೆ ಶುಭವು.

ಸಪ್ಟಂಬರ್ ತಿಂಗಳು : ತಿಂಗಳ ಪ್ರಾರಂಭದಲ್ಲಿ ರವಿಯು ಪಂಚಮದಲ್ಲಿರುವುದರಿಂದ ತಂದೆಗೆ ಅನಾರೋಗ್ಯ ಸಂಭವವು. ಶಿವನಿಗೆ ರುದ್ರಾಭಿಷೇಕದಿಂದ ಪರಿಹಾರವು. ಕೆಲವರಿಗೆ ನಿದ್ರಾಭಂಗವು. ಆರೋಗ್ಯದ ದುಷ್ಕಿಯಲ್ಲಿ ನೇತ್ರಹೀಡೆಯು. ತಿಂಗಳ ಮಧ್ಯದ ನಂತರ ರವಿಯು ಷಷ್ಠಕ್ಕೆ ಬರುವನು. ಇದರಿಂದ ಶೇರು ಬಂಡವಾಳಗಳಿಂದ ಧನಾಭಿವೃದ್ಧಿಯು. ವ್ಯಾಪಾರದಲ್ಲಿ ಪ್ರಗತಿ. ಕೆಲವರಿಗೆ ಆನಿರೀಕ್ಷಿತ ಧನಲಾಭವು. ಆದರೆ ರವಿ ಶನಿಗಳು ಪರಸ್ಪರ ತ್ರಿಕೋನದಲ್ಲಿರುವುದರಿಂದ ತಂದೆ ಮಕ್ಕಳಲ್ಲಿ ಭಿನ್ನಾಭಿಪ್ರಾಯಗಳುಂಟಾಗಬಹುದು. ತಿಂಗಳಾಂತ್ಯಕ್ಕೆ ಸರಕಾರಿ ನೌಕರರಿಗೆ ಮತ್ತು ಕಾರ್ಮಿಕರಿಗೆ ಧನಲಾಭವು.

ಅಕ್ಟೋಬರ್ ತಿಂಗಳು : ತಿಂಗಳ ಪ್ರಾರಂಭದಲ್ಲಿ ಕನ್ಯಾರಾಶಿಯಲ್ಲಿ ರವಿಯಿಂದ ಸ್ತ್ರೀಯರಿಗೆ ಆನಾರೋಗ್ಯ ಸಂಭವವು. ಕೆಲವರಿಗೆ ಚರ್ಮರೋಗದ ಭಯವು. ತರಕಾರಿ ಮತ್ತು ಜೀನಸಿನ ವ್ಯವಹಾರಸ್ತರಿಗೆ ಧನಲಾಭವು. ಕೆಲವರಿಗೆ ಲಾಟರಿಯಿಂದ ಧನಲಾಭವು. 17–10–1992ರ ನಂತರ ರವಿಯು ತುಲಾರಾಶಿಗೆ ಬರುವನು. ಇದರಿಂದ ಕೆಲವರಿಗೆ ಮೂರ್ತ್ಯಾದಿ ದೋಷವು. ತಂದೆಗೆ ಪ್ರಯಾಣದಿಂದ ತೊಂದರೆಯು. ದಾಂಪತ್ಯ ಜೀವನದಲ್ಲಿ ವಿರಸವು. ಪಾಲುದಾರಿಕೆ ವ್ಯಾಪಾರದಲ್ಲಿ ಬಿರುಕು ಉಂಟಾಗಬಹುದು.

ನವಂಬರ್ ತಿಂಗಳು : ಈ ತಿಂಗಳ ಪ್ರಾರಂಭದಲ್ಲಿ ಕುಟುಂಬದಲ್ಲಿ ಕಿರಿಕಿರಿಯು. ಪರದೇಶಗಳಲ್ಲಿರುವ ಸಂಬಂಧಿಕರು ಊರಿಗೆ ಬರಬಹುದು. ಕೆಲವರಿಗೆ ಆಡಂಬರದ ವಸ್ತುಗಳ ಖರೀದಿ ಸಂಭವವು. ತಿಂಗಳ 15ರ ನಂತರ ರವಿಯು ವೃಶ್ಚಿಕರಾಶಿಗೆ ಬಂದಿರುವುದರಿಂದ ತಂದೆಗೆ ಅರಿಷ್ಟವು. ಶ್ರೀ ಶಿವನಿಗೆ ರುದ್ರಾಭಿಷೇಕದಿಂದ ಪರಿಹಾರವು. ಕ್ರಿಮಿನಲ್ ವಿಷಯಗಳಲ್ಲಿ ಜಾಗ್ರತೆಯು. ಎಲ್ಲಿಗೂ ಸಾಕ್ಷಿದಾರರಾಗಿ ಹೋಗಬೇಡಿ. ತಾವೇ ಸಿಕ್ಕಿ ಬೀಳುವ ಸಂಭವವು. ದೂರದ ಊರುಗಳಿಂದ ದುಃಖದ ವಾರ್ತೆ ಬರಬಹುದು.

ದಶಂಬರ ತಿಂಗಳು : ತಿಂಗಳ ಪ್ರಾರಂಭದಲ್ಲಿ ಬಹಳ ಕಷ್ಟವನ್ನು ಅನುಭವಿಸಿರುವಿರಿ. ಸಾಲಗಳ ಸಂಕೋಲೆಯಲ್ಲಿ ಸಿಕ್ಕಿ ಬೀಳುವಿರಿ. ಸಮಾಜದಲ್ಲಿ ಅವಮಾನಪಡುವ ಸಂದರ್ಭ ಬರಬಹುದು. ತಿಂಗಳ 16ರ ನಂತರ ರವಿ ಧನು ರಾಶಿಯಲ್ಲಿರುವುದರಿಂದ ಮಧ್ಯಮ ಪ್ರಾಯಸ್ತರಿಗೆ ಎದೆ ನೋವು ಉಂಟಾಗಬಹುದು. ಪರ ಊರುಗಳಲ್ಲಿ ನೆಲಸಿದವರಿಗೆ ಅರಿಷ್ಟವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೆಲವರಿಗೆ ವಿದೇಶ ಪ್ರಯಾಣದ ಯೋಗದ ಫಲವು. ತಂದೆ ಮಗಂದಿರಲ್ಲಿ ಜಗಳ ಉಂಟಾಗಿ ಬೇರೆ ಆಗುವ ಸಂಭವವು.

ವೃಷಭ ರಾಶಿ

"ಚತುರ್ಥೇ ಪಾಂಡವರಣ್ಯಂ" ಎಂಬಂತೆ ಇವರಿಗೆ ಗುರುವು 10–9–1992ರ ವರೆಗೆ ನಾನಾ ಮೂಲಗಳಿಂದ ಧನ ನಷ್ಟವು. ಕುದುರೆ, ಜೂಜು, ಲಾಟರಿ ಮತ್ತು ಶೇರು ಬಂಡವಾಳಗಳಿಂದ ಧನ ನಷ್ಟವು. ದಾಯಾದಿಗಳಿಂದ ಅಪಾದನೆಗಳ ದೂರಿಗೆ ಒಳಗಾಗುವಿರಿ. 11–9–1992ರ ನಂತರ ಗುರುವು ಪಂಚಮಕ್ಕೆ ಗುರುಬಲ ಬರುವುದು. ಇದರಿಂದ ಅವಿವಾಹಿತ ಸ್ತ್ರೀ ಪುರುಷರಿಗೆ ವಿವಾಹಯೋಗದ ಫಲವು. ಶನಿಯು ಗೋಚರದಲ್ಲಿ ಭಾಗ್ಯದಲ್ಲಿದ್ದು ಕೆಲವರಿಗೆ ವಿದೇಶಗಳಿಗೆ ಹೋಗುವ ಯೋಗದ ಫಲವು. ತಂದೆಯವರಿಗೆ ಆನಾರೋಗ್ಯವು. ಅದೃಷ್ಟ ಅಂಕೆ: 8 ಶುಭವಾರ : ಶನಿವಾರ ಅದೃಷ್ಟದ ಹರಳು ನೀಲ.

ಜನವರಿ ತಿಂಗಳು : ತಿಂಗಳ ಪ್ರಾರಂಭದ 14 ದಿನಗಳ ವರೆಗೆ ರವಿ, ಕುಜ ಮತ್ತು ರಾಹುಗಳು ಅಷ್ಟಮದಲ್ಲಿರುವರು. ಇದರಿಂದ ನಾನಾ ಆಪಾದನೆಗಳಿಗೆ ಗುರಿ ಆಗುವಿರಿ. ಕ್ರಿಮಿನಲ್ ವಿಷಯಗಳಿಗೆ ಸಾಕ್ಷಿದಾರರಾಗಿ ಹೋಗಬೇಡಿರಿ. ತಂದೆ ಮತ್ತು ಸಹೋದರರಿಗೆ ಕಂಟಕ ಭಯವು. ಕೆಲವರಿಗೆ ವಾಹನ ಅಪಘಾತ ಭಯವು. ರಾಹು ಬ್ರಹಸ್ಪತಿ, ಸಂಧಿಯವರು ಶಾಂತಿ ಮಾಡಿಸುವುದು ಉತ್ತಮವು. 15–1–92ರ ನಂತರ ಎಲ್ಲಾ ರೀತಿಯಲ್ಲಿ ಸುಗಮವು. ಕೆಲವರಿಗೆ ವಿದೇಶ ಪ್ರಯಾಣ ಯೋಗದ ಫಲವು. ಕೃಷಿ ಉತ್ಪತ್ತಿಯಿಂದ ಲಾಭವು. ಆದರೆ ತಂದೆ ಮಕ್ಕಳಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗಬಹುದು.

ಫೆಬ್ರವರಿ ತಿಂಗಳು : ತಿಂಗಳ ಮಧ್ಯ ಭಾಗದ ವರೆಗೆ ಕುಟುಂಬದ ಕಲಹದಿಂದ ಬೇಸರವು. ಕುಟುಂಬದಲ್ಲಿ ಪ್ರಾಯಸ್ತ ಮಹಿಳೆಯರಿಗೆ ಆನಾರೋಗ್ಯವು. ವಾಹನಗಳ ವ್ಯವಹಾರದಿಂದ ಧನನಷ್ಟವು. 15–2–1992ರ ನಂತರ ರವಿಯು ದಶಮಕ್ಕೆ ಬರುವನು. ಸರಕಾರಿ ಆಧಿಕಾರಿಗಳಿಗೆ ಭಡ್ತಿ ಸಂಭವವು. ಕೆಲವರಿಗೆ ಪ್ರಯಾಣದಿಂದ ಧನಲಾಭವು. ಕಂಟ್ರಾಕ್ಟ್ ವ್ಯವಹಾರಸ್ತರಿಗೆ ಈ ತಿಂಗಳು ಉತ್ತಮ ಫಲ ಕೊಡಲಿದೆ. ಬಾಕಿಯಿದ್ದ ಸಾಲವು ವಸೂಲಾಗುವುದು. ನಿರುದ್ಯೋಗಿ ಪದವೀಧಾರರಿಗೆ ಉದ್ಯೋಗ ಸಿಗುವ ಸಂಭವವು.

ಮಾರ್ಚ್ ತಿಂಗಳು : ತಿಂಗಳ ಪ್ರಾರಂಭದಲ್ಲಿ ಶುಭಫಲವು. ತಂದೆಯವರಿಗೆ ಪ್ರತಿಷ್ಠೆಯು ಹೆಚ್ಚುವುದು. ದೂರದ ಊರುಗಳಲ್ಲಿರುವ ಸ್ತ್ರೀ ಸರಕಾರಿ ಉದ್ಯೋಗಿಗಳಿಗೆ ಇಚ್ಛಿತ ಸ್ಥಳಗಳು ಸಿಗಬಹುದು. 15–3–1992ರ ನಂತರ ರವಿಯು ಲಾಭಕ್ಕೆ ಪ್ರವೇಶಿಸುವನು. ಇದರಿಂದ ಈ ರಾಶಿಯ ಪದವೀಧರ ನಿರುದ್ಯೋಗಿ IAS, IPS ಪರೀಕ್ಷೆಗಳಲ್ಲಿ ಕೂತರೆ ಜಯಶೀಲರಾಗಬಹುದು. ಕೆಲವರಿಗೆ ಸರಕಾರದಿಂದ ಪ್ರಶಸ್ತಿಗಳು ಸಿಗಬಹುದು. ವಿದೇಶಗಳಲ್ಲಿರುವ ಉದ್ಯೋಗಿಗಳಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅನಿರೀಕ್ಷಿತ ಧನಲಾಭವು.

ಎಪ್ರಿಲ್ ತಿಂಗಳು : ತಿಂಗಳ ಪ್ರಾರಂಭದಲ್ಲಿ ಕೆಲವು ಸಾಮಾನ್ಯ ವ್ಯಕ್ತಿಗಳಿಗೆ ಅನಿರೀಕ್ಷಿತ ಧನಲಾಭವು. ಸಾಹಿತ್ಯ ಕ್ಷೇತ್ರಗಳಲ್ಲಿರುವವರಿಗೆ ಪ್ರತಿಷ್ಠೆಯು ಹೆಚ್ಚುವುದು. ಕೆಲವರಿಗೆ ತಾಯಿ ಸಂಬಂಧ ಆಸ್ತಿ ಲಭ್ಯವು. ತಿಂಗಳ ಮಧ್ಯಾಂತರ ನಂತರ ರವಿಯು ಮದ್ಯಕ್ಕೆ ಪ್ರವೇಶಿಸುವನು. ಇದರಿಂದ ಕೆಲವರಿಗೆ ದೃಷ್ಟಿ ದೋಷ ಸಂಭವವು. ಮೇಲಿನ ಸರಕಾರಿ ಅಧಿಕಾರಿಗಳಿಂದ ಕಿರುಕುಳವು. ಕೆಲವರಿಗೆ ಅನಿರೀಕ್ಷಿತವಾಗಿ ವರ್ಗಾವಣೆ ಸಂಭವವು. ತಂದೆಗೆ ಕಂಟಕ ಭಯವು.

ಮೇ ತಿಂಗಳು : ತಿಂಗಳ ಪ್ರಾರಂಭದ ದಿನಗಳಲ್ಲಿ ರಾಜಕೀಯ ಮತ್ತು ಪ್ರತಿಷ್ಠಿತ ವ್ಯಕ್ತಿಗಳ ಗುಪ್ತ ವಿಚಾರಗಳು ಬಯಲಾಗುವುವು. ಗುಪ್ತ ಶತ್ರುಗಳಿಂದ ಹೀಡೆಯು. 15–5–1992ರ ನಂತರ ರವಿಯು ಜನ್ಮಕ್ಕೆ ಪ್ರವೇಶಿಸುವನು. ಇದರಿಂದ ಉಷ್ಣ ಸಂಬಂಧ ಆನಾರೋಗ್ಯ ಹೀಡೆಯು. ತಾವು ಎಣಿಸಿದ ಮನೆ ಕೆಲಸವನ್ನು ಪ್ರಾರಂಭಿಸಬಹುದು. ಈ ರಾಶಿಯ ವಿದ್ಯಾರ್ಥಿಗಳಿಗೆ ಗುರುಬಲವಿಲ್ಲದ ಕಾರಣ ವಿದ್ಯೆಯಲ್ಲಿ ಪ್ರಯತ್ನ ಮಾಡುವುದು ಉತ್ತಮವು.

ಜೂನ್ ತಿಂಗಳು : ಈ ತಿಂಗಳು ಪೂರ್ತಿ ತಮಗೆ ಅಶುಭವು. ತಂದೆಗೆ ಮಾನಸಿಕ ಕ್ಷೇಮವು. ಕೆಲವು ಆಸ್ತಮ ರೋಗಿಗಳಿಗೆ ಅರಿಷ್ಠವು. ಪಾಲುದಾರಿಕೆ ವ್ಯಾಪಾರದಿಂದ ಕಷ್ಟ ನಷ್ಟವು. ಕುಟುಂಬದಲ್ಲಿ ನೆಮ್ಮದಿಯ ವಾತಾವರಣ ಇರಲಾರದು. ಗುರುಬಲವಿಲ್ಲದ ನಿಮಗೆ ಮಕ್ಕಳ ವಿವಾಹವು ಮುಂದೂಡಲ್ಪಡಬಹುದು. ಕೆಲವರಿಗೆ ದ್ವಿಚಕ್ರ ವಾಹನಗಳಿಂದ ಅರಿಷ್ಠವು. ಆದರೆ ಸರಕಾರಿ ಅಧಿಕಾರಿಗಳಿಗೆ ಭಡ್ತಿ ಸಂಭವವು.

ಜುಲ್ಯಾ ತಿಂಗಳು : ತಿಂಗಳ ಪ್ರಾರಂಭದ 15 ದಿನಗಳ ವರೆಗೆ ಆರೋಗ್ಯದಲ್ಲಿ ಬಾಧೆಯು. ಕೆಲಪೊಮ್ಮೆ ವಿಪರೀತ ಖರ್ಚು ಸಂಭವವು. 15–7–1992ರ ನಂತರ ಉತ್ತಮ ಫಲವು. ವಾಹನಗಳ ಮಾಲಿಕರಿಗೆ ಧನಲಾಭವು. ಉದ್ಯೋಗಿಗಳಿಗೆ ಸ್ಥಳ ಬದಲಾವಣೆ ಸಂಭವವು. ಕೆಲವರಿಗೆ ಪ್ರಯಾಣದಿಂದ ಧನಲಾಭವು. ಹಿರಿಯ ಅಣ್ಣನಿಗೆ ಸರಕಾರಿ ಕ್ಷೇತ್ರದಲ್ಲಿ ಉದ್ಯೋಗ ಸಿಗುವ ಸಂಭವವು. ಸಣ್ಣ ಮಕ್ಕಳಿಗೆ ಕೆಲಪೊಮ್ಮೆ ಗಂಟಲು ನೋವು ಉಂಟಾಗಬಹುದು.

ಆಗೋಸ್ತು ತಿಂಗಳು : ತಿಂಗಳ ಪ್ರಾರಂಭದಲ್ಲಿ ಉತ್ತಮ ಫಲವು. ವ್ಯಾಪಾರಕ್ಕೆ ಬ್ಯಾಂಕಿನಿಂದ ಸಾಲ ಸಿಗುವ ಸಂಭವವು. ಕೆಲವರಿಗೆ ಸಹೋದರರಿಂದ ಸಾಲ ಸಿಗುವ ಸಂಭವವು. ಆದರೆ 15–8–1992ರ ನಂತರ ಆರೋಗ್ಯದಲ್ಲಿ ಬಾಧೆ. ಕೆಲವರಿಗೆ ಉದರ ಬೇನೆ ಸಂಭವವು. ತಾಯಿಯ ಕಡೆಯಿಂದ ಆಸ್ತಿ ಲಭ್ಯವು.

ಸಪ್ಟಂಬರ್ ತಿಂಗಳು : ತಿಂಗಳ ಪ್ರಾರಂಭದಲ್ಲಿ ತಂದೆಯವರಿಗೆ ಅರಿಷ್ಠವು. 11–9–1992ರ ನಂತರ ಗುರುವು ಈ ರಾಶಿಯವರಿಗೆ ಪಂಚಮದಲ್ಲಿ ಪ್ರವೇಶಿಸಿರುವುದರಿಂದ ಅವಿವಾಹಿತ ಸ್ತ್ರೀಯರಿಗೆ ಕಂಕಣ ಬಲ ಕೂಡಿ ಬರುವುದು. ಹೊಸದಾಗಿ ವ್ಯಾಪಾರ ಪ್ರಾರಂಭಿಸಲು ಈ

Sri Vidyabharathi Book Centre, Sringeri

CC-O. In Public Domain. Digitized by eGangotri

ತಿಂಗಳು ಶುಭದಾಯಕವು. ಜಿನಸಿನ ವ್ಯವಹಾರಸ್ತರಿಗೆ ಅಧಿಕ ಲಾಭವು.

ಅಕ್ಟೋಬರ್ ತಿಂಗಳು : ಈ ತಿಂಗಳು ಪೂರ್ಣ ಶುಭದಾಯಕವು. ಗುಡಿಕೈಗಾರಿಕೆಗಳನ್ನು ಪ್ರಾರಂಭಿಸಲು ಸರಕಾರದಿಂದ ಧನ ಸಹಾಯ ಸಿಗಬಹುದು. ಕೆಲವರಿಗೆ ಅನಿರೀಕ್ಷಿತ ಧನಲಾಭವು. ಕೊಟ್ಯ ಸಾಲಗಳು ವಸೂಲಾಗಬಹುದು. ಶೇರು ಬಂಡವಾಳಗಳಿಂದ ಧನವೃದ್ಧಿಯು. ಕೆಲವರಿಗೆ ಮಾವನವರಿಂದ ಧನಪ್ರಾಪ್ತಿ ಆಗಬಹುದು. ಕೆಲವರಿಗೆ ಹಬ್ಬದ ವಾತಾವರಣದಿಂದ ಖರ್ಚು ಹೆಚ್ಚಾಗಬಹುದು. ಸರಕಾರಿ ನೌಕರರಿಗೆ ಮತ್ತು ಕಾರ್ಮಿಕರಿಗೆ ಧನಲಾಭವು..

ನವಂಬರ್ ತಿಂಗಳು : ತಿಂಗಳ ಪ್ರಾರಂಭದಲ್ಲಿ ಶುಭದಾಯಕವಾಗಲಿದ್ದು, 15–10–1992ರ ನಂತರ ಅರಿಷ್ಟವು. ಆಕಸ್ಮಿಕ ಖರ್ಚುಗಳ ಸಂಭವವು. ಕೆಲವರಿಗೆ ಮೂಲವ್ಯಾಧಿ, ಹರ್ನಿಯಗಳ ಶಸ್ತ್ರ ಚಿಕಿತ್ಸೆ ಸಂಭವವು. ಪತ್ನಿಯ ಆರೋಗ್ಯ ಕೆಡಬಹುದು. ವಿವಾಹಾದಿ ಮಂಗಳ ಕಾರ್ಯಗಳು ಮುಂದೂಡಲ್ಪಡಬಹುದು. ಗರ್ಭಿಣಿ ಸ್ತ್ರೀಯರಿಗೆ ಹೆರಿಗೆ ಸಮಯದಲ್ಲಿ ಕಷ್ಟವಾಗಬಹುದು. ಶ್ರೀ ಸುಬ್ರಹ್ಮಣ್ಯ ದೇವರ ಸಂಕಲ್ಪದಿಂದ ಪರಿಹಾರವು.

ದಶಂಬರ ತಿಂಗಳು : ಈ ತಿಂಗಳು ಪೂರ್ತಿ ಅಶುಭವು. ಕೆಲವರಿಗೆ ವಾಹನಗಳಿಂದ ಅರಿಷ್ಟವು. ವ್ಯಾಪಾರದಲ್ಲಿ ಏರುಪೇರು ಉಂಟಾಗಬಹುದು. ಕೆಲವರಿಗೆ ಸ್ತ್ರೀ ಸಂಬಂಧ ಕ್ರಿಮಿನಲ್ ದೂರುಗಳನ್ನು ಎದುರಿಸುವ ಸಂಭವವು. ರಾಹು ಬ್ರಹಸ್ಪತಿ ಸಂಧಿದೋಷವಿದ್ದವರು ಶಾಂತಿ ಮಾಡಿದರೆ ಪರಿಹಾರವು.

ಮಿಥುನ ರಾಶಿ

"ತ್ರಿಷ್ಣು ದುರ್ಯೋಧನ ಹತ:" ಎಂಬಂತೆ ಈ ರಾಶಿಯವರಿಗೆ ಈ ವರ್ಷ ಒಳ್ಳೆಯ ಗುರುಬಲವಿರದು. ದುಷ್ಟ ಮತ್ತು ರಾಜಕೀಯ ವ್ಯಕ್ತಿಗಳಿಗೆ ಅರಿಷ್ಟವು. ಆದರೆ ಸಾಹಿತಿಗಳಿಗೆ ಉತ್ತಮ ಫಲವು. ಶನಿಯು ವರ್ಷವಿಡೀ ಅಷ್ಟಮದಲ್ಲಿರುವನು. ಇದರಿಂದ ಪತ್ನಿ ಯಾ ಪತಿಯ ಕುಟುಂಬದವರಿಗೆ ಅರಿಷ್ಟವು. ಸಮಾಜದಿಂದ ದೂಷಣೆಗಳನ್ನು ಕೇಳುವ ಸಂಭವವು. ಕೆಲವರಿಗೆ ನೌಕರಿಯಲ್ಲಿ ಕಿರಿಕಿರಿಯು. ಅದೃಷ್ಟದ ಅಂಕೆ: 5 ಹರಳು : ಪಚ್ಚೆ ಶುಭವಾರ: ಬುಧವಾರ.

ಜನವರಿ ತಿಂಗಳು : ಈ ತಿಂಗಳು ಇವರಿಗೆ ಅರಿಷ್ಟವು. ವಾಹನಗಳಿಂದ ಅಪಘಾತ ಭಯವು. ಪತ್ನಿ ಯಾ ಪತಿಯವರ ಆರೋಗ್ಯ ಚೆನ್ನಾಗಿರಲಾರದು. ತಂದೆಗೆ ಕಂಟಕಭಯವು. ಪತಿ ಪತ್ನಿಯರಲ್ಲಿ ಭಿನ್ನಾಭಿಪ್ರಾಯಗಳು ಬರಬಹುದು.

Sri Vidyabharathi Book Centre, Sringeri

ಫೆಬ್ರವರಿ ತಿಂಗಳು : ತಿಂಗಳ ಪ್ರಾರಂಭದಲ್ಲಿ ವ್ಯಾಪಾರ ವ್ಯವಹಾರಗಳಲ್ಲಿ ನಷ್ಟ ಸಂಭವವು.

CC-O. In Public Domain. Digitized by eGangotri

ಸಹೋದರನಿಗೆ ಅರಿಷ್ಟವು. 15–2–1992ರ ನಂತರ ಕೆಲವರಿಗೆ ವಿದೇಶ ಪ್ರಯಾಣದ ಯೋಗದ ಫಲವು. ಕೈಗಾರಿಕೋದ್ಯಮಿಗಳಿಗೆ ಅದೃಷ್ಟವು. ಆರೋಗ್ಯ ದೃಷ್ಟಿಯಲ್ಲಿ ಕೆಲವರಿಗೆ ವಾತ ದೋಷ ಉಂಟಾಗಬಹುದು.

ಮಾರ್ಚಿ ತಿಂಗಳು : ಕಳೆದ 2 ತಿಂಗಳುಗಳಲ್ಲಿ ಅರಿಷ್ಟವಿದ್ದ ನಿಮಗೆ ಈ ತಿಂಗಳು ಆಶಾದಾಯಕವು. ನಿರುದ್ಯೋಗಿಗಳಿಗೆ ಉದ್ಯೋಗ ಲಭ್ಯವು. ಕೆಲವರಿಗೆ ಉದ್ಯೋಗಗಳಲ್ಲಿ ಭಡ್ತಿ ಸಂಭವವು. ಮತ್ಸ್ಯ, ಲಘುಪಾನೀಯ ಮತ್ತು ಹೊಟೇಲ್ ಉದ್ಯಮಿಗಳಿಗೆ ಅದೃಷ್ಟವು. ವಿದ್ಯಾಲಯಗಳಲ್ಲಿ ವಿದ್ಯೆಯಲ್ಲಿ ಪ್ರಗತಿಯು. ಸರಕಾರಿ ಅಧಿಕಾರಿಗಳಿಗೆ ವರ್ಗಾವಣೆ ಉಂಟಾಗಬಹುದು. ರವಿಯ ಬಲಾಬಲದಿಂದ ಅವಿವಾಹಿತ ಪುರುಷರಿಗೆ ವಿವಾಹಯೋಗದ ಫಲವು. ರಾಜಕೀಯ ವ್ಯಕ್ತಿಗಳಿಗೆ ಪ್ರತಿಷ್ಠೆ ಹೆಚ್ಚುವುದು.

ಎಪ್ರಿಲ್ ತಿಂಗಳು : ಈ ತಿಂಗಳು ಪೂರ್ಣ ಇವರಿಗೆ ಆಶಾದಾಯಕವಾದ ತಿಂಗಳಾಗಲಿದೆ. ಕೆಲವು ವೈದ್ಯಕೀಯ ವಿದ್ಯಾರ್ಥಿಗಳಿಗೆ ಪ್ರತಿಷ್ಠೆಯು. ವಿದ್ಯಾರ್ಥಿಗಳು ಹೆಚ್ಚಿನ ಅಂಕಗಳನ್ನು ಗಳಿಸುವರು. ನಿರುದ್ಯೋಗಿ ಪದವೀಧರರು. IAS, IPS ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಬಹುದು. ತಂದೆಯ ಸಂಬಂಧ ಆಸ್ತಿ ಲಭ್ಯವು. ಕೆಲವರಿಗೆ ಅನಿರೀಕ್ಷಿತ ಧನಲಾಭವು. ವಾಹನಗಳ ವ್ಯವಹಾರಸ್ತರಿಗೆ ಧನಲಾಭವು. ಕೆಲವರಿಗೆ ಶೇರು ಮತ್ತು ಡಿವಿಡೆಂಡ್‌ಗಳಿಂದ ಧನವೃದ್ಧಿಯು. ಹಿರಿಯ ಮಗನಿಗೆ ಸರಕಾರಿ ಕ್ಷೇತ್ರದಲ್ಲಿ ಉದ್ಯೋಗ ಸಿಗುವ ಲಭ್ಯವು.

ಮೇ ತಿಂಗಳು : ಈ ತಿಂಗಳು ಇವರಿಗೆ ಮಿಶ್ರ ಫಲಗಳು ದೊರಕಲಿವೆ. ಆರೋಗ್ಯದ ದೃಷ್ಟಿಯಲ್ಲಿ ಕೆಲವರಿಗೆ ನೇತ್ರ ಪೀಡೆಯು. ಮಾತಿನಲ್ಲಿ ಸಿಕ್ಕಿ ಬೀಳುವಿರಿ. ಯಾವುದೇ ಶುಭಕಾರ್ಯಗಳಿಗೆ ಕೈ ಹಾಕಬೇಡಿ. ಸರಕಾರಿ ಅಧಿಕಾರಿಗಳಿಗೆ ವರ್ಗಾವಣೆ ಸಂಭವವು. ಸ್ತ್ರೀ ಉದ್ಯೋಗಿಗಳಿಗೆ ಆಲಸ್ಯವು. ವಿದ್ಯಾರ್ಥಿಗಳಿಗೆ ಈ ವಾರ ಮಧ್ಯಮವು. ಕೃಷಿ ಮೂಲಗಳಿಂದ ಧನಲಾಭವು. ಕ್ರಿಮಿನಲ್ ವಿಷಯಗಳಲ್ಲಿ ಸಾಕ್ಷಿದಾರರಾಗಿ ಹೋದಲ್ಲಿ ತಾವೇ ಸಿಕ್ಕಿ ಬೀಳುವಿರಿ. ಕೆಲವರಿಗೆ ಅಪಘಾತ ಭಯವು.

ಜೂನ್ ತಿಂಗಳು : ಈ ತಿಂಗಳು ಪೂರ್ತಿ ಕೆಟ್ಟ ಫಲಗಳು ಬರಲಿವೆ. ಎನಿಸಿದ ಕಾರ್ಯಗಳು ನಿಧಾನಿಸುವುವು. ಆರೋಗ್ಯದ ದೃಷ್ಟಿಯಲ್ಲಿ ಕೆಲವರಿಗೆ ಗಂಟಲು ನೋವು ಮತ್ತು ಅಸ್ತಮ ದೋಷವು. ವಿದ್ಯಾರ್ಥಿಗಳಿಗೆ ತ್ರಾಸದಾಯಕ ತಿಂಗಳಾಗಲಿದೆ. ಪತ್ನಿಗೆ ಅನಾರೋಗ್ಯ ಸಂಭವವು. ಕೆಲವರಿಗೆ ವಿಷ ಜಂತುಗಳ ಪೀಡೆಯು. ತಂದೆಯ ಆರೋಗ್ಯದ ದೃಷ್ಟಿಯಲ್ಲಿ ಜಾಗ್ರತೆ ಅಗತ್ಯವು. ಎಲ್ಲದಕ್ಕೂ ಶ್ರೀ ಗಣೇಶ ಮತ್ತು ಸುಬ್ರಹ್ಮಣ್ಯ ದೇವರ ಸ್ತುತಿಗಳಿಂದ ಪರಿಹಾರವು.

ಜುಲ್ಯಾ ತಿಂಗಳು : ತಿಂಗಳ ಪ್ರಾರಂಭದಲ್ಲಿ ಎಲ್ಲಾ ಕಾರ್ಯಗಳು ಆಲಸ್ಯದಿಂದ ನೆರವೇರುವುದು. ಸಹೋದರರಿಂದ ಧನಸಹಾಯ ಸಂಭವವು. ತಿಂಗಳ ಮಧ್ಯಾಂತರ ನಂತರ ಕಿರಿಯ ಸಹೋದರರಿಗೆ ಅದೃಷ್ಟವು ಕೆಲವರಿಗೆ ಶೀತ ಕಫಾದಿ ದೋಷಗಳಿಂದ ಆರೋಗ್ಯ ಬಾಧೆಯು. ಕೆಲವು ದುಷ್ಟ

CC-O. In Public Domain. Digitized by eGangotri

ವ್ಯಕ್ತಿಗಳಿಂದ ಕೃತಿಮ ದೋಷಗಳು ಉಂಟಾಗಬಹುದು. ಎಲ್ಲದಕ್ಕೂ ಶಿವನಿಗೆ ರುದ್ರಾಭಿಷೇಕದಿಂದ ಪರಿಹಾರವು.

ಆಗೋಸ್ತು ತಿಂಗಳು : ಸರಕಾರಿ ಉದ್ಯೋಗಿಗಳಿಗೆ ಸ್ಥಳ ಬದಲಾವಣೆ ಸಂಭವವು. ಕಿರಿಯ ಸಹೋದರನಿಗೆ ಸರಕಾರಿ ಇಲಾಖೆಗಳಲ್ಲಿ ಉದ್ಯೋಗ ಸಿಗುವ ಸಂಭವವು. ಕೆಲವರಿಗೆ ಉಷ್ಣ ಪ್ರಕೋಪದಿಂದ ಉದರ ಬೇನೆ ದೋಷವು. ರವಿ ಗುರುಗಳ ಯುತಿಯಿಂದ ಸಾಹಿತ್ಯ ಮತ್ತು ಪತ್ರಿಕೋದ್ಯಮಿಗಳಿಗೆ ಅದೃಷ್ಟ ಖುಲಾಯಿಸುವುದು.

ಸೆಪ್ಟೆಂಬರ್ ತಿಂಗಳು : ಈ ರಾಶಿಯವರಿಗೆ ಪ್ರಾರಂಭದ ದಿನಗಳಲ್ಲಿ ಶುಭದಾಯಕವಾಗಲಿದೆ. ಹಿರಿಯಣ್ಣನಿಗೆ ವಿದೇಶಗಳಲ್ಲಿ ಉದ್ಯೋಗ ಲಭ್ಯ ಸಂಭವವು. ವ್ಯಾಪಾರ ವ್ಯವಹಾರಗಳಿಂದ ಅದೃಷ್ಟವು. ತಿಂಗಳ ಮಧ್ಯದ ನಂತರ ರವಿಯು ಚತುರ್ಥದಲ್ಲಿರುವನು. ಇದರಿಂದ ಕೆಲವರಿಗೆ ಬೆಂಕಿಯಿಂದ ಭಯವು. ಕೆಲವರಿಗೆ ಚರ್ಮದ ವ್ಯಾಧಿಯು. ಅಂಗಾರಕ ದೋಷಗಳಿಂದ ಸ್ತ್ರೀಯರ ವಿವಾಹ ನಿಧಾನವು. ಶ್ರೀ ಸುಬ್ರಹ್ಮಣ್ಯ ದೇವರ ಸೇವೆಯಿಂದ ಪರಿಹಾರವು.

ಅಕ್ಟೋಬರ್ ತಿಂಗಳು : ಈ ತಿಂಗಳ ಪ್ರಾರಂಭದಲ್ಲಿ ವಿಪರೀತ ಖರ್ಚುಗಳು ಉಂಟಾಗುವುವು. ವಾಹನಗಳ ಪ್ರಯಾಣದಿಂದ ತೊಂದರೆಯು. ವಾರದ ಮಧ್ಯಂತಾರದ ನಂತರ ತಂದೆಗೆ ಅರಿಷ್ಟವು. ಮಕ್ಕಳ ವಿವಾಹದ ಬಗ್ಗೆ ಚಿಂತೆಯು. ಕೆಲವರಿಗೆ ಉಷ್ಣ ಪ್ರಕೋಪದಿಂದ ಆರೋಗ್ಯ ಕೆಡುವುದು.

ನವೆಂಬರ್ ತಿಂಗಳು : ತಿಂಗಳ ಪ್ರಾರಂಭದಲ್ಲಿ ಮಾನಸಿಕ ಕ್ಷೋಪವನ್ನು ಅನುಭವಿಸುವ ನಿಮಗೆ ಮಧ್ಯಾಂತರ ನಂತರ ಶುಭವು. ಹೊಟೇಲ್ ಉದ್ಯಮಗಳಿಂದ ಧನಪ್ರಾಪ್ತಿಯು. ವೈದ್ಯಕೀಯ ವೃತ್ತಿಯವರಿಗೆ ಅದೃಷ್ಟವು ಕೆಲವರಿಗೆ ದಾಂಪತ್ಯ ಜೀವನ ಸುಖಮಯವಿರಲಾರದು.

ಡಿಸೆಂಬರ್ ತಿಂಗಳು : ಪತ್ನಿಗೆ ಪ್ರಯಾಣಗಳಿಂದ ತೊಂದರೆಯು. ದಾಂಪತ್ಯ ಜೀವನದಲ್ಲಿ ವಿರಸವು. ತಂದೆಯವರ ಆರೋಗ್ಯ ಕೆಡುವ ಸಂಭವವು. ವ್ಯಾಪಾರದಲ್ಲಿ ಏರುಪೇರು ಉಂಟಾಗಬಹುದು.

ಕರ್ಕಾಟಕ ರಾಶಿ

ಕಳೆದ 2 ವರ್ಷಗಳಿಂದ ಗುರುಬಲವಿಲ್ಲದೆ ಕಷ್ಟದ ಸರಮಾಲೆಗಳನ್ನು ಅನುಭವಿಸುವ ನಿಮಗೆ ಈ ವರ್ಷ ಎಂದರೆ 14–8–1991 ರ ನಂತರ ಆದೃಷ್ಟವೆಂತಲೇ ಹೇಳಬೇಕು. ಈ ಸಾರಿ ಭಾಗ್ಯಾಧಿಪತಿಯಾದ ಗುರುವು ದ್ವಿತೀಯದಲ್ಲಿದ್ದು ಒಳ್ಳೆಯ ಗುರುಬಲವಿದೆ. ಅವಿವಾಹಿತ ಸ್ತ್ರೀಪುರುಷರಿಗೆ ವಿವಾಹ ಭಾಗ್ಯದ ಯೋಗದ ಫಲವು. ಈ ರಾಶಿಯ ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಗಳಿಸಿ ತೇರ್ಗಡೆ ಹೊಂದುವರು. ಹೊಸದಾಗಿ ವ್ಯಾಪಾರ ಪ್ರಾರಂಭಿಸಲು ಈ ವರ್ಷ ಶುಭವು. ಶನಿಯು ಮೊದಲ ರಾಶಿಯಿಂದ ಸಪ್ತಮದಲ್ಲಿದ್ದು ಶಶಯೋಗವೆಂಬ ರಾಜಯೋಗವು.

Sri Vidyabharathi Book Centre, Sringeri

CC-O. In Public Domain. Digitized by eGangotri

ವ್ಯಾಪಾರ ವ್ಯವಹಾರದಿಂದ ಉತ್ತಮ ಫಲಿತಾಂಶ ದೊರೆಯುವುದು. ಆದರೆ ದಾಂಪತ್ಯ ಜೀವನ ಮಾತ್ರ ಸುಖಮಯವಿರಲಾರದು. ರಾಹುಕೇತುಗಳು ಅನುಕ್ರಮವಾಗಿ ಷಷ್ಠ ಮತ್ತು ವ್ಯಯದಲ್ಲಿರುವರು. ನಾನಾಮೂಲಗಳಿಂದ ಧನಪ್ರಾಪ್ತಿಯು. ಅನೇಕ ತೀರ್ಥ ಕ್ಷೇತ್ರಗಳನ್ನು ಸಂದರ್ಶಿಸುವ ಫಲವು. ಈ ರಾಶಿಯವರ ಅದೃಷ್ಟ ಅಂಕೆ:– 9 ಅದೃಷ್ಟದ ಹರಳು:– ಕೆಂಪು ಹವಳ. ಈ ರಾಶಿಯವರಿಗೆ ರವಿ ಮತ್ತು ಚಂದ್ರರು ಧನಿಷ್ಠ, ಶತಭಿಷ ಮತ್ತು ಪೂರ್ವಾಭಾದ್ರಗಳಲ್ಲಿ ಸಂಚರಿಸುವಾಗ ಎಂದರೆ 12–2–1992 ರಿಂದ 15–3–1992 ರ ಸಮಯದಲ್ಲಿ ತಂದೆ ತಾಯಂದಿರಿಗೆ ಅರಿಷ್ಠವು.

ಜನವರಿ ತಿಂಗಳು : ತಿಂಗಳ ಪ್ರಾರಂಭದಲ್ಲಿ ಧನಾಧಿಪತಿ ರವಿಯು ಷಷ್ಠದಲ್ಲಿ ಸಂಚರಿಸುವುದರಿಂದ ಧನಲಾಭವು. ಆಕಸ್ಮಿಕ ಸಂಪತ್ತು ಪ್ರಾಪ್ತಿಯು. ನಾನಾತರದ ಏಜನ್ಸಿಗಳಿಂದ ಲಾಭವು. ಸರಕಾರಿ ನೌಕರರಿಗೆ ಭಡ್ತಿ ಸಂಭವವು. 15–1–1992 ರ ನಂತರ ರವಿಯು ಸಪ್ತಮದಲ್ಲಿರುವನು. ಇದರಿಂದ ಶಾರೀರಿಕ ಆನಾರೋಗ್ಯವು. ಲೋಹಗಳ ವ್ಯವಹಾರದಿಂದ ಲಾಭವು. ತಂದೆ ಮಗಂದಿರಲ್ಲಿ ಕಲಹ ಉಂಟಾಗಬಹುದು. ವಾಹನಗಳಿಂದ ಅಪಘಾತ ಭಯವು.

ಫೆಬ್ರವರಿ ತಿಂಗಳು : ತಿಂಗಳ ಪೂರ್ತಿ ಕೆಟ್ಟಫಲವು. ವ್ಯಾಪಾರದಲ್ಲಿ ಏರುಪೇರು ಉಂಟಾಗಬಹುದು. ಪತ್ನಿಗೆ ಉದರ ಬೇನೆ ಸಂಭವವು. 13–2–1992 ರ ನಂತರ ರವಿಯು ಅಷ್ಠಮ ಪ್ರವೇಶಿಸುವನು. ತಂದೆಗೆ ಅರಿಷ್ಠ. ಶಿವನಿಗೆ ರುದ್ರಾಭಿಷೇಕದಿಂದ ಪರಿಹಾರವು. ಕ್ರಿಮಿನಲ್ ವಿಷಯಗಳಲ್ಲಿ ಜಾಗ್ರತೆಯು. ರಾಜಕೀಯ ವ್ಯಕ್ತಿಗಳಿಗೆ ಕಂಟಕ ಭಯವು.

ಮಾರ್ಚ್ ತಿಂಗಳು : ತಿಂಗಳ ಪ್ರಾರಂಭದ 15 ದಿನಗಳಲ್ಲಿ ಆರೋಗ್ಯ ಸರಿಯಿರಲಾರದು. ಕೆಲವರಿಗೆ ಉದರ ಬೇನೆ ಮತ್ತು ನೇತ್ರ ಪೀಡೆ ಸಂಭವವು. ಜಾಮೀನು ವಿಷಯಗಳಲ್ಲಿ ಸಿಕ್ಕಿ ಬೀಳುವಿರಿ. ಜೋಕೆ ಮಾತಿನಲ್ಲಿ ಸಿಕ್ಕಿ ಬೀಳುವಿರಿ. ಪತ್ನಿ ಯಾ ಪತಿಯ ಕುಟುಂಬದವರಿಗೆ ಅರಿಷ್ಠವು. 15–3–92 ರ ನಂತರ ಉತ್ತಮ ಫಲವು. ಕೆಲವರಿಗೆ ವಿದೇಶ ಯಾತ್ರೆಯ ಫಲವು. ಕುಟುಂಬದಲ್ಲಿ ಪ್ರಾಯಸ್ತರಿಗೆ ಅರಿಷ್ಠವು. ಹೊಸದಾಗಿ ವ್ಯಾಪಾರ ಪ್ರಾರಂಭಿಸಲು ಈ ತಿಂಗಳು ಶುಭವು.

ಏಪ್ರಿಲ್ ತಿಂಗಳು : ಪ್ರಾರಂಭದ ದಿನಗಳಲ್ಲಿ ಆನಿರೀಕ್ಷಿತ ಪ್ರಯಾಣ ಒದಗುವ ಸಂಭವವು. ಕೆಲವರಿಗೆ ತೀರ್ಥ ಯಾತ್ರೆ ಯೋಗದ ಫಲವು. 14–4–1992 ರ ನಂತರ ಉತ್ತಮ ಫಲವು. ಒಳ್ಳೆಯ ಗುರುಬಲವಿರುವುದರಿಂದ ಅವಿವಾಹಿತ ಸ್ತ್ರೀ ಪುರುಷರಿಗೆ ವಿವಾಹ ಯೋಗದ ಫಲವು. ಕೆಲವರಿಗೆ ವಿವಾಹದ ನಂತರ ಭಾಗ್ಯಾಭಿವೃದ್ಧಿಯು. ಕೆಲವರಿಗೆ ಹೆಚ್ಚಿನ ವ್ಯಾಸಂಗಕ್ಕೆ ವಿದೇಶ ಪ್ರಯಾಣದ ಯೋಗದ ಫಲವು.

ಮೇ ತಿಂಗಳು : ಈ ರಾಶಿಯ ವಿದ್ಯಾರ್ಥಿಗಳಿಗೆ ಈ ತಿಂಗಳು ಶುಭವು. ವಾಣಿಜ್ಯ ಮತ್ತು ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಹೆಚ್ಚಿನ ಅಂಕಗಳನ್ನು ಗಳಿಸಿ ತೇರ್ಗಡೆ ಹೊಂದುವರು.

CC-O. In Public Domain. Digitized by eGangotri

ಕೆಲವರಿಗೆ ವಾಹನಗಳನ್ನು ಖರೀದಿಸುವ ಯೋಗದ ಫಲವು. ಕೆಲವರಿಗೆ ಲಾಟರಿ ಮತ್ತು ಏಜನ್ಸಿಗಳಿಂದ ಧನಲಾಭವು. ಶೇರು ಬಂಡವಾಳ ಹೂಡುವವರಿಗೆ ಈ ತಿಂಗಳು ಶುಭವು. ಕೆಲವು ಸರಕಾರಿ ನೌಕರರು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬಹುದು.

ಜೂನ್ ತಿಂಗಳು : ತಿಂಗಳ ಪ್ರಾರಂಭದಲ್ಲಿ ಅನೇಕ ವಿಧಗಳಿಂದ ಉತ್ತಮ ಫಲಿತಾಂಶವು. ಅವಿವಾಹಿತ ಸ್ತ್ರೀಯರಿಗೆ ವಿವಾಹಯೋಗದ ಫಲವು. ಕೆಲವರಿಗೆ ಪ್ರೇಮ ವಿವಾಹದ ಸಾಧ್ಯತೆಯು. 15–6–1992 ರ ನಂತರ ಆರೋಗ್ಯ ದೃಷ್ಟಿಯಲ್ಲಿ ದೃಷ್ಟಿ ದೋಷವು. ಸರಕಾರಿ ನೌಕರರಿಗೆ ಮೇಲಿನ ಅಧಿಕಾರಿಗಳಿಂದ ಮಮೋ ಬರಬಹುದು. ಕೆಲವರಿಗೆ ವಿನಾಕಾರಣ ಪ್ರಯಾಣ ಸಂಭವವು.

ಜುಲ್ಯಾ ತಿಂಗಳು : ತಿಂಗಳ ಪ್ರಾರಂಭದಲ್ಲಿ ಬಂಧನಯೋಗವು. ಇದರಿಂದ ಕ್ರಿಮಿನಲ್ ವಿಷಯಗಳಲ್ಲಿ ತಾವು ಭಾಗಿಗಳಾಗಿ ಬಂಧನ ಉಂಟಾಗಬಹುದು. ಬಹಳ ಜಾಗ್ರತೆಯಿರಿ. ಸಿಡುಕನ್ನು ಕಡಿಮೆ ಮಾಡಿ. ಕೆಲವು ಗುಪ್ತ ವಿಷಯಗಳಲ್ಲಿ ಜಾಗ್ರತೆ ಅಗತ್ಯವು. ತಿಂಗಳ ಮಧ್ಯಾಂತರ ನಂತರ ಶಾರೀರಿಕ ಪೀಡೆಯು. ಕೆಲವರಿಗೆ ಹೃದಯಬೇನೆ ಉಂಟಾಗಬಹುದು. ಈ ರಾಶಿಯ ಗರ್ಭಿಣಿ ಸ್ತ್ರೀಯರು ಜಾಗ್ರತರಾಗಿರುವುದು ಉತ್ತಮವು. ಸ್ತ್ರೀ ಉದ್ಯೋಗಿಗಳಿಗೆ ಮೇಲಿನ ಅಧಿಕಾರಿಗಳಿಂದ ಕಿರುಕುಳವು.

ಆಗೋಸ್ತು ತಿಂಗಳು : ಪ್ರಾರಂಭದ ಕೆಲವು ದಿನಗಳಲ್ಲಿ ಕೆಲವರಿಗೆ ಎಸಿಡಿಟಿ ದೋಷದಿಂದ ಉದರಬೇನೆ ಬರಬಹುದು. ವಾಹನಗಳಿಂದ ಅಪಘಾತ ಭಯವು. ಕೌಟುಂಬಿಕ ಕಿರಿ ಕಿರಿಯು. ಮಧ್ಯಾಂತರದ ನಂತರ ಉತ್ತಮ ಫಲವು. ಅವಿವಾಹಿತ ಸ್ತ್ರೀಪುರುಷರಿಗೆ ವಿವಾಹ ಯೋಗದ ಫಲವು. ಕೆಲವರಿಗೆ ಪಿತ್ರು ಸಂಬಂಧ ಧನ ಪ್ರಾಪ್ತಿ ಯೋಗದ ಫಲವು.

ಸೆಪ್ಟೆಂಬರ್ ತಿಂಗಳು : ವೈದ್ಯಕೀಯ ವಿಭಾಗದ ವಿದ್ಯಾರ್ಥಿಗಳು ಮತ್ತು ತಾಂತ್ರಿಕ ವಿದ್ಯಾರ್ಥಿಗಳಿಗೆ ಶುಭವು. ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆಯುವರು. ಸರಕಾರಿ ನೌಕರರಿಗೆ ಧನಲಾಭವು. ಅವಿವಾಹಿತ ಸ್ತ್ರೀಯರಿಗೆ ವಿವಾಹ ಯೋಗದ ಫಲವು. ಆದರೆ 11–9–1992 ರ ನಂತರ ಗುರುವು ತೃತೀಯಕ್ಕೆ ಪ್ರವೇಶಿಸುವನು. "ತ್ರಿಷ್ಕು ದುರ್ಯೋಧನ ಹತ:" ಎಂಬಂತೆ ಕೆಲವರಿಗೆ ಕಾರ್ಯ ವಿಘ್ನವು. ಗುರುಬಲ ತಪ್ಪುವುದು. ಲೇಖಕರಿಗೆ ಉತ್ತಮ ಫಲವು.

ಆಕ್ಟೋಬರ್ ತಿಂಗಳು : ಸರಕಾರಿ ಅಧಿಕಾರಿಗಳಿಗೆ ಭಡ್ತಿ ಸಂಭವವು. ಪ್ರಯಾಣದಿಂದ ಧನಲಾಭವು. ಕೆಲವರಿಗೆ ಗಂಟಲು ನೋವಿನಿಂದ ನರಳಾಟವು. ಕೆಲವರಿಗೆ ಚರ್ಮ ವ್ಯಾಧಿಯ ತೊಂದರೆಯು. ಸಂಪರ್ಕ ಇಲಾಖೆಯವರಿಗೆ ಅದೃಷ್ಟವು. ಕಿರಿಯ ಸಹೋದರನಿಗೆ ಉದ್ಯೋಗ ಲಭ್ಯವು. ಸಾಹಿತಿಗಳಿಗೆ ಹರ್ಷದಾಯಕ ತಿಂಗಳಾಗಲಿದೆ.

Sri Vidyabharathi Book Centre, Sringeri

ನವೆಂಬರ್ ತಿಂಗಳು : ಈ ತಿಂಗಳು ಮಿಶ್ರಿತ ಫಲಗಳನ್ನು ಅನುಭವಿಸುವಿರಿ. ತಾಯಿಗೆ

CC-O. In Public Domain. Digitized by eGangotri

ಆನಾರೋಗ್ಯ ಸಂಭವವು. ವಿಪರೀತ ಖರ್ಚು ಒದಗಬಹುದು. ಬಾಕಿಯಿದ್ದ ಸಾಲ ತೀರಬಹುದು. ವ್ಯಾಪಾರದಲ್ಲಿ ಉತ್ತಮ ಫಲವು. 4–11–92 ರ ನಂತರ ಕುಜನು ಜನ್ಮರಾಶಿಗೆ ಬರುವುದರಿಂದ ಕೌಟುಂಬಿಕ ಕಿರಿಕಿರಿ. ಒಡಹುಟ್ಟಿದವರಿಗೆ ಅರಿಷ್ಟವು. ಹೃದಯ ಬೇನೆ ಸಂಭವವು. ಮಾನಸಿಕ ಕ್ಲೇಶವು.

ದಶಂಬರ ತಿಂಗಳು : ಕಳೆದ ತಿಂಗಳು ಕಟ್ಟಿ ಫಲಗಳನ್ನು ಅನುಭವಿಸಿರುವ ನಿಮಗೆ ಈ ತಿಂಗಳು ಸುಧಾರಣೆಯು. ನಾನಾ ಮೂಲಗಳಿಂದ ಧನಪ್ರಾಪ್ತಿಯು. ಲಾಟರಿ ಏಜನ್ಸಿಗಳಿಂದ ಧನಲಾಭವು. ಕೆಲವರಿಗೆ ವಿದೇಶಗಳಿಂದ ಬಹುಮಾನ ಬರಬಹುದು. ಆದರೆ ಗರ್ಭಿಣಿ ಸ್ತ್ರೀಯರಿಗೆ ನಾಗನ ದೋಷದಿಂದ ಪ್ರಸವ ಸಮಯದಲ್ಲಿ ಕಷ್ಟ ಉಂಟಾಗಬಹುದು. ಶ್ರೀ ಸುಬ್ರಹ್ಮಣ್ಯ ದೇವರ ಸಂಕಲ್ಪದಿಂದ ಪರಿಹಾರವು.

ಸಿಂಹರಾಶಿ

ಈ ರಾಶಿಯವರಿಗೆ ಈ ವರ್ಷ ಮಿಶ್ರಿತ ಫಲಗಳು ದೊರಕಲಿವೆ. "ಲಗ್ನೇ ರಾಮವನೇ ದುಃಖ" ಎಂಬಂತೆ ಗುರು ಜನ್ಮದಲ್ಲಿದ್ದು ಅರಿಷ್ಟವು. ವೃತ ಅಲೆದಾಟವು. ಆರ್ಥಿಕ ಮುಗ್ಗಟ್ಟು ಒದಗಬಹುದು. ಪ್ರೀತಿಯ ವಸ್ತುವು ಕಳೆದು ಹೋಗಬಹುದು ಅಥವಾ ಕಳ್ಳತನವಾಗಬಹುದು. ವಿವಾಹಾದಿ ಶುಭ ಕಾರ್ಯಗಳಿಗೆ 11–9–1992 ರ ವರೆಗೆ ಗುರುಬಲವಿಲ್ಲ. ಆದರೆ ಶನಿಪರಮಾತ್ಮನು ಈ ರಾಶಿಯವರಿಗೆ ಒಳ್ಳೆಯವನು. ಇವನು ಷಷ್ಠದಲ್ಲಿರುವನು. ಇದರಿಂದ ಕಷ್ಟಕಾಲದಲ್ಲಿ ಕೆಲವು ಸ್ನೇಹಿತರಿಂದ ಅನಿರೀಕ್ಷಿತ ಧನ ಸಹಾಯವು. ಶ್ರೀಮಂತರಿಗಿಂತ ಬಡವರೇ ಲೇಸೆಂದು ತಿಳಿದು ಕೊಳ್ಳುವಿರಿ. ಹೊಸದಾಗಿ ವ್ಯಾಪಾರ ಪ್ರಾರಂಭಿಸಲು ಬ್ಯಾಂಕ್ ಮತ್ತು ಸಹಕಾರಿ ಸಂಘಗಳಿಂದ ಸಾಲ ಸಿಗಬಹುದು. ರಾಹುವು ಪಂಚಮದಲ್ಲಿರುವುದರಿಂದ ಗರ್ಭಿಣಿ ಸ್ತ್ರೀಯರು ಸುಲಭ ಪ್ರಸವ ಆಗಲು ಶ್ರೀ ಸುಬ್ರಹ್ಮಣ್ಯ ದೇವರ ಸಂಕಲ್ಪ ಮಾಡುವುದರಿಂದ ಪರಿಹಾರವು. ಈ ರಾಶಿಯವರಿಗೆ ಅದೃಷ್ಟ ಅಂಕೆ:– 9. ಹರಳು:– ಕೆಂಪು ಹವಳ. 15–3–1992 ರಿಂದ 14–4–1992 ರವರೆಗೆ ಅರಿಷ್ಟವು.

ಜನವರಿ ತಿಂಗಳು : ತಿಂಗಳ ಪ್ರಾರಂಭದಲ್ಲಿ ಪಿತೃಕಾರಕ ಗ್ರಹ ರವಿಯು ಪಂಚಮದಲ್ಲಿರುವುದರಿಂದ ತಂದೆಗೆ ಅರಿಷ್ಟವು. ಶ್ರೀ ಶಿವನಿಗೆ ರುದ್ರಾಭಿಷೇಕದಿಂದ ಪರಿಹಾರವು. ರಾಹುವಿನ ಫಲದಿಂದ ಸಣ್ಣ ಮಕ್ಕಳಿಗೆ ಬಾಲಾಚೇಷ್ಟೆಯು. ಶ್ರೀ ಸುಬ್ರಹ್ಮಣ್ಯ ದೇವರ ಸೇವೆಯಿಂದ ಪರಿಹಾರವು. 15–1–1992 ರ ನಂತರ ಉತ್ತಮ ಫಲವು. ಅನಿರೀಕ್ಷಿತ ಧನಲಾಭವು. ಮಾಡಿದ ಸಾಲ ಸ್ವಲ್ಪ ಪರಿಹಾರವಾಗಬಹುದು. ಸ್ತ್ರೀ ಉದ್ಯೋಗಿಗಳಿಗೆ ವರ್ಗಾವಣೆ ಸಂಭವವು.

ಫೆಬ್ರವರಿ ತಿಂಗಳು : ತಿಂಗಳ ಪ್ರಾರಂಭದಲ್ಲಿ ಶುಭವು. ಭೂಸಂಬಂಧ ದೂರುಗಳು ನ್ಯಾಯಾಲಯಗಳಲ್ಲಿದ್ದರೆ ಉತ್ತಮ ಫಲಿತಾಂಶ ದೊರಕಬಹುದು. ಪಿತೃ ಸಂಬಂಧ ಆಸ್ತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಲಭ್ಯವು. ಭೂ ವ್ಯವಹಾರಗಳಲ್ಲಿ ಜಯಶೀಲರಾಗುವಿರಿ. 14–2–1992 ರ ನಂತರ ಆರಿಷ್ಟವು. ಎಸಿಡಿಟಿ ದೋಷದ ರೋಗಿಗಳಿಗೆ ಉದರ ಬೇನೆ ಸಂಭವವು. ಪತ್ನಿ ಯಾ ಪತಿ ಅನಾರೋಗ್ಯವು. ಪ್ರಯಾಣದಿಂದ ತೊಂದರೆಯು.

ಮಾರ್ಚಿ ತಿಂಗಳು : ಈ ತಿಂಗಳು ಪೂರ್ಣ ಆಶುಭವು. ವ್ಯಾಪಾರ ವ್ಯವಹಾರದಲ್ಲಿ ಏರುಪೇರು ಉಂಟಾಗಬಹುದು. ಬಂಧುಗಳಿಂದ ಅನೇಕ ದೋಷ ರೋಪಣೆಗಳನ್ನು ಎದುರಿಸಿರುವಿರಿ. 15–3–1992 ರ ನಂತರ ರವಿಯು ಅಷ್ಟಮಕ್ಕೆ ಪ್ರವೇಶಿಸುವನು. ತಂದೆಗೆ ಕಂಟಕವು. ಕೆಲವರಿಗೆ ನೀರಿನಿಂದ ಕಂಟಕ ಭಯವು. ಜಾಮೀನು ವಿಷಯಗಳಲ್ಲಿ ಜಾಗ್ರತೆಯು. ಜನ್ಮ ಮತ್ತು ಅಷ್ಟಮ ರಾಶಿಗಳಲ್ಲಿ ಪರಿವರ್ತನೆಯ ದೋಷದಿಂದ ರಾಹುಬ್ರಹಸ್ಪತಿ ಸಂಧಿದೋಷದವರಿಗೆ ಆಕಸ್ಮಿಕ ಅಪಮೃತ್ಯು ಭಯವು. ಅಂತಹ ವ್ಯಕ್ತಿಗಳು ನವಗ್ರಹ ಶಾಂತಿ, ಮೃತ್ಯುಂಜಯ ಜಪ ಶಾಂತಿ ಮಾಡಿಸಬೇಕು.

ಏಪ್ರಿಲ್ ತಿಂಗಳು : ತಿಂಗಳ ಪ್ರಾರಂಭದ ದಿನಗಳಲ್ಲಿ ಅನೇಕ ಸಂಕಷ್ಟಗಳನ್ನು ಎದುರಿಸಿದರೂ 13–4–1992 ರ ನಂತರ ಉತ್ತಮ ಫಲವು. ವಿದ್ಯಾರ್ಥಿಗಳಿಗೆ ಶುಭವು. ಕೆಲವರಿಗೆ ವಿದೇಶ ಪ್ರಯಾಣದ ಯೋಗದ ಫಲವು. ತಂದೆಗೆ ಸಮಾಜದಲ್ಲಿ ಪ್ರತಿಷ್ಠೆಯು. ಕೆಲವರಿಗೆ ಸರಕಾರದಿಂದ ಪ್ರಶಸ್ತಿಗಳ ಲಭ್ಯತೆ ಸಾಧ್ಯವು. ಪಿತ್ರಾರ್ಜಿತ ಆಸ್ತಿ ಲಭ್ಯವು.

ಮೇ ತಿಂಗಳು : ವಿದೇಶಗಳಲ್ಲಿ ನೆಲಸಿರುವ ಬಂಧುಗಳು ಊರಿಗೆ ಬಂದು ಶುಭಕಾರ್ಯಗಳಲ್ಲಿ ಭಾಗವಹಿಸುವರು. ರಾಜಕೀಯ ವ್ಯಕ್ತಿಗಳಿಗೆ ಪ್ರತಿಷ್ಠೆಯು. 15–5–1992 ರ ನಂತರ ಸರಕಾರಿ ಅಧಿಕಾರಿಗಳಿಗೆ ಜವಾಬ್ದಾರಿ ಹೆಚ್ಚುವುದು. ಕೆಲವು ಸರಕಾರಿ ಅಧಿಕಾರಿಗಳಿಗೆ ರಾಜಕೀಯ ವ್ಯಕ್ತಿಗಳಿಂದ ಹೀಡೆ ಸಂಭವವು. ಸಂಪರ್ಕ ಇಲಾಖೆಯ ಆದರ್ಶ ನೌಕರರಿಗೆ ಇಲಾಖಾವತಿಯಿಂದ ಪ್ರಶಸ್ತಿ ಲಭ್ಯವು. ಸಾರ್ವಜನಿಕ ಕ್ಷೇತ್ರದಲ್ಲಿ ಮನ್ನಣೆ ಪಡೆಯುವಿರಿ. ಸ್ತ್ರೀ ಉದ್ಯೋಗಿಗಳಿಗೆ ಭಡ್ತಿ ಸಂಭವವು.

ಜೂನ್ ತಿಂಗಳು : ರಾಶಾಧಿಪತಿ ರವಿಯೇ ತಿಂಗಳ ಮಧ್ಯಾಂತರ ನಂತರ ಲಾಭದಲ್ಲಿರುವುದರಿಂದ ಅನಿರೀಕ್ಷಿತ ಧನಲಾಭವು. ಲಾಟರಿ ಏಜನ್ಸಿಗಳಿಂದ ಉತ್ತಮ ಫಲಿತಾಂಶ ದೊರೆಯಬಹುದು. ಹೊಸದಾಗಿ ಜನ್ಮ ತಾಳಿದ ಗಂಡು ಶಿಶುವಿನ ಭಾಗ್ಯಫಲದಿಂದ ವಾಹನಗಳನ್ನು ಖರೀದಿಸುವ ಯೋಗದ ಫಲವು. ವ್ಯಾಪಾರಸ್ತರಿಗೆ ಉತ್ತಮ ಫಲತಾಂಶ ದೊರೆಯುವುದು.

ಜುಲ್ಯಾ ತಿಂಗಳು : ತಿಂಗಳ ಮೊದಲ 15 ದಿನಗಳಲ್ಲಿ ಶುಭ ಫಲಗಳನ್ನು ಪಡೆಯುವ ತಾವು ನಂತರದ ದಿನಗಳಲ್ಲಿ ಕೆಟ್ಟ ಫಲಗಳನ್ನು ಅನುಭವಿಸುವಿರಿ. ತಂದೆ ಮಕ್ಕಳಲ್ಲಿ ಆಸ್ತಿ ಸಂಬಂಧ ಜಗಳ ಬರಬಹುದು. ನೇತ್ರ ಹೀಡೆ ದೋಷವು. ಕೆಲವರಿಗೆ ಉದರ ಬೇನೆ ಮತ್ತು ಹಳದಿರೋಗದ ಸಂಭವವು. ಕ್ರಿಮಿನಲ್ ವಿಷಯಗಳಲ್ಲಿ ಸಿಕ್ಕಿ ಬೀಳುವಿರಿ. ಜಾಗ್ರತ ವೈರಿಗಳು ಮಿತ್ರರಾಗುವರು.

ಆಗೋಸ್ತು ತಿಂಗಳು : ತಿಂಗಳ ಮೊದಲ ಭಾಗದ ಅನೇಕ ಸ್ವಲ್ಪಾಲಾಟ್ಟಿಗೆ ಉತ್ತಮವು. ಹಿರಿಯ

Sri Vidyabharathi Book Centre

CC-O. In Public Domain. Digitized by eGangotri

ಮಗನಿಗೆ ಸರಕಾರಿ ಕ್ಷೇತ್ರಗಳಲ್ಲಿ ಉದ್ಯೋಗ ಲಭ್ಯವು. ರಾಜಕೀಯ ವ್ಯಕ್ತಿಗಳಿಗೆ ಶುಭದಾಯಕವು. ಆದರೆ ಕೆಲವೊಮ್ಮೆ ಅನಿರೀಕ್ಷಿತ ಬೆಂಕಿ ಸಂಬಂಧ ದುರ್ಘಟನೆ ನಡೆಯಬಹುದು. ಶ್ರೀ ಧರ್ಮಸ್ಥಳ ಮಂಜುನಾಥ ಸ್ವಾಮಿಯವರ ಸಂಕಲ್ಪದಿಂದ ಪರಿಹಾರವು. ವಕೀಲರಿಗೆ ಅದೃಷ್ಟವು.

ಸೆಪ್ಟೆಂಬರ್ ತಿಂಗಳು : ಹಿರಿಯಣ್ಣನಿಗೆ ವಿದೇಶ ಪ್ರಯಾಣದ ಯೋಗದ ಫಲವು. ಸಿಮೆಂಟ್ ಉದ್ಯಮದ ಶೇರುಗಳಲ್ಲಿ ಮೃದ್ದಿಯು. ತಿಂಗಳ ಮಧ್ಯಾಂತರ ನಂತರ ಜನ್ಮಾಧಿಪತಿ ರವಿಯು ದ್ವಿತೀಯದಲ್ಲಿರುವನು. ವಿದ್ಯಾರ್ಥಿಗಳಿಗೆ ಶುಭವು. ರವಿಬುಧರ ಯುತಿಯಿಂದ ತರ್ಕಶಾಸ್ತ್ರದ ವಿದ್ಯಾರ್ಥಿಗಳು ಹೆಚ್ಚಿನ ಪ್ರಗತಿ ಸಾಧಿಸುವರು. ಕೆಲವರಿಗೆ ಗುಪ್ತ ನಿಧಿ ಸಿಗುವ ಸಂಭವವು. ಈ ತಿಂಗಳಲ್ಲಿ ಗುರುಬಲವಿರುವುದರಿಂದ ಅವಿವಾಹಿತರಿಗೆ ವಿವಾಹ ಯೋಗದ ಫಲವು.

ಅಕ್ಟೋಬರ್ ತಿಂಗಳು : ಉದ್ಯೋಗಸ್ತರಿಗೆ ಮತ್ತು ವ್ಯಾಪಾರಸ್ತರಿಗೆ ಶುಭವು. ಪ್ರಯಾಣದಿಂದ ಧನ ಲಾಭವು. ಆರೋಗ್ಯದ ದೃಷ್ಟಿಯಲ್ಲಿ ಕೆಲವರಿಗೆ ಕಿವಿ, ಮೂಗು ಮತ್ತು ಗಂಟಲಿಗೆ ಅರಿಷ್ಟವು. ಸಹೋದರನಿಗೆ ಉದ್ಯೋಗ ನಿಮಿತ್ತ ವಿದೇಶ ಪ್ರಯಾಣ ಯೋಗದ ಫಲವು.

ನವೆಂಬರ್ ತಿಂಗಳು : ಪ್ರಾರಂಭದ ದಿನಗಳಲ್ಲಿ ವ್ಯಾಪಾರ ವ್ಯವಹಾರದಿಂದ ಉತ್ತಮ ಫಲಿತಾಂಶ ದೊರೆಯುವುದು. 4–11–92 ರ ನಂತರ ಕುಜನು ನೀಚನಾಗಿ ಕರ್ಕರಾಶಿಯ ಪ್ರವೇಶದಿಂದ ತಂದೆಗೆ ಅರಿಷ್ಟವು. ಕೆಲವರಿಗೆ ದೃಷ್ಟಿ ದೋಷವು. ಸಹೋದರರಿಗೆ ನೀರಿನಿಂದ ಕಂಟಕ ಭಯವು. ಶ್ರೀ ಸುಬ್ರಹ್ಮಣ್ಯ ಸ್ತೋತ್ರದಿಂದ ಪರಿಹಾರವು.

ದಶಂಬರ್ ತಿಂಗಳು : ನಾಗನ ದೋಷದ ಫಲದಿಂದ ಗರ್ಭಿಣಿ ಸ್ತ್ರೀಯರಿಗೆ ಜನನ ಸಮಯದಲ್ಲಿ ಕಷ್ಟ ಆಗಬಹುದು. ಶ್ರೀಸುಬ್ರಹ್ಮಣ್ಯ ದೇವರ ಸಂಕಲ್ಪದಿಂದ ಪರಿಹಾರವು. ಅವಿವಾಹಿತ ಸ್ತ್ರೀ ಪುರುಷರಿಗೆ ವಿವಾಹಯೋಗದ ಫಲವು. ಸಾಲಗಳೆಲ್ಲಾ ಕ್ರಮೇಣ ತೀರಬಹುದು. ಹೊಸದಾಗಿ ವ್ಯಾಪಾರ ಪ್ರಾರಂಭಿಸಿದರೆ ಉತ್ತಮ ಫಲಿತಾಂಶ ದೊರಕಬಹುದು. ಮಕ್ಕಳ ಆರೋಗ್ಯದ ವಿಷಯದಲ್ಲಿ ಜಾಗ್ರತೆ ಅಗತ್ಯವು.

ಕನ್ಯಾರಾಶಿ

ಈ ವರ್ಷ ಈ ರಾಶಿಯವರು ದುರದೃಷ್ಟವಂತರೆಂದೇ ಹೇಳಬಹುದು. ಕಳೆದ ಸಲ ಗುರುಬಲವಿದ್ದ ಈ ರಾಶಿಯರಿಗೆ ಈ ವರ್ಷ ಗುರುಬಲವಿಲ್ಲ. ಗುರುಚಾರ ಫಲದಲ್ಲಿ ಹೀಗೆ ಹೇಳಿದ್ದಾರೆ. "ದ್ವಾದಶೇಶು ರಾವಣಂ ಹಂತಿ" ಇದರಿಂದ ಮಾನಸಿಕ ಚಿಂತೆ ಸಂಭವವು. ಬ್ಯಾಂಕ್ ಅಥವಾ ಸಹಕಾರಿ ಸಂಘಗಳಲ್ಲಿ ಸಾಲಗಳಿಗೆ ತಾವು ಜಾಮೀನು ನಿಂತರೆ ತಮಗೆ ಕಟ್ಟುವ ಸ್ಥಿತಿ ಬರಬಹುದು. ಸ್ತ್ರೀಯರ ಮೋಹಪಾಶಕ್ಕೆ ಬಿದ್ದು ತೊಳಲಾಡುವಿರಿ. ಕೆಲವರಿಗೆ

CC-O. In Public Domain. Digitized by eGangotri

ವಾಹನಗಳಿಂದ ಕಂಟಕ ಭಯವು. ಶ್ರೀ ರಾಘವೇಂದ್ರ ಸ್ವಾಮಿ ಅಥವಾ ದತ್ತಾತ್ರೇಯ ಸ್ವಾಮಿಯ ಮಂತ್ರ ಪಠಣೆಯಿಂದ ಪರಿಹಾರವು. ಶನಿ ಈ ರಾಶಿಯವರಿಗೆ ಪಂಚಮದಲ್ಲಿದ್ದು ಪಂಚಮ ಶನಿಕಾಟವು. ಸ್ನೇಹಿತರಿಂದ ಮೋಸಹೋಗುವಿರಿ. ಆರ್ಥಿಕ ದುಃಖ ಸ್ಥಿತಿಯು. ಸಮಾಜದ ಜನರಿಂದ ದೂಷಿಸಲ್ಪಡುವಿರಿ. ದೈನಂದಿನ ಖರ್ಚುಗಳು ಹೆಚ್ಚಾಗುವುವು. ಸಾಲ ಮಾಡುವ ಪರಿಸ್ಥಿತಿ ಒದಗಬಹುದು. ರಾಹುವು ಈ ರಾಶಿಯವರಿಗೆ ಚತುರ್ಥದಲ್ಲಿ ನೀಚನಾಗಿದ್ದು, ತಾಯಿಗೆ ಆನಾರೋಗ್ಯ ಸಂಭವವು. ಕೇತುವು ದಶಮದಲ್ಲಿರುವುದರಿಂದ ಉದ್ಯೋಗದಲ್ಲಿ ಕಿರಿಕಿರಿ ಸಂಭವವು. ಮೇಲಿನ ಅಧಿಕಾರಿಗಳಿಂದ ಮೆಮೋ ಬರಬಹುದು. ಶಿವನಿಗೆ ಎಳ್ಳೆಣ್ಣೆ ನಂದಾ ದೀಪ ಸೇವೆಯಿಂದ ಪರಿಹಾರವು. ಅದೃಷ್ಟ ಅಂಕೆ:– 5 ಅದೃಷ್ಟದ ಹರಳು:– ಪಚ್ಚೆ. ವಾರ:– ಬುಧವಾರ. 13–4–1992 ರಿಂದ 15–5–1992 ರ ಸಮಯ ಎಲ್ಲಾ ವಿಷಯಗಳಿಗೆ ಅರಿಷ್ಟವು.

ಜನವರಿ ತಿಂಗಳು : ಈ ತಿಂಗಳಲ್ಲಿ ಕಷ್ಟದ ದಿನಗಳು ಅಧಿಕವು. ರವಿ, ರಾಹುಗಳು ಚತುರ್ಥದಲ್ಲಿರುವುದರಿಂದ ತಾಯಿಗೆ ಆನಾರೋಗ್ಯ ಸಂಭವವು. ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲು ಅಧಿಕ ಶ್ರಮ ವಹಿಸಬೇಕಾಗಬಹುದು. ಮನೆಕಟ್ಟುವ ವಿಷಯವನ್ನು ಈ ತಿಂಗಳಲ್ಲಿ ನಿರ್ಧರಿಸಬೇಡಿ. ವಾಹನಗಳಿಂದ ತೊಂದರೆಯು. 15–1–1992 ರ ನಂತರ ಪಂಚಮ ರವಿಯಿಂದ ತಂದೆಗೆ ಅರಿಷ್ಟವು. ತಂದೆ ಮಗಂದಿರಲ್ಲಿ ಕಲಹ ಸಂಭವವು. ಕೆಲವರು ಆತ್ಮಹತ್ಯೆಗೆ ಪ್ರಾರಂಭಿಸುವ ಸಂದರ್ಭ ಬರಬಹುದು. ಆದರೆ ಶ್ರೀ ಶಿವ ದೇವರಿಗೆ ರುದ್ರಾಭಿಷೇಕ ಮತ್ತು ಎಳ್ಳೆಣ್ಣೆ ನಂದಾ ದೀಪ ಸೇವೆಯಿಂದ ಪರಿಹಾರವು. ಜಾಗ್ರತೆ! ಸ್ತ್ರೀಯರು ಪ್ರೇಮ ಪ್ರಕರಣದಲ್ಲಿ ಸಿಕ್ಕಿ ಬೀಳುವರು.

ಫೆಬ್ರವರಿ ತಿಂಗಳು : ತಿಂಗಳ ಪ್ರಾರಂಭದ ದಿನಗಳಲ್ಲಿ ಮಿಶ್ರಿತ ಫಲಗಳು ಉಂಟಾಗಲಿವೆ. ರಾಜಕೀಯ ವ್ಯಕ್ತಿಗಳಿಗೆ ಕಂಟಕ ಭಯವು. ವ್ಯಾಪಾರ ವ್ಯವಹಾರದಲ್ಲಿ ಏರುಪೇರು ಉಂಟಾಗಬಹುದು. 13–2–1992 ರ ನಂತರ ಉತ್ತಮ ಫಲವು. ಕೆಲವರಿಗೆ ಅನಿರೀಕ್ಷಿತ ಧನಲಾಭವು. ಸಣ್ಣ ಗ್ರಾಮೀಣ ಉದ್ಯಮಗಳನ್ನು ನಡೆಸುವವರಿಗೆ ಸರಕಾರದಿಂದ ಧನಸಹಾಯ ಲಭ್ಯವು. ಸರಕಾರಿ ನೌಕರರಿಗೆ ಸ್ಥಳ ಬದಲಾವಣೆ ಸಾಧ್ಯವು.

ಮಾರ್ಚ್ ತಿಂಗಳು : ಖಾದ್ಯ ತೈಲಗಳು, ಅಡಿಗೆ ಎಣ್ಣೆ, ಕೃಷಿ ಉತ್ಪನ್ನ ವಸ್ತುಗಳ ವ್ಯವಹಾರದಿಂದ ಲಾಭವು. ಸೋದರಮಾವನವರಿಗೆ ಅರಿಷ್ಟವು. ಕೆಲವರಿಗೆ ಲಾಟರಿ ಏಜನ್ಸಿಗಳಿಂದ ಧನಪ್ರಾಪ್ತಿ ಯೋಗದ ಫಲವು. 15–3–1992 ರ ನಂತರ ಪತಿ ಯಾ ಪತ್ನಿಗೆ ಆನಾರೋಗ್ಯ ಉಂಟಾಗಬಹುದು. ಉದ್ಯೋಗಸ್ಥ ಸ್ತ್ರೀಯರಿಗೆ ಸರಕಾರದ ಮೇಲಿನ ಅಧಿಕಾರಿಗಳಿಂದ ಕಿರುಕುಳ ಉಂಟಾಗಬಹುದು. ಲೋಹಗಳಿಗೆ ಸಂಬಂಧಪಟ್ಟ ವ್ಯವಹಾರದಿಂದ ಧನಲಾಭವು.

ಏಪ್ರಿಲ್ ತಿಂಗಳು : ಕೆಲವರಿಗೆ ವಿದೇಶ ಪ್ರಯಾಣದ ಯೋಗದ ಫಲವಿದೆ. ತಂದೆಗೆ ಅರಿಷ್ಟತೆಯು. ಶ್ರೀ ವಿದ್ಯಾಭಾರತಿ ಕರ್ನಾಟಕ ಪ್ರಾಂತ ಪ್ರಸಾರವು. ಪತಿ ಯಾ ಪತ್ನಿಯ

Sri Vidyabharathi Book Distribution Centre, Sringeri

CC-O. In Public Domain. Digitized by eGangotri

ಕುಟುಂಬದಲ್ಲಿ ಕಲಹಗಳು ಉಂಟಾಗಬಹುದು. ಪಾಲುದಾರಿಕೆ ವ್ಯಾಪಾರದಿಂದ ತೊಂದರೆಯು. 14–4–1992 ರ ನಂತರ ತಂದೆಗೆ ವಾಹನಗಳ ಪ್ರಯಾಣದಿಂದ ತೊಂದರೆಯು. ರಾಜಕೀಯ ವಿಷಯಗಳಿಗೆ ತಲೆ ಹಾಕದಿರಿ. ತಲೆ ಹಾಕಿದರೆ ಒಂದನ ಯೋಗದ ಫಲವು. ತಮ್ಮ ಮೆಚ್ಚಿನ ಸ್ನೇಹಿತ ಯಾ ಒಂಟಿ ಎದುರು ನಿಲ್ಲುವ ಸಾಧ್ಯತೆಯಿದೆ. ಸಹೋದರನಿಗೆ ದ್ವಿಚಕ್ರವಾಹನದಿಂದ ತೊಂದರೆಯು.

ಮೇ ತಿಂಗಳು : ಈ ತಿಂಗಳು ಪೂರ್ಣ ಕೆಟ್ಟ ಫಲಗಳು ಬರಲಿವೆ. ತಂದೆಯವರಿಗೆ ಶೀತ ಕಫಾದಿದೋಷದಿಂದ ತೊಂದರೆಯು. ಕೆಲವರಿಗೆ ದೃಷ್ಟಿ ದೋಷ ಉಂಟಾಗಲಿದೆ. ಪ್ರತಿಯೊಂದು ವಿಷಯದಲ್ಲೂ ಸೂಕ್ಷ್ಮತೆಯಿಂದ ನೋಡ ಬೇಕಾಗುತ್ತದೆ. ಖರ್ಚುಗಳು ಹೆಚ್ಚಾಗುವುವು. ವಿದೇಶಗಳಲ್ಲಿರುವವರಿಗೆ ಅನಾರೋಗ್ಯವು. ಕೆಲವು ಪದವೀಧರ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ನೆಲೆಯಲ್ಲಿ ವಿದೇಶ ಪ್ರಯಾಣ ಯೋಗದ ಫಲವು.

ಜೂನ್ ತಿಂಗಳು : ತಿಂಗಳ ಪ್ರಾರಂಭದ ದಿನಗಳಲ್ಲಿ ತೊಂದರೆಯು. ಕೆಲವು ಶ್ವಾಸಕೋಶಕ್ಕೆ ಸಂಬಂಧಪಟ್ಟ ರೋಗದ ಭಯವು. ಕೆಲವರಿಗೆ ಗಂಟಲು ನೋವು ಉಂಟಾಗಬಹುದು. ಸರಕಾರಿ ಅಧಿಕಾರಿಗಳಿಗೆ ಪ್ರತಿಷ್ಠೆ ಹೆಚ್ಚುವುದು. ತಂದೆಗೆ ದ್ವಿಚಕ್ರ ವಾಹನ ಪ್ರಯಾಣದಿಂದ ಅರಿಷ್ಟವು. ಕೆಲವರಿಗೆ ರಕ್ಷಣಾ ಇಲಾಖೆಯ ವಾಯುದಳದಲ್ಲಿ ಉದ್ಯೋಗ ಸಿಗುವ ಯೋಗದ ಫಲವು. ಕೈಗಾರಿಕೋದ್ಯಮಿಗಳಿಗೆ ಕಾರ್ಮಿಕರಿಂದ ಕೆಲವು ಅರಿಷ್ಟಗಳನ್ನು ಎದುರಿಸುವ ಭಯವು.

ಜುಲ್ಯಾ ತಿಂಗಳು : ಪ್ರಾರಂಭದಿಂದಲೂ ಈ ತಿಂಗಳು ಶುಭ ದಾಯಕವು. ಕೆಲವರಿಗೆ ವಾಹನಗಳನ್ನು ಖರೀದಿಸುವ ಯೋಗದ ಫಲ. ಸರಕಾರಿ ಅಧಿಕಾರಿಗಳಿಗೆ ಸ್ಥಳ ಬದಲಾವಣೆಯು. ರಾಜಕೀಯ ವ್ಯಕ್ತಿಗಳಿಗೆ ಪ್ರತಿಷ್ಠೆಯು. ವ್ಯಾಪಾರ ವ್ಯವಹಾರದಿಂದ ಅನಿರೀಕ್ಷಿತ ಧನಲಾಭವು. ಸಹೋದರನಿಗೆ ಜ್ವರ ಭಯವು.

ಅಗೋಸ್ತು ತಿಂಗಳು : ಆರೋಗ್ಯದ ದೃಷ್ಟಿಯಲ್ಲಿ ಕೆಲವರಿಗೆ ದೃಷ್ಟಿ ದೋಷ ಮತ್ತು ಉದರ ಬೇನೆ ಉಂಟಾಗಬಹುದು. ಉಷ್ಣಪ್ರಕೋಪವಿದ್ದ ರೋಗಿಗಳಿಗೆ ಉದರಬೇನೆ ಸಂಭವವು. ಬಹಳ ಸಮಯದಿಂದ ಆಸ್ವಸ್ಥತೆಯಿದ್ದವರಿಗೆ ಸ್ವಲ್ಪ ನೆಮ್ಮದಿ ಉಂಟಾಗಬಹುದು. ಕಲೆ ಮತ್ತು ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ಶುಭವು. ಕೆಲವರು IAS ಮತ್ತು IPS ಪರೀಕ್ಷೆಗಳಿಗೆ ಕೂತರೆ ತೇರ್ಗಡೆ ಹೊಂದಬಹುದು.

ಸೆಪ್ಟಂಬರ್ ತಿಂಗಳು : ಈ ತಿಂಗಳು ಮಿಶ್ರಿತ ಫಲಗಳು ಬರುವುವು. ಜನ್ಮರಾಶಿಯಲ್ಲಿ ರವಿಗುರುಗಳ ಸಂಯೋಗದಿಂದ ವಿಶ್ವ ವಿದ್ಯಾಲಯಗಳಲ್ಲಿರುವ ಪ್ರಾಧ್ಯಾಪಕರಿಗೆ ಶುಭವು. ಕೆಲವರು ತಾವೇ ರಚಿಸಿದ ಸಂಶೋಧಾತ್ಮಕ ಪ್ರಬಂಧಗಳಿಗೆ ಪ್ರಶಸ್ತಿ ಸಿಗಬಹುದು. ನಿರುದ್ಯೋಗಿ ಪದವಿಧರರಿಗೆ ಉದ್ಯೋಗ ಲಭ್ಯವು. ಆರೋಗ್ಯದ ದೃಷ್ಟಿಯಲ್ಲಿ ಕೆಲವರಿಗೆ ನಿಶ್ಯಕ್ತಿ ಉಂಟಾಗಲಿದೆ. ಸಿಹಿಮೂತ್ರ ರೋಗದವರು ಈ ತಿಂಗಳು ಜಾಗ್ರತೆಯಿರುವುದು ಉತ್ತಮವು. ತಿಂಗಳ ಮಧ್ಯಾಂತರ

CC-O. In Public Domain. Digitized by eGangotri

ನಂತರ ತಂದೆಗೆ ಅರಿಷ್ಟವು.

ಅಕ್ಟೋಬರ್ ತಿಂಗಳು : ತಿಂಗಳ ಪ್ರಾರಂಭದಲ್ಲಿ ಶಾರೀರಿಕ ಪೀಡೆ, ಅನಿರೀಕ್ಷಿತ ಪ್ರಯಾಣಗಳು ಸಂಭವಿಸಬಹುದು. ತಿಂಗಳ ಮಧ್ಯಾಂತರ ನಂತರ ಕೌಟುಂಬಿಕ ಕಲಹವು. ತಂದೆಯವರಿಗೆ ಅರಿಷ್ಟವು. ಕೆಲವರಿಗೆ ಮೂತ್ರಾದಿ ಸಂಬಂಧ ದೋಷವು. ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲು ಹೆಚ್ಚಿನ ಶ್ರಮ ವಹಿಸಬೇಕಾಗಬಹುದು. ವಿಪರೀತ ಖರ್ಚುಗಳು ಹೆಚ್ಚುವ ಸಂಭವವಿದೆ. ಕುಟುಂಬದಲ್ಲಿ ಹಿರಿಯಸ್ತ್ರೀಗೆ ಅರಿಷ್ಟವು.

ನವೆಂಬರ್ ತಿಂಗಳು : ಈ ತಿಂಗಳು ಮಿಶ್ರಿತ ಫಲಗಳು ಬರಲಿವೆ. ಪ್ರಾರಂಭದ ದಿನಗಳಲ್ಲಿ ವ್ಯಾಪಾರದಲ್ಲಿ ಏರುಪೇರು ಉಂಟಾಗಬಹುದು. ಕೆಲವರಿಗೆ ಮೂಲವ್ಯಾಧಿರೋಗ ಸಂಭವವು. ತಿಂಗಳ ಮಧ್ಯಾಂತರ ನಂತರ ಶುಭವು. ಪ್ರಯಾಣದಿಂದ ಧನಲಾಭವು. ಸಂಪರ್ಕ ಇಲಾಖೆಯ ನೌಕರರಿಗೆ ಭಡ್ತಿ ಸಂಭವವು. ಕೆಲವರಿಗೆ ಅನಿರೀಕ್ಷಿತ ಧನಲಾಭವು.

ಡಿಸೆಂಬರ್ ತಿಂಗಳು : ಪ್ರಾರಂಭದ ದಿನಗಳಲ್ಲಿ ಶುಭವು. ಸಹೋದರರಿಗೆ ಸರಕಾರಿ ಅಥವಾ ಸಾರ್ವಜನಿಕ ಕ್ಷೇತ್ರಗಳಲ್ಲಿ ಉದ್ಯೋಗ ಲಭ್ಯತೆಯು. ಗುಪ್ತ ವ್ಯವಹಾರಗಳಿಂದ ಧನಲಾಭವು. ತಿಂಗಳ ಮಧ್ಯಾಂತರ ನಂತರ ಕೆಲವರಿಗೆ ಹೃದಯ ಬೇನೆಯು. ತಾಯಿಯವರಿಗೆ ಅರಿಷ್ಟವು. ವಿದ್ಯಾರ್ಥಿಗಳಿಗೆ ಅಶುಭವು. ನೀರಿನಿಂದ ಕಂಟಕ ಭಯವು.

ತುಲಾ ರಾಶಿ

ಈ ರಾಶಿಯವರಿಗೆ ಈ ವರ್ಷ ಶುಭಫಲವು. ಇವರು ಅದೃಷ್ಟವಂತರೆ ಎಂದೇ ಹೇಳಬೇಕು. ಗುರು 10–9–1992 ರ ವರೆಗೆ ಲಾಭದಲ್ಲಿ ಸಂಚರಿಸುವನು ನಾನಾ ಮೂಲಗಳಿಂದ ಧನಪ್ರಾಪ್ತಿಯೋಗವು. ಕೈಗಾರಿಕೋದ್ಯಮಿಗಳಿಗೆ ಅದೃಷ್ಟವು. ಹೊಸದಾಗಿ ವ್ಯಾಪಾರ ಪ್ರಾರಂಭಿಸಬಹುದು. ಅವಿವಾಹಿತ ಸ್ತ್ರೀಪುರುಷರಿಗೆ ವಿವಾಹಯೋಗದ ಫಲವು. ಶನಿಯು ಮಕರದಲ್ಲಿದ್ದು, ಶಕಯೋಗವೆಂಬ ರಾಜಯೋಗವು. ಇದರಿಂದ ಕಾರ್ಮಿಕ ಬಾಂಧವರಿಗೆ ಶುಭವು. ಎನಿಸಿದ ಮನೆಯ ಕಾರ್ಯವು ಆಗುವುದು. ರಾಹುವು ತೃತೀಯದಲ್ಲಿದ್ದು ಆಕಸ್ಮಿಕ ಧನಪ್ರಾಪ್ತಿಯೋಗವು. ಎಲೆಕ್ಟ್ರೋನಿಕ್ ವಿಭಾಗದ ಶೇರುಗಳಿಂದ ಧನವೃದ್ಧಿಯು. ಭಾಗ್ಯದಲ್ಲಿ ಕೇತುವಿನಿಂದ ವಿದೇಶ ಪ್ರಯಾಣದ ಯೋಗದ ಫಲವು. ಕೆಲವರಿಗೆ ತೀರ್ಥ ಯಾತ್ರಾ ಸಂದರ್ಶನದ ಫಲವಿದೆ. ಆದರೆ ಕೆಲವರಿಗೆ ವಿಮಾನ ಯಾನದಿಂದ ಅರಿಷ್ಟವು. ಅದೃಷ್ಟ ಅಂಕೆ: 8. ಅದೃಷ್ಟದ ಬಣ್ಣ ಹಾಗೂ ಹರಳು:– ನೀಲ.

ಜನವರಿ ತಿಂಗಳು : ವರ್ಷದ ಪ್ರಾರಂಭದ ದಿನಗಳಲ್ಲಿ ಶುಭವು. ಅನೇಕ ಮೂಲಗಳಿಂದ ಧನಲಾಭವು. ಕೋದಂಡರಾಹು ದೆಶೆ ಯೋಗ ವಿದ್ಯುವರಿಗೆ ಅನಿರೀಕ್ಷಿತ ಧನಲಾಭವು. ತಿಂಗಳ

Sri Vidyabharathi Book Centre, Sringeri

CC-O. In Public Domain. Digitized by eGangotri

14 ರ ನಂತರ ರವಿಯು ಚತುರ್ಥದಲ್ಲಿರುವನು. ಮನೆಯಲ್ಲಿ ಕಲಹ ಉಂಟಾಗಬಹುದು. ವಿದ್ಯಾರ್ಥಿಗಳಿಗೆ ಮಾನಸಿಕ ನೆಮ್ಮದಿ ಇರಲಾರದು. ವಾಹನ ಪ್ರಯಾಣದಿಂದ ಅರಿಷ್ಟವು.

ಫೆಬ್ರವರಿ ತಿಂಗಳು : ಈ ತಿಂಗಳು ಪೂರ್ಣ ಶುಭವಿರದು. ಆರ್ಥಿಕ ಮುಗ್ಗಟ್ಟು, ಕೆಲವರಿಗೆ ಭೂ ಸಂಬಂಧ ತಕರಾರುಗಳು ಬರಬಹುದು. ನಿಮ್ಮಿಂದ ಸಹಾಯ ಪಡೆದ ವ್ಯಕ್ತಿಗಳೇ ಎದುರಾಗುವರು. ಪುತ್ರನ ಆರೋಗ್ಯದ ಬಗ್ಗೆ ಜಾಗ್ರತೆ ಆಗತ್ಯವು. ಸ್ನೇಹಿತರಿಂದ ಜಾಗ್ರತೆಯಿರಿ.

ಮಾರ್ಚ್ ತಿಂಗಳು : ಈ ತಿಂಗಳು ತಮಗೆ ಮಿಶ್ರಿತ ಫಲಗಳು ಉಂಟಾಗಲಿವೆ. ತಿಂಗಳ ಪ್ರಾರಂಭದಲ್ಲಿ ಸಹೋದರರಿಗೆ ಅರಿಷ್ಟವು. ಎಸಿಡಿಟಿ ದೋಷವಿದ್ದವರಿಗೆ ಉದರ ಬೇನೆ ಸಂಭವವು. ತಿಂಗಳ ಮಧ್ಯಾಂತರ ನಂತರ ಶುಭವು. ನೀರಿಗೆ ಸಂಬಂಧ ಪಟ್ಟ ವ್ಯವಹಾರದಿಂದ ಧನಲಾಭವು. ಆಕಸ್ಮಿಕ ಧನಲಾಭವು. ಉಕ್ಕು, ಎಲೆಕ್ಟ್ರೋನಿಕ್ ಮತ್ತು ಲಘಪಾನೀಯಗಳ ಕೆರುಗಳಿಂದ ಧನ ವೃದ್ಧಿಯು. ಲಾಟರಿ ಏಜನ್ಸಿಗಳಿಂದ ಧನ ಲಾಭವು. ಅವಿವಾಹಿತರಿಗೆ ವಿವಾಹ ಯೋಗದ ಫಲವು.

ಏಪ್ರಿಲ್ ತಿಂಗಳು : ತಿಂಗಳ ಪ್ರಾರಂಭದ ದಿನಗಳಲ್ಲಿ ಆದೃಷ್ಟವು. ಹೊಟೇಲ್ ಉದ್ಯಮ ಮತ್ತು ಬಟ್ಟೆಗಳ ವ್ಯವಹಾರದಿಂದ ಧನಲಾಭವು. ನಿರಖು ಠೇವಣಿ ಮತ್ತು ಏಜನ್ಸಿಗಳಿಂದ ಉತ್ತಮ ಫಲವು. 14–4–1992 ರ ನಂತರ ಅಶುಭ ಫಲವು. ದಾಂಪತ್ಯ ಜೀವನದಲ್ಲಿ ಬಿರುಕು ಉಂಟಾಗಬಹುದು. ಪತ್ನಿಯ ಆರೋಗ್ಯದಲ್ಲಿ ತೊಂದರೆಯು. ದೂರದ ಪ್ರಯಾಣದಿಂದ ಅರಿಷ್ಟವು. ಆದರೆ ಕೆಲವರಿಗೆ ವಾಹನಗಳನ್ನು ಖರೀದಿಸುವ ಯೋಗದ ಫಲವು. ಕೆಲವರಿಗೆ ವಿವಾಹ ಯೋಗದ ಫಲವು.

ಮೇ ತಿಂಗಳು : ಈ ತಿಂಗಳು ಪೂರ್ಣ ಅಶುಭವು. ಕೆಲವರಿಗೆ ಗೃಹಕಲಹದಿಂದ ಮಾನಸಿಕ ಕ್ಲೇಶವು. ವ್ಯಾಪಾರ ಸಂಬಂಧ ಅಲೆದಾಟವು. ಪ್ರಯಾಣದಿಂದ ಆರೋಗ್ಯ ಕೆಡುವ ಸಂಭವವು. 15–5–1992 ರ ನಂತರ ರವಿಯು ಅಷ್ಟಮಕ್ಕೆ ಪ್ರವೇಶಿಸುವನು. ತಂದೆಗೆ ಅರಿಷ್ಟವು. ಶಿವನಿಗೆ ರುದ್ರಾಭಿಷೇಕದಿಂದ ಪರಿಹಾರವು. ಕ್ರಿಮಿನಲ್ ವಿಷಯಗಳಲ್ಲಿ ಜಾಗ್ರತೆಯು. ರಾಜಕೀಯ ವ್ಯಕ್ತಿಗಳಿಗೆ ಪ್ರತಿಷ್ಠೆ ಕುಗ್ಗುವುದು. ಕೆಲವರಿಗೆ ದೃಷ್ಟಿ ದೋಷವು. ರಾಜಕೀಯ ಸಂಬಂಧ ಬಂಧನ ಸಾಧ್ಯತೆಯು ಇದೆ.

ಜೂನ್ ತಿಂಗಳು : ಈ ತಿಂಗಳು ಆರೋಗ್ಯದ ವಿಷಯದಲ್ಲಿ ಜಾಗ್ರತೆ. ಅಸ್ತಮ ರೋಗಿಗಳು ಅತೀ ಜಾಗ್ರತರಾಗಿರುವುದು ಉತ್ತಮವು. ವಿಮಾನ ಯಾನದಿಂದ ಅರಿಷ್ಟವು. ಕೆಲವರಿಗೆ ಶ್ವಾಸಕೋಶ ಸಂಬಂಧ ಅನಾರೋಗ್ಯ ಸಂಭವವು. ತಂದೆಯವರ ಆರೋಗ್ಯದಲ್ಲಿ ಜಾಗ್ರತೆ ಆಗತ್ಯವು. ಕೆಲವರಿಗೆ ಶಸ್ತ್ರ ಚಿಕಿತ್ಸೆ ಸಂಭವವು.

ಜುಲ್ಯಾ ತಿಂಗಳು : ತಿಂಗಳ ಪ್ರಾರಂಭದ ದಿನಗಳಲ್ಲಿ ಶೀತ ಕಫಾದಿ ದೋಷದಿಂದ ಅನಾರೋಗ್ಯ ಸಾಧ್ಯತೆಯು. ಮಧ್ಯಮ ಪ್ರಾಯಸ್ತರಿಗೆ ಹೃದಯಬೇನೆ ಉಂಟಾಗಬಹುದು. 15–7–1992

Sri Vidyabharathi Book Centre, Sringeri

CC-O. In Public Domain. Digitized by eGangotri
ರ ನುತರ ಸರಕಾರಿ ಕೆರಿಯ ಅಧಿಕಾರಿಗಳಿಗೆ ಭಡ್ತಿ ಸಂಭವವು. ಕೆಲವರಿಗೆ ಉತ್ತರ ದಿಕ್ಕಿನತ್ತ ವರ್ಗಾವಣೆ ಸಂಭವವು. ಅಧಿಕಾರಿಗಳಿಗೆ ಜವಾಬ್ದಾರಿ ಹೆಚ್ಚುವ ಸಂಭವವು. ಸ್ತ್ರೀ ಬ್ಯಾಂಕ್ ಅಧಿಕಾರಿಗಳಿಗೆ ಅನಿರೀಕ್ಷಿತ ಸ್ಥಳ ಬದಲಾವಣೆ ಸಂಭವವು.

ಆಗೋಸ್ತು ತಿಂಗಳು : ಈ ತಿಂಗಳು ಈ ರಾಶಿಯವರಿಗೆ ಹೆಚ್ಚಿನ ಶುಭ ಫಲಗಳು ಲಭಿಸಲಿವೆ. ನಾನಾ ಮೂಲಗಳಿಂದ ಧನಲಾಭವು. ಕೆಲವರಿಗೆ ಸರಕಾರದಿಂದ ಪ್ರಶಸ್ತಿ ಸಿಗುವ ಸಂಭವವು. ರಾಜಕೀಯ ವ್ಯಕ್ತಿಗಳಿಗೆ ಶುಭವು. ಈ ರಾಶಿಯ ಪದವೀಧರರು IAS IPS ಪರೀಕ್ಷೆಗಳಿಗೆ ಕೂತರೆ ಅದೃಷ್ಟ ಖುಲಾಯಿಸಬಹುದು. ಕೆಲವರಿಗೆ ವಾಹನಗಳನ್ನು ಖರೀದಿಸುವ ಯೋಗವು. ಕಲೆ ವಿಭಾಗದ ವಿದ್ಯಾರ್ಥಿಗಳಿಗೆ ಈ ತಿಂಗಳು ಶುಭವು.

ಸೆಪ್ಟೆಂಬರ್ ತಿಂಗಳು : ಈ ತಿಂಗಳ ಮಧ್ಯಾಂತರದ ವರೆಗೆ ಶುಭವು. 11–9–92 ರ ವರೆಗೆ ಗುರುವು ಲಾಭದಲ್ಲಿ ಇರುವುದರಿಂದ ಅವಿವಾಹಿತ ಸ್ತ್ರೀ ಪುರುಷರಿಗೆ ವಿವಾಹ ಯೋಗದ ಫಲವು. 15–9–1992 ರ ನುತರ ರವಿಯು ವ್ಯಯ ಭಾವ ಬರುವುದರಿಂದ ಆರೋಗ್ಯದ ದೃಷ್ಟಿಯಲ್ಲಿ ಅರಿಷ್ಟವು. ಕೆಲವರಿಗೆ ನೇತ್ರ ಪೀಡೆಯು. ಚರ್ಮರೋಗದ ಭಯವು. ವಿದೇಶಗಳಲ್ಲಿರ ತಕ್ಕವರಿಗೆ ಆರೋಗ್ಯ ಕೆಡಬಹುದು.

ಅಕ್ಟೋಬರ್ ತಿಂಗಳು : ಈ ತಿಂಗಳು ಪೂರ್ಣ ಅಶುಭದಾಯಕವು. ಕೆಲವರಿಗೆ ಮೂತ್ರ ಸಂಬಂಧ ಅನಾರೋಗ್ಯವು. ತಂದೆಗೆ ಕಂಟಕ ಭಯವು. ಕಾಟುಂಬಿಕ ಕಿರಿಕಿರಿಯು. ಸರಕಾರಿ ನೌಕರರಿಗೆ ಮೇಲಿನ ಅಧಿಕಾರಿಗಳಿಂದ ಕಿರುಕುಳ ಸಂಭವವು. ಕೆಲವರು ಸ್ನೇಹಿತರ ಸಹವಾಸದಿಂದ ತೊಂದರೆಗಳನ್ನು ಅನುಭವಿಸುವರು. ಮದ್ಯ ವ್ಯಸನಿಗಳು ಈ ತಿಂಗಳು ಜಾಗ್ರತೆ ಅಗತ್ಯವು. ವಾಹನಗಳಿಂದ ತೊಂದರೆಯು.

ನವೆಂಬರ್ ತಿಂಗಳು : ತಿಂಗಳ ಪ್ರಾರುಭದಲ್ಲಿ ಮಿಶ್ರಿತ ಫಲಗಳು ಉಂಟಾಗಲಿವೆ. ಉದ್ಯೋಗದಲ್ಲಿ ಕಿರಿಕಿರಿಯು. ಕೆಲವರಿಗೆ ಆಕಸ್ಮಿಕ ವರ್ಗಾವಣೆಯು. ಕೆಲವರು ಹಲವಾರು ಅಪಾದನೆಗಳನ್ನು ಎದುರಿಸುವರು. 15–11–1992 ರ ನುತರ ದ್ವಿತೀಯಾದಿ ಪತಿ ಕುಜ ಕರ್ಮಸ್ಥಾನದಲ್ಲಿ ನೀಚನಾದುದರಿಂದ ಕೌಟುಂಬಿಕ ಕಿರಿಕಿರಿಯು. ಜಾಗದ ಸಂಬಂಧ ನ್ಯಾಯಲಯಕ್ಕೆ ಮೊರೆ ಹೋಗುವ ಸಂಭವವು. ಆದರೆ ಕೆಲವರಿಗೆ ವಿದೇಶ ಪ್ರಯಾಣದ ಯೋಗದ ಫಲವು. ಗುಪ್ತ ವ್ಯವಹಾರಗಳಿಂದ ಲಾಭವು.

ದಶಂಬರ್ ತಿಂಗಳು : ಬ್ರಾತೃವರ್ಗದಲ್ಲಿ ಕಲಹ ಉಂಟಾಗಬಹುದು. ಗುಪ್ತ ಪ್ರೇಮವಿವಾಹ ಬಯಲಾಗುವ ಸಂಭವವು. ಹಿರಿಯ ಪುತ್ರನಿಗೆ ಅರಿಷ್ಟವು. ಶ್ರೀ ಸುಬ್ರಹ್ಮಣ್ಯ ದೇವರ ಸೇವೆಯಿಂದ ಪರಿಹಾರವು. ತಿಂಗಳ ಮಧ್ಯಾಂತರ ಶುಭದಾಯಕವು. ಕಿರಿಯ ಸಹೋದರನಿಗೆ ಉದ್ಯೋಗ ಪ್ರಾಪ್ತಿ. ಟ್ರಾವೆಲ್ ಏಜನ್ಸಿಗಳಿಂದ ಧನಲಾಭವು. ವಿದೇಶಗಳಲ್ಲಿರುವ ಬಂಧುಗಳು ಸ್ವದೇಶಕ್ಕೆ ಮರಳಬಹುದು.

CC-O. In Public Domain. Digitized by eGangotri

ವೃಶ್ಚಿಕ ರಾಶಿ

ಈ ರಾಶಿಯವರಿಗೆ ಈ ವರ್ಷ ಮಿಶ್ರಿತ ಫಲಗಳು ಬರಲಿವೆ. "ದಶಮೇಶು ಹರಭಿಕ್ಷುಃ" ಎಂಬಂತೆ ಕೆಲವರಿಗೆ ಆರ್ಥಿಕ ಮುಗ್ಗಟ್ಟು ಉಂಟಾಗಿ ಬ್ಯಾಂಕ್ ಯಾ ಸಹಕಾರಿ ಸಂಘಗಳಿಂದ ಸಾಲ ತೆಗೆಯುವ ಪ್ರಸಂಗವು. ಉತ್ಪತ್ತಿಗಿಂತ ಖರ್ಚುಗಳು ಹೆಚ್ಚುವುವು. ಕುಟುಂಬದಲ್ಲಿ ಹಿರಿಯಸ್ತ್ರೀರಿಗೆ ಅನಾರೋಗ್ಯವು. ಶ್ರೀ ದತ್ತಾತ್ರೇಯ ಸ್ವಾಮಿಯ ಸ್ತೋತ್ರದಿಂದ ಪರಿಹಾರವು. ಶನಿಯು ತೃತೀಯದಲ್ಲಿರುವುದರಿಂದ ಶುಭವು. ಕಾರ್ಮಿಕರಿಗೆ ಧನ ಯೋಗವು. ಟ್ರಾವೆಲ್ ಏಜನ್ಸಿಗಳಿಂದ ಲಾಭವು. ರಾಹು ದ್ವಿತೀಯದಲ್ಲಿರುವುದರಿಂದ ಕೌಟುಂಬಿಕ ಕಿರಿಕಿರಿಯು. ಕೇತುವು ಅಷ್ಟಮದಲ್ಲಿರುವುದರಿಂದ ದ್ವಿಚಕ್ರ ವಾಹನಗಳಿಂದ ಅರಿಷ್ಟವು. ಅದೃಷ್ಟ ಅಂಕೆ 3 ಅದೃಷ್ಟದ ಹರಳು:– ಹಳದಿ ಪುಷ್ಯರಾಗ

ಜನವರಿ ತಿಂಗಳು : ತಿಂಗಳ ಮಧ್ಯಾಂತರದ ವರೆಗೆ ಕುಟುಂಬದಲ್ಲಿ ನೆಮ್ಮದಿ ಇರಲಾರದು. ತಂದೆಯ ಆರೋಗ್ಯ ಕೆಡುವ ಸಂಭವವು. ಧಾರ್ಮಿಕ ಮುಖಂಡರಿಗೆ ಅರಿಷ್ಟವು. ಅನಾರೋಗ್ಯ ನಿಮಿತ್ತ ಹಣ ವ್ಯಯವು. 14–1–1992 ರ ನಂತರ ಶುಭವು. ಸರಕಾರಿ ಅಧಿಕಾರಿಗಳಿಗೆ ಪ್ರಯಾಣದ ದೆಶೆಯಿಂದ ಧನಲಾಭವು. ಸಹೋದರರಲ್ಲಿ ಕಲಹ ಉಂಟಾಗಬಹುದು. ಕೆಲವರಿಗೆ ಆರೋಗ್ಯದ ದೃಷ್ಟಿಯಲ್ಲಿ ಗಂಟಲು ನೋವು ಉಂಟಾಗಬಹುದು.

ಫೆಬ್ರವರಿ ತಿಂಗಳು : ತಿಂಗಳ ಪ್ರಾರಂಭದಲ್ಲಿ ಕೆಲವರಿಗೆ ಕೈಲ್ಬೆ, ಅಂಚೆ ಮತ್ತು ರಸ್ತೆ ಸಾರಿಗೆ ಇಲಾಖೆಗಳಲ್ಲಿ ಉದ್ಯೋಗ ಲಭ್ಯವು. ಸಹೋದರನಿಂದ ಧನ ಸಹಾಯ ಸಿಗಬಹುದು. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಜಯಶೀಲರಾಗುವಿರಿ. 13–2–1992 ರ ನಂತರ ತಾಯಿಗೆ ವಾತ ಸಂಬಂಧ ದೋಷವು. ಎಸಿಡಿಟಿ ದೋಷವಿದ್ದವರಿಗೆ ಉದರಬೇನೆ ಸಂಭವವು. ಕೆಲವರಿಗೆ ವಾಹನಗಳನ್ನು ಖರೀದಿಸುವ ಯೋಗದ ಫಲವು.

ಮಾರ್ಚ್ ತಿಂಗಳು : ತಿಂಗಳ ಮೊದಲ ಕೆಲವು ದಿನಗಳಲ್ಲಿ ಮನೆಯಲ್ಲಿ ಮಾನಸಿಕ ನೆಮ್ಮದಿ ಇರಲಾರದು. ಕಲಹದ ಪರಿಸ್ಥಿತಿ ಉಂಟಾಗಬಹುದು. ಅಂಗಾರಕ ದೋಷದಿಂದ ವಿವಾಹಾದಿ ಶುಭ ಕಾರ್ಯಗಳು ಮುಂದಕ್ಕೆ ಹೋಗುವುವು. 15–3–1992 ರ ನಂತರ ತಂದೆಗೆ ಅನಾರೋಗ್ಯ ದೋಷವು. ಮಧ್ಯಮ ಪ್ರಾಯಸ್ತ್ರೀರಿಗೆ ವಾತಾದಿ ದೋಷ ಭಯವು.

ಏಪ್ರಿಲ್ ತಿಂಗಳು : ಪ್ರಾರಂಭದ ದಿನಗಳಲ್ಲಿ ಎಲ್ಲಾ ರೀತಿಯಿಂದಲೂ ಸ್ವಲ್ಪ ಅಂಗದ ಅಶುಭ ಫಲಗಳಿದ್ದರೂ, 14–4–1992 ರ ನಂತರ ಉತ್ತಮ ಫಲವು. ಆಕಸ್ಮಿಕ ಧನ ಪ್ರಾಪ್ತಿ ಯೋಗವು. ಲಾಟರಿ ಏಜನ್ಸಿಗಳಿಂದ ಧನ ವೃದ್ಧಿಯು. ಕೆಲವರಿಗೆ ಶೇರುಬಂಡವಾಳಗಳಿಂದ ಉತ್ತಮ ಫಲ ದೊರಕಬಹುದು. ಕಲೆ, ವಾಣಿಜ್ಯ ಮತ್ತು ವೈದ್ಯಕೀಯ ವಿಭಾಗದ ವಿದ್ಯಾರ್ಥಿಗಳಿಗೆ ಶುಭವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮೇ ತಿಂಗಳು : ತಿಂಗಳ ಪ್ರಾರಂಭದಲ್ಲಿ ಕೆಲವರಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ವಿದೇಶ ಪ್ರಯಾಣ ಯೋಗದ ಫಲವು. ರಾಜಕೀಯ ವ್ಯಕ್ತಿಗಳಿಗೆ ಪ್ರತಿಷ್ಠೆಯು. ಹೊಸದಾಗಿ ವ್ಯಾಪಾರ ಮಾಡುವವರಿಗೆ ನಾನಾ ರೂಪಗಳಿಂದ ಧನ ಸಹಾಯ ಸಿಗಬಹುದು. 15–5–1992 ರ ನಂತರ ರವಿಯು ಸಪ್ತಮ ಪ್ರವೇಶ ಪಾಲುದಾರಿಕೆ ವ್ಯಾಪಾರದಲ್ಲಿ ಜಗಳ ಬರಬಹುದು. ಪತ್ನಿ ಯಾ ಪತಿಯ ಆರೋಗ್ಯ ಕೆಡಬಹುದು. ಮಾತಿನಿಂದ ಮನೆ ಬಿಡುವ ಪ್ರಸಂಗ ಒದಗಬಹುದು.

ಜೂನ್ ತಿಂಗಳು : ಪ್ರಯಾಣದಿಂದ ತೊಂದರೆಯು. ಕ್ರಿಮಿನಲ್ ವಿಷಯಗಳಲ್ಲಿ ಜಾಗ್ರತೆ ಅಗತ್ಯವು. ತಂದೆಗೆ ಕಂಟಕ ಭಯವು. ಕೆಲವರಿಗೆ ವಿಷ ಜಂತು ಹೀಡೆಯು. ದ್ವಿಚಕ್ರ ವಾಹನ ಪ್ರಯಾಣದಲ್ಲಿ ಜಾಗ್ರತೆ ಅಗತ್ಯವು. ಸಾಲಗಾರರ ಹೀಡೆ ಹೆಚ್ಚುವುದು. ಸಾಲ ಸಂಬಂಧ ಕೋರ್ಟು ಖಟ್ಲೆ ಆಗುವ ಸಂಭವವು.

ಜುಲ್ಯಾ ತಿಂಗಳು : ಮಧ್ಯಮ ಪ್ರಾಯಸ್ತರಿಗೆ ಅನಾರೋಗ್ಯವು. ಕೆಲವರಿಗೆ ವಿದೇಶ ಪ್ರಯಾಣ ಯೋಗದ ಫಲವು. ಹೃದ್ರೋಗಿಗಳು ಈ ತಿಂಗಳು ಜಾಗ್ರತೆಯಿರಬೇಕು. ಆದರೆ ಲಾಟರಿ ಏಜನ್ಸಿಗಳಿಂದ ಧನ ವೃದ್ಧಿಯು. ಕೆಂಪು ವರ್ಣದ ವಸ್ತುಗಳ ವ್ಯಾಪಾರದಿಂದ ಲಾಭವು.

ಆಗೋಸ್ತು ತಿಂಗಳು : ತಿಂಗಳ ಪ್ರಾರಂಭದ ದಿನಗಳಲ್ಲಿ ಅರಿಷ್ಟವು. ಎಸಿಡಿಟಿ ದೋಷವಿದ್ದ ರೋಗಿಗಳಿಗೆ ಉದರಬೇನೆ ಸಂಭವವು. ತಂದೆ ಮಕ್ಕಳಲ್ಲಿ ಭಿನ್ನಾಭಿಪ್ರಾಯ ಉಂಟಾಗಬಹುದು. 15–8–1992 ರ ನಂತರ ಉತ್ತಮ ಫಲವು. ಸರಕಾರಿ ಅಧಿಕಾರಿಗಳಿಗೆ ಭಡ್ತಿ ಸಂಭವವು. ನಿರುದ್ಯೋಗಿ ಪದವೀಧರರು IAS IPS ಪರೀಕ್ಷೆಗಳಲ್ಲಿ ಕೂತರೆ ಉತ್ತಮ ಫಲಿತಾಂಶ ಬರಬಹುದು.

ಸೆಪ್ಟೆಂಬರ್ ತಿಂಗಳು : ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಶುಭವು. ಕೆಲವರಿಗೆ ತಾಂತ್ರಿಕ ಮತ್ತು ವೈದ್ಯಕೀಯ ವಿಭಾಗದಲ್ಲಿ ಸ್ಥಾನಗಳು ಸಿಗಬಹುದು. 11–9–1992 ರ ನಂತರ ಈ ರಾಶಿಯವರಿಗೆ ಗುರುವು ಏಕ ದೆಶಾ ಸ್ಥಾನದಲ್ಲಿರುವುದರಿಂದ ಗುರುಬಲವಿದೆ. ಇದರಿಂದ ಅವಿವಾಹಿತ ಸ್ತ್ರೀಯರಿಗೆ ವಿವಾಹ ಯೋಗದ ಫಲವು.

ಆಕ್ಟೋಬರ್ ತಿಂಗಳು : ಈ ತಿಂಗಳು ಮಿಶ್ರ ಫಲವು. ತಿಂಗಳ ಪ್ರಾರಂಭದ ದಿನಗಳಲ್ಲಿ ಉತ್ತಮ ಫಲವು. ಕೆಲವರಿಗೆ ಬ್ಯಾಂಕಿಂಗ್ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ಉದ್ಯೋಗ ಲಭ್ಯವು. ಬ್ಯಾಂಕ್ ಸ್ತ್ರೀ ಉದ್ಯೋಗಿಗಳಿಗೆ ತಾವು ಇಚ್ಛಿಸಿದ ಸ್ಥಳಗಳಿಗೆ ವರ್ಗಾವಣೆ ಸಾಧ್ಯವು. ಆದರೆ 17–10–92ರ ನಂತರ ಅಶುಭವು. ಕೆಲವರಿಗೆ ನೇತ್ರ ಹೀಡೆ ದೋಷವು. ಕೆಲವರಿಗೆ ಮೂತ್ರ ಸಂಬಂಧ ದೋಷಬರಬಹುದು.

ನವೆಂಬರ್ ತಿಂಗಳು : ಈ ತಿಂಗಳು ಪೂರ್ಣ ಈ ರಾಶಿಯವರಿಗೆ ಅಶುಭವು. ಸಣ್ಣ ಮಕ್ಕಳಿಗೆ ಬಾಲಗ್ರಹ ಹೀಡೆಯು. ಕೆಲವರಿಗೆ ಹುಳದ ಸಂಬಂಧ ಅನಾರೋಗ್ಯ ಕೆಡುವುದು. ಕೆಲವರಿಗೆ ಗುಪ್ತರೋಗಗಳುಂಟಾಗಬಹುದು. ಹೃದ್ರೋಗ, ಹೃದ್ರೋಸಿಲ್ ಸಂಬಂಧ ರೋಗಿಗಳು ಈ

Sri Vidyabharathi Book Centre, Sringeri

CC-O. In Public Domain. Digitized by eGangotri

ತಿಂಗಳು ಶಸ್ತ್ರ ಚಿಕಿತ್ಸೆ ಮಾಡುವ ಸಂಭವವು.

ಡಿಸೆಂಬರ್ ತಿಂಗಳು : ಮಧ್ಯಮ ಪ್ರಾಯಸ್ಥರಿಗೆ ಹೃದಯ ಬೇನೆಯು. ಕೌಟುಂಬಿಕ ಕಿರಿಕಿರಿಯು. ಆದರೆ ಕೆಲವರಿಗೆ ಅನಿರೀಕ್ಷಿತ ಧನ ಲಾಭದ ಸಾಧ್ಯತೆ. ಕೆಲವರಿಗೆ ಉದ್ಯೋಗ ಲಭ್ಯತೆಯು. ಸರಕಾರಿ ಅಧಿಕಾರಿಗಳಿಗೆ ಪ್ರತಿಷ್ಠೆಯು. ಆದರೆ ಸಹೋದರನಿಗೆ ನೀರಿನಿಂದ ಕಂಟಕ ಬರಬಹುದು.

ಧನುರಾಶಿ

ಈ ರಾಶಿಯವರಿಗೆ ಈ ವರ್ಷ ಮಿಶ್ರಿತ ಫಲಗಳು ಬರಲಿವೆ. ಶನಿಯು ದ್ವಿತೀಯದಲ್ಲಿರುವುದರಿಂದ ಸಾಡೆಸಾತಿ ಶನಿಯ ಕೊನೆಯ ಹಂತವು. ಇದರಿಂದ ಶಾರೀರಿಕ ಅನಾರೋಗ್ಯವು. ಮಧ್ಯಮ ಪ್ರಾಯಸ್ಥರಿಗೆ ವಾತಾದಿ ದೋಷವು. ಶಿವನಿಗೆ ಎಳ್ಳೆಣ್ಣೆ ನಂದಾದೀಪ ಸೇವೆಯಿಂದ ಪರಿಹಾರವು. ಆದರೆ ಈ ವರ್ಷ ಗುರುವು ಭಾಗ್ಯದಲ್ಲಿರುವನು. ಇದು ಉತ್ತಮ ಫಲವು. ಅವಿವಾಹಿತ ಸ್ತ್ರೀ ಪುರುಷರಿಗೆ ವಿವಾಹ ಯೋಗದ ಫಲವು: ವಿದ್ಯಾರ್ಥಿಗಳೆಲ್ಲರೂ ಉತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದುವರು. ರಾಹುವು ಜನ್ಮರಾಶಿಯಲ್ಲಿರುವುದರಿಂದ ಶಾರೀರಿಕ ಹೀಡೆಯು. ಚಿಕ್ಕ ಮಕ್ಕಳಿಗೆ ಬಾಲಗ್ರಹ ಹೀಡೆಯು. ಕೇತು ಸಪ್ತಮದಲ್ಲಿರುವುದರಿಂದ ಪತಿ ಪತ್ನಿಯರಲ್ಲಿ ವಿರಸ ಉಂಟಾಗಬಹುದು. 4–1–1992 ರಲ್ಲಿ ಪೂರ್ವ ಆಷಾಢ ನಕ್ಷತ್ರದಲ್ಲಿ ಸೂರ್ಯ ಗ್ರಹಣವು. ಇದರಿಂದ ಈ ರಾಶಿಯವರು ಶಿವನಿಗೆ ರುದ್ರಾಭಿಷೇಕ ಮಾಡುವುದರಿಂದ ದೋಷ ಪರಿಹಾರವು. ಇವರ ಅದೃಷ್ಟ ಅಂಕೆ : 1, 5 ಅದೃಷ್ಟದ ಹರಳು:– ಮಾಣಿಕ್ಯ ಮತ್ತು ಪಚ್ಚೆಯು. ಪೂರ್ವದಿಕ್ಕಿನ ಪ್ರಯಾಣದಿಂದ ಅದೃಷ್ಟವು.

ಜನವರಿ ತಿಂಗಳು : ಜನ್ಮ ರಾಶಿಯಲ್ಲಿ ರವಿ, ರಾಹುಗಳಿಂದ ಸಣ್ಣ ಮಕ್ಕಳಿಗೆ ಬಾಲಗ್ರಹ ಹೀಡೆಯು. ದ್ವಿಚಕ್ರ ವಾಹನಗಳಿಂದ ಅರಿಷ್ಟವು. ಕೆಲವರಿಗೆ ಜ್ವರಾದಿ ದೋಷವು. 14–1–1992 ರ ನಂತರ ರವಿಯು ದ್ವಿತೀಯದಲ್ಲಿರುವನು. ನೇತ್ರ ಹೀಡೆ ದೋಷವು. ಕುಟುಂಬದಲ್ಲಿ ಕಲಹವು. ಈ ರಾಶಿಯವರು ಕುಜ ರಾಹು ಸಂಧಿಗಳಿದ್ದವರು ಶಾಂತಿ ಮಾಡಿಸುವುದು ಉತ್ತಮವು. ವಿಪರೀತ ಖರ್ಚು ಸಂಭವವು. ಸಮಾಜದಲ್ಲಿ ಅಪಾದನೆಗಳನ್ನು ಎದುರಿಸಿರುವಿರಿ.

ಫೆಬ್ರವರಿ ತಿಂಗಳು : ತಿಂಗಳ ಪ್ರಾರಂಭದಲ್ಲಿ ಹಲವಾರು ಸಂಕಷ್ಟಗಳನ್ನು ಎದುರಿಸಿರುವಿರಿ. ಕೆಲವರಿಗೆ ಮನೆ ಬಿಡುವ ಸಂಭವ ಬರಬಹುದು. 13–2–1992 ರ ನಂತರ ಉತ್ತಮವು. ಪ್ರಯಾಣದಿಂದ ಧನಲಾಭವು. ಕೆಲವರಿಗೆ ಉದ್ಯೋಗ ಸಿಗುವ ಸಾಧ್ಯತೆಯು. ಕೈಗಾರಿಕೋದ್ಯಮಿಗಳಿಗೆ ಅದೃಷ್ಟವು. ಶೇರು ಬಂಡವಾಳಗಳಲ್ಲಿ ವೃದ್ಧಿ ಆಗಬಹುದು.

ಮಾರ್ಚ್ ತಿಂಗಳು : ಲಾಟರಿ ಏಜನ್ಸಿಗಳಿಂದ ಧನಲಾಭವು. ಎರುಖು ಕೇವಡೆಗಳಿಗೆ ಹೆಚ್ಚಿನ

CC-O. In Public Domain. Digitized by eGangotri

ಬಡ್ತಿ ಬರಬಹುದು. ಸಹೋದರನಿಗೆ ಸರಕಾರಿ ಇಲಾಖೆಯಲ್ಲಿ ಉದ್ಯೋಗ ಸಿಗಬಹುದು. 15–3–1992 ರ ನಂತರ ರವಿಯು ಕೇಂದ್ರದಲ್ಲಿರುವನು. ತಾಯಿಗೆ ಅನಾರೋಗ್ಯವು. ಅಂಗಾರಕ ದೋಷದಿಂದ ವಿವಾಹಕಾರ್ಯಗಳು ನಿಧಾನಿಸುವುವು.

ಏಪ್ರಿಲ್ ತಿಂಗಳು : 19–4–1992 ರ ನಂತರ ಅಂಗಾರಕ ದೋಷ ತಪ್ಪುವುದರಿಂದ ಅವಿವಾಹಿತರಿಗೆ ವಿವಾಹ ಯೋಗದ ಫಲವು. ಕ್ರೀಡಾರ್ಥಿಗಳು ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸಬಹುದು. ಕಾರಣ ಮುಕುಟ ಯೋಗದ ಫಲವು. ಕಲೆ ಮತ್ತು ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ಶುಭವು. ಆದರೆ ತಂದೆಗೆ ದೃಷ್ಟಿದೋಷ ಬರಬಹುದು.

ಮೇ ತಿಂಗಳು : ಈ ತಿಂಗಳು ಮಿಶ್ರಿತ ಫಲಗಳು ಬರುವುವು. ಕೆಲವರಿಗೆ ಎಸಿಡಿಟಿ ದೋಷವಿದ್ದವರಿಗೆ ಉದರಬೇನೆ ಸಂಭವವು. ಪ್ರಾರಂಭದ ದಿನಗಳಲ್ಲಿ ತಂದೆಗೆ ಅನಾರೋಗ್ಯವು. 15–5–1992 ರ ನಂತರ ಉತ್ತಮ ಫಲವು. ಅನಿರೀಕ್ಷಿತ ಧನಲಾಭವು. ಲಾಟರಿ, ಜೂಜು ಮತ್ತು ಕುದುರೆ ರೇಸುಗಳಿಂದ ಧನ ವೃದ್ಧಿಯು. ಹೊಸದಾಗಿ ವ್ಯಾಪಾರ ಪ್ರಾರಂಭಿಸಲು ಬ್ಯಾಂಕ್ ಯಾ ಸಹಕಾರಿ ಸಂಘಗಳಿಂದ ಸಾಲ ಸಿಗಬಹುದು. ಸ್ತ್ರೀ ಉದ್ಯೋಗಿಗಳಿಗೆ ಭಡ್ತಿ ಸಂಭವವು.

ಜೂನ್ ತಿಂಗಳು : ಶತ್ರುಗಳೆಲ್ಲರೂ ಪರಾಜಿತರಾಗುವರು. ಕೆಲವು ಸ್ನೇಹಿತರಿಂದ ಧನ ಸಹಾಯ ಸಿಗಬಹುದು. ಅನಿರೀಕ್ಷಿತ ಪ್ರಯಾಣದಿಂದ ಉತ್ತಮ ಫಲಗಳು ದೊರಕುವುವು. 15–6–1992 ರ ನಂತರ ಪತ್ನಿ ಯಾ ಪತಿಗೆ ಅನಾರೋಗ್ಯವು. ದ್ವಿಚಕ್ರ ವಾಹನಗಳಿಂದ ಅರಿಷ್ಟವು. ಆಸ್ತಮ ರೋಗಿಗಳು ಜಾಗ್ರತರಾಗಿರುವುದು ಉತ್ತಮವು.

ಜುಲ್ಯಾ ತಿಂಗಳು : ಈ ತಿಂಗಳು ಪೂರ್ಣ ಅಶುಭವು. ಕೆಲವರಿಗೆ ಶೀತೋಷ್ಣದಿಂದ ಆರೋಗ್ಯ ಕೆಡುವುದು. ಮಧ್ಯಮ ಪ್ರಾಯದವರಿಗೆ ಎದೆ ನೋವು ಬರಬಹುದು. ಪ್ರಯಾಣದಿಂದ ಅರಿಷ್ಟವು. ಸ್ತ್ರೀ ಉದ್ಯೋಗಿಗಳಿಗೆ ಮೇಲಿನ ಅಧಿಕಾರಿಗಳಿಂದ ಕಿರುಕುಳ ಸಂಭವವು.

ಆಗೋಸ್ತು ತಿಂಗಳು : ಮಿಶ್ರಫಲಗಳು ಬರುವುವು. ಪ್ರಾರಂಭದ ದಿನಗಳಲ್ಲಿ ಉದರಬೇನೆ ಸಂಭವವು. ದೃಷ್ಟಿದೋಷವು. ತಂದೆಗೆ ಅರಿಷ್ಟವು. 15–8–1992 ರ ನಂತರ ಕೆಲವರಿಗೆ ವಿದೇಶ ಪ್ರಯಾಣ ಯೋಗದ ಫಲವು. ಅವಿವಾಹಿತರಿಗೆ ವಿವಾಹ ಯೋಗದ ಫಲವು. ಕೆಲವರಿಗೆ ಪಿತೃ ಸಂಬಂಧ ಆಸ್ತಿ ಲಭ್ಯವು. ವೈದ್ಯಕೀಯ ವಿದ್ಯಾರ್ಥಿಗಳಿಗೆ ಶುಭವು.

ಸೆಪ್ಟೆಂಬರ್ ತಿಂಗಳು : ಈ ತಿಂಗಳು ಮಿಶ್ರಿತ ಫಲಗಳು ಬರುವುವು. ಕೆಲವರಿಗೆ ವಿದೇಶಗಳಲ್ಲಿ ಉದ್ಯೋಗ ಸಿಗುವ ಯೋಗವು. ಅವಿವಾಹಿತ ಸ್ತ್ರೀಯರಿಗೆ ವಿವಾಹಯೋಗದ ಫಲವು. 15–9–1992 ರ ನಂತರ "ದಶಮೇ ಹರ ಭಿಕ್ಷಾಃ" ಎಂಬಂತೆ ಕೆಲವರಿಗೆ ದೈನಂದಿನ ಖರ್ಚುಗಳಿಗೆ ಸಾಲ ಮಾಡುವ ಪ್ರಸಂಗ ಬರಬಹುದು. ಗುಪ್ತ ಶತ್ರುಗಳಿಂದ ಪೀಡೆಯು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಕ್ಟೋಬರ್ ತಿಂಗಳು : ಉದ್ಯೋಗಸ್ಥ ಸ್ತ್ರೀಯರಿಗೆ ಬೇಕಾದ ಸ್ಥಳಗಳಿಗೆ ವರ್ಗಾವಣೆ ಸಿಗಬಹುದು. ಹಿರಿಯ ಮಗನಿಗೆ ಉದ್ಯೋಗ ಸಿಗುವ ಸಂಭವವು. ವ್ಯಾಪಾರಸ್ಥರಿಗೆ ಆರ್ಥಿಕ ಲಾಭವು. ಆದರೆ ತಂದೆಗೆ ಅನಾರೋಗ್ಯ ಉಂಟಾಗಬಹುದು..

ನವೆಂಬರ್ ತಿಂಗಳು : ಉದ್ಯೋಗಸ್ಥರಿಗೆ ಮೇಲಿನ ಅಧಿಕಾರಿಗಳಿಂದ ಮೆಮೋ ಬರಬಹುದು. ಕೆಲವರಿಗೆ ಕರುಳಿಗೆ ಸಂಬಂಧ ಪಟ್ಟ ದೋಷ ಬರಬಹುದು. ಕೆಲವರಿಗೆ ನೇತ್ರ ದೋಷವು. ಸಣ್ಣ ಮಕ್ಕಳಿಗೆ ಹುಳದ ದೋಷವಿದ್ದಿರಬಹುದು. ಕೆಲವರಿಗೆ ವಿದೇಶ ಪ್ರಯಾಣದ ಯೋಗದ ಫಲವು. ಉತ್ಪತ್ತಿಗಿಂತ ಖರ್ಚು ಹೆಚ್ಚುವುದು.

ದಶಂಬರ್ ತಿಂಗಳು : ರವಿಯು ಜನ್ಮರಾಶಿಯಲ್ಲಿ ಸಂಚರಿಸುವುದರಿಂದ ಆಯಾಸವು. ಕೆಲವರಿಗೆ ನಿಶ್ಯಕ್ತಿ ಉಂಟಾಗಬಹುದು. ಕೆಲವರಿಗೆ ರಕ್ತದ ಒತ್ತಡ ಬರಬಹುದು. ಸಾಲದ ಹೊರೆ ಹೆಚ್ಚುವುದು. ಹೃದಯರೋಗಿಗಳು ಜಾಗೃತರಾಗಿರುವುದು ಉತ್ತಮವು. ಎಲ್ಲದಕ್ಕೂ ದತ್ತಾತ್ರೇಯ ರಕ್ಷಕ ಕವಚ ಮಂತ್ರದಿಂದ ಪರಿಹಾರವು.

ಮಕರ ರಾಶಿ

ಈ ರಾಶಿಯವರಿಗೆ ಈ ವರ್ಷ ಕೆಟ್ಟ ಫಲಗಳು ಅಧಿಕವು. ಶನಿಯು ಸಾಡೆಸಾಲೆ ಶನಿ ಆಗಿ ಜನ್ಮ ರಾಶಿಯಲ್ಲಿರುವನು. ವಾತಾದಿರೋಗ ಭಯವು. 3ನೇ ಆವರ್ತಿ ಆಗಿ ಸಾಡೆಸಾತಿ ಶನಿ ದೋಷ ಬರುವವರು ಜಾಗ್ರತೆಯಿರಬೇಕು. ಗುರುವು ಅಷ್ಟಮದಲ್ಲಿರುವನು. "ಅಷ್ಟಮೇ ವಾಲಿವಧಾ" ಎಂಬಂತೆ ಅಹಂಕಾರಿಗಳಿಗೆ, ಸಮಾಜ ಕಂಟಕರಿಗೆ ಮತ್ತು ರಾಜಕಾರಣಿಗಳಿಗೆ ಈ ವರ್ಷ ಅರಿಷ್ಟವು. ಕೆಲವು ನಿರಪರಾಧಿಗಳಿಗೆ ಕ್ರಿಮಿನಲ್ ಸಂಬಂಧ ನ್ಯಾಯಲಯಗಳಿಗೆ ಹೋಗುವ ಸಂದರ್ಭ ಬರಬಹುದು. ಯಾರಿಗೂ ಜಾಮೀನು ನಿಲ್ಲಬೇಡಿರಿ. ರಾಹುವು ದ್ವಾದಶದಲ್ಲಿರುವುದರಿಂದ ನಾಗನ ಸಂಬಂಧ ದೋಷವು. ಇದರಿಂದ ಈ ರಾಶಿಯವರಿಗೆ ಮಕ್ಕಳ ಫಲ ನಿಧಾನ ಆಗಬಹುದು. ಕೆಲವರಿಗೆ ನಾಗನ ಸಂಬಂಧ ಸ್ವಪ್ನ ದೋಷ ಫಲವು. ಆದರೆ ಕೇತುವು ಷಷ್ಠದಲ್ಲಿರುವುದು ಉತ್ತಮ. ಕೆಲವರಿಗೆ ದ್ವಿಚಕ್ರವಾಹನಗಳನ್ನು ಖರೀದಿಸುವ ಯೋಗದ ಫಲವು. ಸಿಮೆಂಟ್ ವ್ಯವಹಾರದಿಂದ ಅಧಿಕ ಧನ ಲಾಭವು. ಅದೃಷ್ಟ ಅಂಕೆ:– 6 ಅದೃಷ್ಟದ ಹರಳು – ವಜ್ರ.

ಜನವರಿ ತಿಂಗಳು : ತಿಂಗಳ ಪ್ರಾರಂಭದಲ್ಲಿ ವಾಹನಗಳಿಂದ ಅರಿಷ್ಟವು. ಕುಜರಾಹು ಸಂಬಂಧ ದೋಷವಿದ್ದವರು ಶಾಂತಿ ಮಾಡಿಸುವುದು ಉತ್ತಮವು. ಕೆಲವರಿಗೆ ನೇತ್ರ ಪೀಡೆಯು. 14–1–92 ರ ನಂತರ ರವಿಯು ಜನ್ಮರಾಶಿಯಲ್ಲಿರುವನು. ತಂದೆಗೆ ಕಂಟಕಭಯವು. ಶ್ರೀ ಶಿವದೇವರಿಗೆ ರುದ್ರಾಭಿಷೇಕದಿಂದ ಪರಿಹಾರವು. ತಂದೆ ಮಕ್ಕಳಲ್ಲಿ ಭಿನ್ನಾಭಿಪ್ರಾಯಗಳು ಬರಬಹುದು. ಕೆಲವರಿಗೆ ಉದರಬೇನೆ ಸಂಭವವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಫೆಬ್ರವರಿ ತಿಂಗಳು: ಈ ತಿಂಗಳು ಪೂರ್ಣ ಅಶುಭದಾಯಕವು. ಕೌಟುಂಬಿಕ ಕಲಹ ಸಂಭವವು. ಖರ್ಚುಗಳ ಪ್ರಸಂಗ ಹೆಚ್ಚುವುವು. ಮಧ್ಯಮ ಪ್ರಾಯದವರಿಗೆ ವಾತ ದೋಷದಿಂದ ಕಾಲುನೋವು ಉಂಟಾಗಬಹುದು. ಎಸಿಡಿಟಿ ದೋಷವಿದ್ದವರಿಗೆ ಉದರಬೇನೆಯು. ಕೆಲವು ಆಡಂಬರ ವಸ್ತುಗಳ ಖರೀದಿಸುವ ಸಂಭವವು.

ಮಾರ್ಚ್ ತಿಂಗಳು : ಪ್ರಾರಂಭದ ದಿನಗಳಲ್ಲಿ ಅರಿಷ್ಟವು. ಅಪರಿಚಿತ ವ್ಯಕ್ತಿಗಳಿಂದ ಮೋಸಹೋಗುವಿರಿ. 15–3–1992ರ ನಂತರ ಶುಭವು. ಪ್ರಯಾಣದಿಂದ ಧನಲಾಭವು. ಶತ್ರುನಾಶವು. ನ್ಯಾಯಾಲಯಗಳಲ್ಲಿ ಜಯಸಿಗಬಹುದು. ಲಘ ಪಾನೀಯಗಳ ವ್ಯವಹಾರದಿಂದ ಲಾಭವು. ಸಹೋದರಿಗೆ ಉದ್ಯೋಗ ಸಿಗುವ ಸಂಭವವು.

ಏಪ್ರಿಲ್ ತಿಂಗಳು : ದೂರದ ಸ್ಥಳಗಳಲ್ಲಿ ಹೊಟೇಲು ವ್ಯವಹಾರದಲ್ಲಿ ಧನ ಲಾಭವು. ಹೊಸದಾಗಿ ವ್ಯಾಪಾರ ಪ್ರಾರಂಭಿಸುವವರಿಗೆ ಈಶಾನ್ಯ ಭಾಗದಲ್ಲಿ ಉತ್ತಮವು. 14–4–1992 ರ ನಂತರ ರವಿಯು ಚತುರ್ಥದಲ್ಲಿರುವನು. ತಾಯಿಗೆ ಉಷ್ಣ ಸಂಬಂಧ ಅನಾರೋಗ್ಯ ಭಯವು. ಕಲೆ ಸಂಬಂಧ ವಿದ್ಯಾರ್ಥಿಗಳು ಹೆಚ್ಚಿನ ಅಂಕಗಳನ್ನು ಪಡೆಯುವರು. ಈ ರಾಶಿಯವರು IAS IPS ಪರೀಕ್ಷೆಗಳಲ್ಲಿ ಕೂತರೆ ಉತ್ತಮ ಫಲಿತಾಂಶ ಬರಬಹುದು.

ಮೇ ತಿಂಗಳು : ಈ ತಿಂಗಳು ಕೆಲವರಿಗೆ ಗುಪ್ತ ವ್ಯವಹಾರಗಳಿಗೆ ಭೀತಿಯು. ತಂದೆಗೆ ಅರಿಷ್ಟವು. ಕೆಲವರಿಗೆ ಶೀತಕಫಾದಿ ದೋಷವು. ವಾಹನಗಳಿಂದ ಅರಿಷ್ಟವು. ಗರ್ಭಿಣಿ ಸ್ತ್ರೀಯರು ಶ್ರೀ ಸುಬ್ರಹ್ಮಣ್ಯ ದೇವರ ಸ್ತೋತ್ರ ಪಠಿಸುವುದರಿಂದ ಪರಿಹಾರವು.

ಜೂನ್ ತಿಂಗಳು : ತಂದೆಗೆ ಅಸ್ತಮದಿಂದ ದೋಷವು. ವಿಮಾನಯಾನ ಮಾಡದಿರುವುದು ಉತ್ತಮವು. 15–6–1992 ರ ನಂತರ ಶುಭವು. ಬಹಳ ಸಮಯದಿಂದ ರೋಗ ಪೀಡಿತರಿಗೆ ಸ್ವಲ್ಪಾಂಶ ಸುಧಾರಣೆ ಕಾಣಬಹುದು. ನ್ಯಾಯಾಲಯಗಳಲ್ಲಿ ಜಯಸಿಗಬಹುದು. ಪುಸ್ತಕದ ವ್ಯಾಪಾರದಿಂದ ಲಾಭವು.

ಜುಲ್ಯಾ ತಿಂಗಳು : ಲಾಟರಿ ಏಜನ್ಸಿಗಳಿಂದ ಧನಲಾಭವು. ಸಾಲದ ಹೊರೆ ಸ್ವಲ್ಪ ಕಡಿಮೆ ಆಗಬಹುದು. 15–7–1992 ರ ನಂತರ ಪತ್ನಿಗೆ ಅನಾರೋಗ್ಯವು. ವಿದೇಶಗಳಲ್ಲಿ ವಾಸಿಸತಕ್ಕವರ ಅನಾರೋಗ್ಯವು. ಪತಿಪತ್ನಿಯರಲ್ಲಿ ಜಗಳ ಉಂಟಾಗಬಹುದು. ಪಾಲುದಾರಿಕೆ ವ್ಯಾಪಾರದಿಂದ ತೊಂದರೆಯು.

ಆಗೋಸ್ತು ತಿಂಗಳು : ಕೆಟ್ಟ ಫಲಗಳು ಅಧಿಕವು. ಕೆಲವರಿಗೆ ಉದರ ಸಂಬಂಧ ರೋಗವು. ಕುಟುಂಬದಲ್ಲಿ ಹಿರಿಯಸ್ತರಿಗೆ ಅನಾರೋಗ್ಯವು. ಜಾಮೀನು ವಿಷಯಗಳಲ್ಲಿ ಜಾಗ್ರತೆಯು. ಕೆಲವರಿಗೆ ಕ್ರಿಮಿನಲ್ ಸಂಬಂಧ ಬಂಧನಗಳುಂಟಾಗಬಹುದು. ಮಧ್ಯಮ ಪ್ರಾಯದವರಿಗೆ ನೇತ್ರ ಪೀಡೆಯು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸೆಪ್ಟೆಂಬರ್ ತಿಂಗಳು : ಸಮ್ಮಿಶ್ರ ಫಲಗಳು ಬರುವುವು. ಕೆಲವರಿಗೆ ವಿದೇಶ ಪ್ರಯಾಣ ಯೋಗದ ಫಲವು. 11–9–1992 ರ ನಂತರ ಗುರುವು ಭಾಗ್ಯ ಪ್ರವೇಶವು. ಇದರಿಂದ ಅವಿವಾಹಿತ ಸ್ತ್ರೀ ಪುರುಷರಿಗೆ ವಿವಾಹಯೋಗದ ಫಲವು. ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಶುಭವು. ಕಾಲೇಜ್‌ನಲ್ಲಿ ಕೆಲಸ ಮಾಡುವ ಸಿಬ್ಬಂದಿಗಳಿಗೆ ಧನಲಾಭವು. ಕೆಲವು ವಿದ್ಯಾವಂತ ತರುಣರಿಗೆ ತಮ್ಮ ಸಂಶೋಧನೆಗಳಿಗೆ ಸರಕಾರದಿಂದ ಪ್ರತಿಭಾ ಪುರಸ್ಕಾರ ದೊರೆಯಬಹುದು.

ಅಕ್ಟೋಬರ್ ತಿಂಗಳು : ಮೂತ್ರ ಸಂಬಂಧ ರೋಗಿಗಳಿಗೆ ಶಸ್ತ್ರ ಚಿಕಿತ್ಸೆ ಮಾಡುವ ಸಂದರ್ಭ ಬರಬಹುದು. ವ್ಯಾಪಾರದಲ್ಲಿ ಏರುಪೇರು ಉಂಟಾಗಬಹುದು ಉದ್ಯೋಗದಲ್ಲಿರುವವರಿಗೆ ನೆಮ್ಮದಿ ಇರುವುದಿಲ್ಲ. ಸರಕಾರಿ ನೌಕರರು ಒಂದಲ್ಲ ಒಂದು ಸಂಕಷ್ಟದಲ್ಲಿ ಸಿಕ್ಕಿ ಬೀಳುವರು. ತಂದೆಗೆ ಪ್ರಯಾಣದಿಂದ ಅರಿಷ್ಟ ಫಲವು.

ನವೆಂಬರ್ ತಿಂಗಳು : ಕೆಲವು ಸರಕಾರಿ ಅಧಿಕಾರಿಗಳಿಗೆ ದಿಢೀರನೆ ವರ್ಗಾವಣೆ ಸಂಭವವು. ಕೆಲವು ಸರಕಾರಿ ಅಧಿಕಾರಿಗಳ ಗುಪ್ತ ವ್ಯವಹಾರಗಳು ಬಯಲಾಗುವುವು. ಇದರಿಂದ ನ್ಯಾಯಾಲಯದ ಏಟ್ಟಿಗೆ ಎದುರಿಸುವ ಭೀತಿಯು. ಆದರೆ 17–11–1992 ರ ನಂತರ ಉತ್ತಮ ಫಲವು. ವಿದೇಶಿ ವಸ್ತುಗಳ ವ್ಯವಹಾರ ಅಧಿಕ ಲಾಭವು. ಕಂಟ್ರಾಕ್ಟ್ ವ್ಯವಹಾರಸ್ತರಿಗೆ ಉತ್ತಮ ಫಲವು. ಹಲವಾರು ಮೂಲಗಳಿಂದ ಧನಲಾಭವು.

ಡಿಸೆಂಬರ್ ತಿಂಗಳು : ಈ ತಿಂಗಳು ಪ್ರಥಮಾರ್ಧ ಉತ್ತಮ ಫಲವು. ವಾಹನಗಳ ವ್ಯವಹಾರದಿಂದ ಧನಲಾಭವು. ಎಲೆಕ್ಟ್ರೋನಿಕ್ ಶೇರು ಬಂಡವಾಳಗಳಿಂದ ಧನ ವೃದ್ಧಿಯು. ಕುಟುಂಬದ ಹಿರಿಯ ಮಗನಿಗೆ ಉದ್ಯೋಗ ಲಭ್ಯವು. ಆದರೆ 16–12–92ರ ನಂತರ ಅನಾರೋಗ್ಯವು. ನಿದ್ರಾ ಭಂಗವು. ನೇತ್ರ ಪೀಡೆ ದೋಷವು. ಶತ್ರುಗಳಿಂದ ಬೆದರಿಕೆಗಳನ್ನು ಎದುರಿಸಿರುವಿರಿ.

ಕುಂಭ ರಾಶಿ

ಸಾಡೇಸಾತಿ ಶನಿ ದೋಷವನ್ನು ಅನುಭವಿಸುತ್ತಿರುವ ಈ ರಾಶಿಯವರಿಗೆ ಈ ವರ್ಷ ಉತ್ತಮ ಫಲ ದೊರಕಲಿದೆ. ಗುರುವು ಸಪ್ತಮದಲ್ಲಿರುವನು: "ಯಶ್ಯ ಕೇಂದ್ರೆ ಬ್ರಹಸ್ಪತಿ ಸಜಾತ ಕುಲದಿಪಕಃ" ಎಂಬಂತೆ ಸಮಾಜದಲ್ಲಿ ಗಣ್ಯ ವ್ಯಕ್ತಿಗಳಾಗುವರು. ಕೆಲವು ಸ್ತ್ರೀಯರಿಗೆ ಪುತ್ರ ಸಂತಾನ ಭಾಗ್ಯದ ಫಲವು. ಅವಿವಾಹಿತ ಸ್ತ್ರೀ ಪುರುಷರಿಗೆ ವಿವಾಹಯೋಗದ ಫಲವು. ಪುತ್ರರಲ್ಲಿ ಒಬ್ಬನಿಗೆ ಉದ್ಯೋಗ ಸಿಗುವ ಯೋಗದ ಫಲವು. ಈ ರಾಶಿಯ ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸಿ ತೇರ್ಗಡೆ ಹೊಂದುವರು. ಶುಕ್ರನು ಬಲಾಢ್ಯನಿದ್ದು ಸಿನೆಮ ನಟ ನಟಿಯರಿಗೆ ಈ ವರ್ಷ ಶುಭದಾಯಕವಾಗಲಿವೆ. ಸರಕಾರಿ ಅಥವಾ ಬ್ಯಾಂಕ್ ಕ್ಷೇತ್ರಗಳಲ್ಲಿದ್ದ ನೌಕರರಿಗೆ ಬಡ್ತಿ ಸಂಭವವು. ರಾಹುವು ಈ ರಾಶಿಯವರಿಗೆ ಲಾಭದಲ್ಲಿರುವನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೋದಂಡ ರಾಹು ದೆಶೆ ಇದ್ದ ವ್ಯಕ್ತಿಗಳಿಗೆ ಅಧಿಕ ಧನಲಾಭವು. ಎಲೆಕ್ಟ್ರೋನಿಕ್ ಶೇರು ಬಂಡವಾಳಗಳಿಂದ ಧನವೃದ್ಧಿಯು. ಆದರೆ ಕೇತು ಪಂಚಮದಲ್ಲಿರುವುದರಿಂದ ಅನಿರೀಕ್ಷಿತ ಖರ್ಚುಗಳು ಬರಬಹುದು. ಸಣ್ಣ ಮಕ್ಕಳಿಗೆ ಬಾಲಗ್ರಹದೋಷ ಪೀಡೆಯು. ಅದೃಷ್ಟ ಅಂಕೆ:– 6. ಅದೃಷ್ಟದ ಹರಳು:– ವಜ್ರ.

ಜನವರಿ ತಿಂಗಳು : ತಿಂಗಳ ಪ್ರಾರಂಭದ ದಿನಗಳಲ್ಲಿ ರವಿರಾಹುಗಳು ಲಾಭದಲ್ಲಿ ಸಂಚರಿಸಿರುವುದರಿಂದ ಅದೃಷ್ಟವಂತರು. ಲಾಟರಿ, ಏಜನ್ಸಿಗಳಿಂದ ಧನಲಾಭವು. ಎಲೆಕ್ಟ್ರೋನಿಕ್, ಉಕ್ಕು ಸಂಬಂಧಪಟ್ಟ ಶೇರುಗಳಿಂದ ಧನವೃದ್ಧಿಯು. ಟೆಲಿಕಮ್ಯುನಿಕೇಶನ್ ಮತ್ತು ಎಲೆಕ್ಟ್ರೋನಿಕ್ ವಿಭಾಗದ ನೌಕರರಿಗೆ ಅಧಿಕ ಧನ ಲಾಭವು. ಅಲ್ಲದೆ ಈ ವರ್ಗದ ನೌಕರರಿಗೆ ಭಡ್ತಿ ಸಂಭವವು. 14–1–1992 ರ ನಂತರ ರವಿಯು ವ್ಯಯ ಭಾವಕ್ಕೆ ಪ್ರವೇಶಿಸುವನು. ಕೆಲವರಿಗೆ ದೃಷ್ಟಿದೋಷವು. ಕೌಟುಂಬಿಕ ಕಿರಿಕಿರಿಯು.

ಫೆಬ್ರವರಿ ತಿಂಗಳು : ಬ್ಯಾಂಕ್ ಮತ್ತು ಸಹಕಾರಿ ಸಂಘಗಳಿಂದ ಸಾಲ ಪಡೆದ ವ್ಯಕ್ತಿಗಳಿಗೆ ಒತ್ತಡ ಬರಬಹುದು. ಸ್ನೇಹಿತರ ವಿಷಯದಲ್ಲಿ ಜಾಗ್ರತೆಯಿರಿ. ಗುಪ್ತ ಶತ್ರುಗಳಿಂದ ಪೀಡೆಯು. 14–2–1992 ರ ನಂತರ ರವಿ ಜನ್ಮಕ್ಕೆ ಬರುವನು. ಇದರಿಂದ ಶಾರೀರಿಕ ನಿಶ್ಯಕ್ತಿಯು. ಕೆಲವರಿಗೆ ಎಸಿಡಿಟಿ ದೋಷಗಳಿಂದ ಉದರಬೇನೆ ಸಂಭವವು. ಇವರ ಕುಟುಂಬದಲ್ಲಿ ವಿವಾಹ ಆಗ ತಕ್ಕ ಸ್ತ್ರೀ ಪುರುಷರಿದ್ದರೆ ವಿವಾಹಯೋಗದ ಫಲವು.

ಮಾರ್ಚ್ ತಿಂಗಳು : ಕೆಲವರಿಗೆ ನೀರಿನಿಂದ ಕಂಟಕ ಭಯವು. ದ್ವಿಚಕ್ರವಾಹನಗಳ ಪ್ರಯಾಣದಿಂದ ಅರಿಷ್ಟವು. ಕುಟುಂಬದಲ್ಲಿ ಪ್ರಾಯಸ್ತರಿಗೆ ಅನಾರೋಗ್ಯವು. ಜಾಮೀನು ವಿಷಯಗಳಲ್ಲಿ ಸಿಕ್ಕಿ ಬೀಳುವಿರಿ. ಕೆಲವರಿಗೆ ಸ್ಥಳ ಬದಲಾವಣೆ ಸಂಭವವು. ವೈದ್ಯಕೀಯ ವಿದ್ಯಾರ್ಥಿಗಳಿಗೆ ಶುಭವು.

ಏಪ್ರಿಲ್ ತಿಂಗಳು : ಪ್ರಾರಂಭದ ದಿನಗಳಲ್ಲಿ ಮಿಶ್ರಫಲಗಳು ಬರಲಿವೆ. ಕೆಲವರಿಗೆ ದೃಷ್ಟಿದೋಷವು. ಅನಿರೀಕ್ಷಿತ ಖರ್ಚುಗಳ ಸಂಭವವು. ಬೆಲೆಬಾಳುವ ವಸ್ತುಗಳು ಕಣ್ಮರೆ ಆಗುವುವು. 14–4–92 ರ ನಂತರ ಶುಭವು. ತಾಂತ್ರಿಕ ಉದ್ಯೋಗಿಗಳಿಗೆ, ಸಂಪರ್ಕ ಇಲಾಖೆಯ ನೌಕರರಿಗೆ ಶುಭವು. ಪ್ರಯಾಣದಿಂದ ಧನಲಾಭವು. ಸಹೋದರರಲ್ಲಿ ಕೆಲವರಿಗೆ ಉದ್ಯೋಗ ಲಭ್ಯವು.

ಮೇ ತಿಂಗಳು : ಟ್ರಾನ್ಸ್‌ಪೋರ್ಟ್ ಮತ್ತು ಶಿಪ್ಪಿಂಗ್ ಏಜನ್ಸಿಗಳಿಂದ ಧನಲಾಭವು. ಸಾಹಿತಿಗಳಿಗೆ ಪ್ರತಿಷ್ಠೆಯು. 15–5–1992 ರ ನಂತರ ರವಿಯು ಚತುರ್ಥದಲ್ಲಿರುವನು. ತಂದೆ ತಾಯಂದಿರಿಗೆ ಅರಿಷ್ಟವು. ವಿದ್ಯಾರ್ಥಿಗಳು ಹೆಚ್ಚಿನ ಶ್ರಮವಹಿಸಬೇಕಾಗುವುದು. ಅವಿವಾಹಿತ ಸ್ತ್ರೀಯರಿಗೆ ವಿವಾಹಯೋಗದ ಫಲವು.

ಜೂನ್ ತಿಂಗಳು : ಅಧಿಕ ಖರ್ಚುಗಳು ಬರಲಿವೆ. ತಾಯಿಯ ದೂರದ ಸಂಬಂಧಿಯವರಿಗೆ

CC-O. Vidyabharathi Book Centre, Sringeri

CC-O. In Public Domain. Digitized by eGangotri

ಅರಿಷ್ಠವು. 16–6–1992 ರ ನಂತರ ರವಿಯು ಪಂಚಮಕ್ಕೆ ಪ್ರವೇಶಿಸುವನು. ಕ್ರೀಡಾರ್ಥಿಗಳಿಗೆ ಶುಭವು. ಅಸ್ತಮ ರೋಗಿಗಳು ಈ ತಿಂಗಳು ಜಾಗ್ರತರಾಗಿರಬೇಕು. ಅಂಗಾರಕ ದೋಷದಿಂದ ವಿವಾಹ ಆಗತಕ್ಕ ಸ್ತ್ರೀಯರ ವಿವಾಹ ತಡವಾಗಬಹುದು.

ಜುಲ್ಯಾ ತಿಂಗಳು : ಮಧ್ಯಮ ಪ್ರಾಯಸ್ತರಿಗೆ ಹೃದಯಬೇನೆ ಸಂಭವವು. ಕೆಲವರಿಗೆ ಈ ಸಂಬಂಧ ಶಸ್ತ್ರ ಚಿಕಿತ್ಸೆ ಸಂಭವವು. ಕೆಲವರಿಗೆ ಮಾನಸಿಕ ಕ್ಲೇಶವು. 17–7–1992 ರ ನಂತರ ಶುಭವು. ಆಕಸ್ಮಿಕ ಧನಲಾಭವು. ಸಹೋದರರಿಂದ ಧನ ಸಹಾಯವು. ದೂರದ ಸಂಬಂಧಿಕರಿಂದ ಶುಭಸಮಾಚಾರಗಳು ಬರಲಿವೆ.

ಆಗೋಸ್ತು ತಿಂಗಳು : ಪ್ರಾರಂಭದ ದಿನಗಳಲ್ಲಿ ಶುಭವು. ವಿವಾಹ ಸಂಬಂಧ ನೆಂಟಸ್ತಿಕೆಗಳು ಕೂಡಿ ಬರಬಹುದು. ಕೆಲವರಿಗೆ ದೂರದ ಊರುಗಳಿಗೆ ಪ್ರಯಾಣ ಯೋಗದ ಫಲವು. 17–8–1992 ರ ನಂತರ ಅವಿವಾಹಿತ ಸ್ತ್ರೀ ಪುರುಷರಿಗೆ ವಿವಾಹ ಯೋಗದ ಫಲವು. ಕೆಲವರಿಗೆ ಉದ್ಯೋಗದಲ್ಲಿರುವ ಸ್ತ್ರೀಯರೊಡನೆ ವಿವಾಹ ಆಗುವ ಯೋಗದ ಫಲವು.

ಸೆಪ್ಟೆಬರ್ ತಿಂಗಳು : ಕೆಲವರಿಗೆ ಉದ್ಯೋಗ ಸಂಬಂಧ ವಿದೇಶ ಪ್ರಯಾಣ ಯೋಗದ ಫಲವು. ರಾಜಕೀಯ ವ್ಯಕ್ತಿಗಳಿಗೆ ಪ್ರತಿಷ್ಠೆಯು. ಈ ರಾಶಿಯ ಸಿನೆಮ ನಟನಟಿಯರಿಗೆ ಈ ತಿಂಗಳು ಅದೃಷ್ಟದಾಯಕವು. 11–9–1992 ರ ನಂತರ ಗುರುವು ಅಷ್ಟಮಕ್ಕೆ ಪ್ರವೇಶಿಸುವನು. ಅಹಂಕಾರಿಗಳಿಗೆ ಅಶುಭದಾಯವು. ಪತಿ ಯಾ ಪತ್ನಿಯ ಕುಟುಂಬದ ಹಿರಿಯಸ್ತರಿಗೆ ಅರಿಷ್ಠವು. ಕ್ರಿಮಿನಲ್ ಅಪರಾಧಿಗಳಿಗೆ ಈ ತಿಂಗಳು ಉತ್ತರಾರ್ಧ ಅಶುಭವು.

ಅಕ್ಟೋಬರ್ ತಿಂಗಳು : ತಂದೆಗೆ ಕಂಟಕ ಭಯವು. ಆದರೆ ವಕೀಲರಿಗೆ ಈ ತಿಂಗಳು ಅದೃಷ್ಟವು. ಕೆಲವರಿಗೆ ಪ್ರತಿಷ್ಠೆಯು. ಕಿಡ್ನಿ ಸಂಬಂಧ ರೋಗಿಗಳು ಈ ತಿಂಗಳು ಜಾಗ್ರತರಾಗಿರುವುದು ಉತ್ತಮವು. ವಿಮಾನಯಾನಗಳಿಂದ ತೊಂದರೆಯನ್ನು ಅನುಭವಿಸುವಿರಿ. ವ್ಯಾಪಾರದಲ್ಲಿ ಏರುಪೇರು ಉಂಟಾಗಬಹುದು.

ನವೆಂಬರ್ ತಿಂಗಳು : ಈ ತಿಂಗಳ ಪ್ರಾರಂಭದ ದಿನಗಳಲ್ಲಿ ಸರಕಾರಿ ನೌಕರರಿಗೆ ಅದೃಷ್ಟವು. ಕೆಲವರಿಗೆ ಅನಿರೀಕ್ಷಿತ ಧನ ಲಾಭವು. ತೆರಿಗೆ ಇಲಾಖೆಯ ನೌಕರರಿಗೆ ಅದೃಷ್ಟವು. ಕೆಲವು ರಾಜಕಾರಣಿಗಳ ಗುಪ್ತ ವ್ಯವಹಾರಗಳು ಬಯಲಾಗುವುವು. 17–11–1992 ರ ನಂತರ ಶುಭವು. ಸರಕಾರಿ ಅಧಿಕಾರಿಗಳಿಗೆ ಭಡ್ತಿ ಸಂಭವವು. ಕೆಲವರಿಗೆ ವಿದೇಶಗಳಿಂದ ಬಹುಮಾನಗಳು ಬರಬಹುದು.

ದಶಂಬರ ತಿಂಗಳು : ನಾನಾ ಮೂಲಗಳಿಂದ ಧನವೃದ್ಧಿಯು. ವಿವಾಹದ ನಂತರ ಭಾಗ್ಯಾಭಿವೃದ್ಧಿಯು. ಕೆಲವರಿಗೆ ವಿದೇಶ ಪ್ರಯಾಣ ಯೋಗದ ಫಲವು. ವಿಶ್ವವಿದ್ಯಾಲಯಗಳ ಅಧ್ಯಾಪಕರಿಗೆ ಭಡ್ತಿ ಸಂಭವವು.

CC-O. In Public Domain. Digitized by eGangotri

ಮೀನ ರಾಶಿ

ಈ ರಾಶಿಯವರಿಗೆ ಈ ವರ್ಷ ಮಿಶ್ರ ಫಲಗಳು ಬರಲಿವೆ. ಶನಿಯು ಈ ರಾಶಿಯವರಿಗೆ ಲಾಭದಲ್ಲಿದ್ದು ಉತ್ತಮ ಫಲ ಕೊಡುವನು. ಕೈಗಾರಿಕೋದ್ಯಮಿಗಳಿಗೆ, ಮತ್ಸ್ಯ ಸಂಬಂಧ ಉದ್ಯಮದವರಿಗೆ ಅದೃಷ್ಟವು. ಪಾಲುದಾರಿಕೆ ವ್ಯಾಪಾರ ಉತ್ತಮ ರೀತಿಯಲ್ಲಿ ನಡೆಯುವುದು. ಕೆಲವು ಸ್ನೇಹಿತರಿಂದ ಧನ ಸಹಾಯವನ್ನು ಪಡೆಯುವಿರಿ. ಆದರೆ ಗುರು ಈ ರಾಶಿಯವರಿಗೆ ಷಷ್ಠಕ್ಕೆ ಬಂದಿರುವುದರಿಂದ ಅರಿಷ್ಠವು. "ಷಷ್ಠೇಶು ಬಲಿ ಬಂಧನ" ಎಂಬಂತೆ ಮಾತಿನಿಂದ ಸಿಕ್ಕಿ ಬೀಳುವಿರಿ. ಯಾರಿಗೂ ಜಾಮೀನು ನಿಲ್ಲಬೇಡಿ. ಇದರಿಂದ ಸಿಕ್ಕಿ ಬೀಳುವಿರಿ. ಹಿರಿಯ ಮಗನಿಗೆ ಅನಾರೋಗ್ಯ ಬರಬಹುದು. ರಾಹುವು ಈ ರಾಶಿಯವರಿಗೆ ದಶಮ ಸ್ಥಾನದಲ್ಲಿದ್ದು ಗುರುದೃಷ್ಟಿಯಿರುವುದರಿಂದ ಕೋದಂಡ ರಾಹು ದೆಶೆಯಿದ್ದವರಿಗೆ ಆನಾಯಸದ್ರವ್ಯ ಯೋಗವು. ಕೆಲವರಿಗೆ ವಿದೇಶ ಪ್ರಯಾಣ ಯೋಗದ ಫಲವು. ತಂತಿ ಇಲಾಖೆ, ದೂರದರ್ಶನ ಮತ್ತು ದೂರವಾಣಿ ನೌಕರರಿಗೆ ಶುಭವು. ಕೇತುವು ಈ ರಾಶಿಯವರಿಗೆ ಚತುರ್ಥದಲ್ಲಿರುವುದರಿಂದ ಕೈಕೊಂಡ ಕಾರ್ಯಗಳು ಅರ್ಧದಲ್ಲಿಯೇ ನಿಲ್ಲುವುವು. ಮನೆಯ ಕೆಲಸ ಪೂರ್ತಿ ಆಗಲಾರದು. ಎಲ್ಲದಕ್ಕೂ ಶ್ರೀ ಗಣಪತಿ ಸ್ತೋತ್ರ ಮತ್ತು ದತ್ತಾತ್ರೇಯ ಸ್ತೋತ್ರಗಳಿಂದ ಪರಿಹಾರವು. ಈ ರಾಶಿಯವರಿಗೆ ಅದೃಷ್ಟ ಅಂಕೆ:– 9. ಅದೃಷ್ಟದ ಹರಳು:– ಕೆಂಪು ಹವಳ.

ಜನವರಿ ತಿಂಗಳು : 30 ವರ್ಷಗಳಿಂದ ಮೇಲಿನ ಸರಕಾರಿ ಉದ್ಯೋಗಿಗಳಿಗೆ ಭಡ್ತಿ ಸಂಭವವು. ಕೆಲವು ಸರಕಾರಿ ಅಧಿಕಾರಿಗಳಿಗೆ ಪ್ರಯಾಣದಿಂದ ಧನ ಲಾಭವು. ಆದರೆ ತಂದೆಗೆ ರಕ್ತ ಸಂಬಂಧ ಅನಾರೋಗ್ಯ ಉಂಟಾಗಬಹುದು. 15–1–92 ರ ನಂತರ ಉತ್ತಮ ಫಲವು. ತಂದೆಗೆ ನಾನಾ ಮೂಲಗಳಿಂದ ಧನಲಾಭವು. ಪಾಲುದಾರಿಕೆ ವ್ಯಾಪಾರದಿಂದ ಮೋಸ ನಡೆಯುವುದು. ಹಿರಿಯ ಮಗನಿಗೆ ಅನಾರೋಗ್ಯ ಸಂಭವವು.

ಫೆಬ್ರವರಿ ತಿಂಗಳು : ಹೊಸದಾಗಿ ವ್ಯಾಪಾರ ಪ್ರಾರಂಭಿಸಲು ಬ್ಯಾಂಕ್ ಮತ್ತು ಸಹಕಾರಿ ಸಂಘಗಳಿಂದ ಸಾಲ ಸಿಗಬಹುದು. ಕೃಷಿ ಉತ್ಪನ್ನಗಳಿಂದ ಧನಲಾಭವು. 13–2–1992 ರ ನಂತರ ಕೆಲವರಿಗೆ ದೃಷ್ಟಿ ದೋಷವು. ಕೆಲವರಿಗೆ ಉಷ್ಣ ಪ್ರಕೋಪದಿಂದ ಉದರ ಬೇನೆ ಸಂಭವವು.

ಮಾರ್ಚ್ ತಿಂಗಳು : ನೇತ್ರ ದೋಷ ಆಧಿಕ ಇದ್ದವರಿಗೆ ಶಸ್ತ್ರ ಚಿಕಿತ್ಸೆ ಸಂಭವವು. ದೂರದ ಊರುಗಳಲ್ಲಿರುವ ಸಹೋದರರಿಗೆ ಅರಿಷ್ಠವು. ಹಿರಿಯ ಮಗನಿಗೆ ಸರಕಾರಿ ಕ್ಷೇತ್ರದಲ್ಲಿ ಉದ್ಯೋಗ ಲಭ್ಯವು. 15–3–92 ರ ನಂತರ ರವಿಯು ಜನ್ಮಕ್ಕೆ ಬಂದಿರುವುದರಿಂದ ಶಾರೀರಿಕ ಅನಾರೋಗ್ಯವು. ಕೆಲವರಿಗೆ ಪಿತ್ತ ದೋಷವು.

ಏಪ್ರಿಲ್ ತಿಂಗಳು : ಅನಾರೋಗ್ಯ ನಿಮಿತ್ತ ಖರ್ಚುಗಳ ಪ್ರಸಂಗ ಒದಗಿ ಬರಬಹುದು. 60 ವರ್ಷಗಳಿಗಿಂತ ಮೇಲಿನ ವೃದ್ಧನು ನವಗ್ರಹ ಶಾಂತಿ ಮಾಡಿಸುವುದು ಉತ್ತಮವು. 14–4–

Sri Vidyabharathi Book Centre, Sringeri

CC-O. In Public Domain. Digitized by eGangotri

92ರ ನಂತರ ರವಿಯು ದ್ವಿತೀಯದಲ್ಲಿರುವುದರಿಂದ ಕಣ್ಣಿಗೆ ಸಂಬಂಧಪಟ್ಟ ನೋವು ಉಂಟಾಗಬಹುದು. ಕಲೆ ವಿಭಾಗದ ವಿದ್ಯಾರ್ಥಿಗಳಿಗೆ ಶುಭವು.

ಮೇ ತಿಂಗಳು : ಕೆಲವರಿಗೆ ಕುಟುಂಬದಿಂದ ದೂರವಾಗುವ ಸಂದರ್ಭ ಒದಗಿ ಬರಬಹುದು. ಮೂತ್ರ ಸಂಬಂಧ ರೋಗಿಗಳು ಜಾಗ್ರತರಾಗಿರುವುದು ಉತ್ತಮವು. 15–5–1992 ರ ನಂತರ ಶುಭವು. ಟ್ರಾನ್ಸ್ ಪೋರ್ಟ್ ಶಿಪ್ಪಿಂಗ್ ಕ್ಷೇತ್ರಗಳಲ್ಲಿ ಧನವೃದ್ಧಿಯು. ಸಹೋದರರಿಗೆ ಉದ್ಯೋಗ ಲಭ್ಯತೆಯು. ದಕ್ಷಿಣ ದಿಕ್ಕಿನ ಪ್ರಯಾಣದಿಂದ ಶುಭವು.

ಜೂನ್ ತಿಂಗಳು : ನೃತ್ಯ, ಸಂಗೀತ ಕಲೆಗಳಲ್ಲಿ ಆಸಕ್ತಿಯಿರುವ ಸ್ತ್ರೀ ವಿದ್ಯಾರ್ಥಿಗಳಿಗೆ ಪ್ರತಿಷ್ಠೆಯು. ಸರಕಾರಿ ಕ್ಷೇತ್ರಗಳಲ್ಲಿ ನೌಕರರಿಗೆ ಭಡ್ತಿ ಸಂಭವವು. ಕೆಲವರಿಗೆ ಸ್ವಂತ ಮನೆಯನ್ನು ಹೊಂದುವ ಯೋಗದ ಫಲವು. ಆದರೆ ತಾಯಿಯ ಆನಾರೋಗ್ಯ ನಿಮಿತ್ತ ಧನವ್ಯಯವು.

ಜುಲ್ಯಾ ತಿಂಗಳು : ಈ ತಿಂಗಳು ಕೆಲವರಿಗೆ ಮಾನಸಿಕ ಕ್ಲೇಶವು. ನೀರಿನಿಂದ ಕಂಟಕ ಭಯವು. ಮನೋರೋಗಿಗಳು ಈ ತಿಂಗಳು ಜಾಗ್ರತೆಯಿರುವುದು ಉತ್ತಮವು. ಮಧ್ಯಮ ಪ್ರಾಯಸ್ತರಿಗೆ ಹೃದಯಬೇನೆ ಸಂಭವವು. ಕೆಲವು ಗೋಮುಖ ವ್ಯಾಘ್ರ ಸ್ನೇಹಿತರಿಂದ ಮೋಸ ಹೋಗುವಿಕೆ ಜಾಗ್ರತೆಯು. ಸರಕಾರಿ ಅಧಿಕಾರಿ ಮತ್ತು ಸ್ತ್ರೀ ಉದ್ಯೋಗಿಗಳು ಈ ತಿಂಗಳು ಜಾಗ್ರತೆಯಿರಬೇಕು. ಕೆಲವು ಸ್ತ್ರೀಯರು ಪ್ರಿಯತಮನಿಂದ ಮೋಸ ಹೋಗುವರು.

ಆಗೋಸ್ತು ತಿಂಗಳು : ಪ್ರಾರಂಭದ ದಿನಗಳಲ್ಲಿ ಎಸಿಡಿಟಿ ದೋಷದಿಂದ ಉದರಬೇನೆ ಸಂಭವವು. ಹಿರಿಯಣ್ಣನಿಂದ ಧನ ಸಹಾಯ ಲಭ್ಯವು. ಉದ್ಯೋಗದಲ್ಲಿ ಕೆಲವರಿಗೆ ಬದಲಾವಣೆ ಸಂಭವವು. 17–8–1992 ರ ನಂತರ ವೈದ್ಯಕೀಯ ವಿಭಾಗದವರಿಗೆ ಅದೃಷ್ಟವು. ಇವರಿಗೆ ನಾನಾ ಮೂಲಗಳಿಂದ ಧನಲಾಭವು. ಕೆಲವರಿಗೆ ಹೊಸದಾಗಿ ಆಸ್ಪತ್ರೆಗಳನ್ನು ಪ್ರಾರಂಭಿಸುವ ಯೋಗದ ಫಲವು.

ಸೆಪ್ಟೆಂಬರ್ ತಿಂಗಳು : ಈ ತಿಂಗಳು ಪ್ರಾರಂಭದ ದಿನಗಳಲ್ಲಿ ಕೆಲವರಿಗೆ ಚರ್ಮರೋಗದ ಭಯವು. 11–9–1992 ರ ನಂತರ ಗುರುವು ಸಪ್ತಮ ರಾಶಿಗೆ ಪ್ರವೇಶಿಸಿರುವುದರಿಂದ ಗುರುಬಲ ಬರಲಿದೆ. ಇದರಿಂದ ಅವಿವಾಹಿತ ಸ್ತ್ರೀ ಪುರುಷರಿಗೆ ವಿವಾಹ ಯೋಗದ ಫಲವು. ವಿದೇಶಿ ಮೂಲ ವಸ್ತುಗಳಿಂದ ಧನಲಾಭವು. ಪದವೀಧರ ನಿರುದ್ಯೋಗಿಗಳು IAS, IPS ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಬಹುದು. ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಶುಭವು.

ಅಕ್ಟೋಬರ್ ತಿಂಗಳು : ಪ್ರಾರಂಭದ ದಿನಗಳಲ್ಲಿ ವ್ಯಾಪಾರಸ್ತರಿಗೆ ಉತ್ತಮ ಫಲವು. ಆದರೆ 17–10–92 ರ ನಂತರ ತಂದೆಗೆ ಕಂಟಕ ಭಯವು. ಕೆಲವರಿಗೆ ಕ್ರಿಮಿನಲ್ ವಿಷಯಗಳಲ್ಲಿ ಬಂಧನ ಯೋಗದ ಫಲವು. ರಾಜಕೀಯ ವ್ಯಕ್ತಿಗಳಿಗೆ ಅಶುಭವು. ಸಾಲಗಾರರಿಗೆ ಒತ್ತಡಬರಬಹುದು.

CC-O. In Public Domain. Digitized by eGangotri

ನವೆಂಬರ್ ತಿಂಗಳು : ಮಕ್ಕಳ ಕೆಲವು ಕೆಟ್ಟ ಕಾರ್ಯಗಳಿಗೆ ತಂದೆಯು ಜವಾಬ್ದಾರಿತ ಹೊರುವ ಪ್ರಸಂಗ ಬರಬಹುದು. ವಿದೇಶಗಳಲ್ಲಿರುವವರಿಗೆ ಅರಿಷ್ಟವು. 17–11–1992 ರ ನಂತರ ಕೆಲವರಿಗೆ ಗುಪ್ತ ವ್ಯವಹಾರಗಳಿಂದ ಧನಲಾಭವು. ದೂರದ ವಿದೇಶಿ ವ್ಯಕ್ತಿಯಿಂದ ಧನಸಹಾಯ ಸಿಗಬಹುದು. ಈ ಸಂಬಂಧ ಕೆಲವರಿಗೆ ವಿದೇಶ ಪ್ರಯಾಣ ಯೋಗದ ಫಲವು.

ದಶಂಬರ್ ತಿಂಗಳು : ಸರಕಾರಿ ಇಲಾಖೆಯ ಅಧಿಕಾರಿಗಳಿಗೆ ಜವಾಬ್ದಾರಿ ಹೆಚ್ಚುವ. ನಿಷ್ಠಾವಂತ ಅಧಿಕಾರಿಗಳಿಗೆ ಸರಕಾರದಿಂದ ಪ್ರಶಂಸೆಯು. ಕೆಲವು ಸರಕಾರಿ ಅಧಿಕಾರಿಗಳಿಗೆ ಸರಕಾರದಿಂದ ಪ್ರಶಂಸೆಯು. ಕೆಲವು ಸರಕಾರಿ ಅಧಿಕಾರಿಗಳಿಗೆ ವಿದೇಶ ಪ್ರಯಾಣ ಯೋಗದ ಫಲವು. ಈ ರಾಶಿಯ ರಾಜಕಾರಣಿಗಳಿಗೆ ಈ ತಿಂಗಳು ಶುಭವು. ನಿಷ್ಠಾವಂತ ಸರಕಾರಿ ಅಧಿಕಾರಿಗಳಿಗೆ ಸೇವೆಯ ಅವಧಿ ವೃದ್ಧಿಗೊಳ್ಳಬಹುದು. ಸಮಾಜ ಕಾರ್ಯಕರ್ತರಿಗೆ ಪುರಸ್ಕಾರಗಳು ದೊರೆಯಬಹುದು.

— ಸಂಪೂರ್ಣ —

ಮುದ್ರಕರು: ಸಿಟಿ ಪ್ರೆಸ್, ಮಂಗಳೂರು
ರಕ್ಷಾಪುಟ: ಶಾರದಾ ಪ್ರೆಸ್, ಮಂಗಳೂರು

Sri Vidyabharathi Book Centre, Sringeri

CC-O. In Public Domain. Digitized by eGangotri

ನಮ್ಮ ಪ್ರಕಾಶನದ ಪ್ರಕಟಣೆಗಳು

ಪುರಂದರದಾಸರ ಕೀರ್ತನೆಗಳು (ದೊಡ್ಡದು)	10.00
ಶ್ರೀ ಕನಕದಾಸರ ಕೀರ್ತನೆಗಳು / ಭಕ್ತ ಪುರಂದರದಾಸರ ಕೀರ್ತನೆಗಳು	6.00
ಶೋಭಾನೆ ಹಾಡುಗಳು	5.00
ದೃಷ್ಟಿ ಶೋಭಾನೆ ಹಾಡು / ಮಂಗಳಗೌರಿ ಹಾಡು	2.00
ಶೋಭಾನೆ ರತ್ನಾವಳಿ	3.00
ದೇವೀ ಭಜನೆ	6.00
ಹರಿ ಭಜನೆ ಪುಸ್ತಕ / ಹರಿ ಭಕ್ತಿ ಸಾರ / ವೆಂಕಟೇಶ ಸುಪ್ರಭಾತಂ	2.00
ಯಕ್ಷಗಾನ, ಪಂಚವಟಿ ರಾಮಾಯಣ (ಅರ್ಥ ಸಹಿತ)	5.00
" ಚೂಡಾಮಣಿ ಪ್ರಸಂಗ-ಅಂಗದ ಸಂಧಾನ	3.00
" ಭೀಷ್ಮವಿಜಯ	6.00
" ರತಿ ಕಲ್ಯಾಣ/ಕೇಕಯ ನಂದಿನಿ	4.00
" ಕೃಪಾರ್ಜುನ ಕಾಳಗ	3.50
" ಶಿವಪಂಚಾಕ್ಷರಿ ಮಹಿಮೆ (ಶ್ವೇತಕುಮಾರ ಚರಿತ್ರೆ)	4.00
" ವಿದ್ಯುನ್ಮತಿ ಕಲ್ಯಾಣ/ಗಾಂಧಾರಿ	4.00
" ಗೋಣತಂಕರೆ (ತುಳು)/ಪಟ್ಟದ ಪೆರುಮಳೆ	4.00
ಪಂಚವಟಿ ಪಾಲಿ-ಸುಗ್ರೀವ ಕಾಳಗ	4.00
ಇಂದ್ರಜಿತು ಕಾಳಗ	3.00
ಕುಕ್ಕುಟ ಪಂಚಾಂಗ	2.50
ಕನ್ನಡ-ಮಲಯಾಳಂ ಶಿಕ್ಷಕ	7.00
ಕನ್ನಡ-ತಮಿಳು ಶಿಕ್ಷಕ	6.00
ತುಳು ತೆರಿಲೆ	8.00
ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ	5.00
ಇಂಗ್ಲಿಷ್ ಕಲಿಯಿರಿ	10.00
ಹೊಸ ಕನ್ನಡ ಚಿತ್ರಗೀತೆಗಳು (ಪಾಕೆಟ್ ಸೈಜು)	4.00
ಹೊಸ ತುಳು ಚಿತ್ರಗೀತೆಗಳು	6.00
ಸಿನೆಮಾ ಪದ ಧಾಟಿದ ತುಳುಪದತ ಮಾಲೆ	3.00
ತುಳು ಭಕ್ತಿಗೀತೆಗಳು	5.00
ಕನ್ನಡ ಧ್ವನಿಮುದ್ರಿಕೆಗಳ ಭಕ್ತಿಗೀತೆಗಳು	10.00
ಹೊಸ ಕನ್ನಡ ಚಿತ್ರಗೀತೆಗಳು (ದೊಡ್ಡದು)	12.00
ಕನ್ನಡ ಚಿತ್ರಗಳ ಭಕ್ತಿಗೀತೆಗಳು	10.00
ಶ್ರೀ ರಾಜರಾಜೇಶ್ವರೀ ತುಳು ಭಜನಾವಳಿ	5.00
ಶ್ರೀ ರಾಘವೇಂದ್ರ ಸುಪ್ರಭಾತಮ್	2.00
ನಿಮ್ಮ ವರ್ಷ ಭವಿಷ್ಯ (12 ರಾಶಿಗಳು)	6.00

ವಿ.ಸೂ.: ಉಚಿತ ಕ್ರಯ ಪಟ್ಟಿಗಾಗಿ 100 ಪೈಸೆ ಅಂಚೆ ಚೀಟಿಯೊಂದಿಗೆ ಪ್ರಕಾಶಕರಿಗೆ ಬರೆಯಿರಿ. ಹೊಸ ಮುದ್ರಣಗಳಿಗೆ ಬೆಲೆ ಬದಲಾವಣೆ ಇರುವುದರಿಂದ ಮುಂಚಿತವಾಗಿ ಬರೆದುಕೊಂಡು ವ್ಯವಹರಿಸಿರಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಮ್ಮ ವರ್ಷ ಭವಿಷ್ಯ 1992

ಪ್ರಯಾಣಕ್ಕೆ,
ಒಳ್ಳೆಯ ಕೆಲಸಕಾರ್ಯಗಳಿಗೆ
ಶುಭದಿನಗಳು, ರಾಹುಕಾಲ, ಗುಳಿಕಕಾಲ ಹಾಗೂ ಗೌಳಿ(ಹಲ್ಲಿ)ಪತನ-
ಫಲ, ಸ್ವಪ್ನದ ಶುಭಾಶುಭ ಫಲಗಳು ಸ್ವಯಂ ಜನ್ಮರಾಶಿಯನ್ನು
ತಿಳಿದು ಕೊಳ್ಳಲು ಅತ್ಯಂತ ಉಪಯುಕ್ತವಾಗಿದೆ



Sri Vidyabharathi Book Centre, Sringeri